
ಗೌರಿ ಲಂಕೇಶರ

ಲಂಕೇಶ್

ಏಪ್ರಿಲ್ 19, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



'ಲಂಕೇಶ್'ಗೆ ದೊರೆತ ಟೇಪ್ ಸಂಭಾಷಣೆ!

ಲೋಕಾಯುಕ್ತದಲ್ಲೇ

ಸ್ಕೂಪ್

ಭ್ರಷ್ಟ ಅಧಿಕಾರಿಗಳು

ಂಗಳೂರು ವಿ.ವಿ: ಜಾತಿ ಶಿಕಾರಿ-ನಾನಾ ದಾರಿ




ಶಿವಮೊಗ್ಗ

ದಲಿತ ಮಹಿಳೆಗೆ 'ಬಂ' ವಂಚನೆ



ಗಳೂರು ರಿಯಲ್ ಎಸ್ಟೇಟ್ ಏಜಂಟರ ಸರಣಿ ಕೊಲೆ!

ಒಂದು ಗ್ಲಾಸ್ ಜ್ಯೂಸ್ ಮತ್ತು ನರ್ಮದಾ ಕಣಿವೆಯ ಆಕ್ರಂದನ



ನರ್ಮದಾ ನದಿಗೆ ಕಟ್ಟುತ್ತಿರುವ ಸರ್ದಾರ್ ಸರೋವರ ಅಣೆಕಟ್ಟಿನಿಂದ ಲಕ್ಷಾಂತರ ಆದಿವಾಸಿಗಳು ನಿರ್ವಸಿತರಾಗಿದ್ದಾರೆ. ಕಳೆದ 10 ವರ್ಷಗಳಿಂದ ಅವರಲ್ಲಿ ಶೇ.30 ಜನಕ್ಕೂ ಪರಿಹಾರ ಮತ್ತು ಪುನರ್ವಸತಿ ಸಿಕ್ಕಿಲ್ಲ. ಇಡಿ ಯೋಜನೆಯೇ ಅವೈಜ್ಞಾನಿಕವಾಗಿದೆ. ಗುಜರಾತಿನ ಹಲವು ಸಾವಿರ ಶ್ರೀಮಂತ ರೈತರನ್ನು ಹಾಗೂ ಈ ಯೋಜನೆಯ ಗುತ್ತಿಗೆ ಪಡೆದಿರುವ ದೊಡ್ಡ ಕಾಂಟ್ರಾಕ್ಟರ್‌ಗಳನ್ನು ಬಿಟ್ಟರೆ ಇನ್ಯಾರಿಗೂ ಈ ಯೋಜನೆಯಿಂದ ಲಾಭವಿಲ್ಲ.

ಆದರೆ ನಷ್ಟ? ಈಗಾಗಲೇ 5 ಲಕ್ಷಕ್ಕೂ ಹೆಚ್ಚು ಆದಿವಾಸಿಗಳನ್ನು ಮಹಾರಾಷ್ಟ್ರ, ಮಧ್ಯ ಪ್ರದೇಶ ಮತ್ತು ಗುಜರಾತ್ ಸರ್ಕಾರಗಳು ಎತ್ತಂಗಡಿ ಮಾಡಿ ಅವರ ಜೀವನವನ್ನೇ ಬೀದಿ ಪಾಲು ಮಾಡಿದ್ದಾಗಿದೆ. ಈ ಅಣೆಕಟ್ಟಿನ ಎತ್ತರವನ್ನು ಪ್ರತಿ ಮೀಟರ್ ಹೆಚ್ಚಿಸಿದಾಗ ಕನಿಷ್ಠ ಒಂದು ಸಾವಿರ ಹಳ್ಳಿಗಳು ಮುಳುಗಡೆಯಾಗಿ ಹಲವು ಸಾವಿರ ಆದಿವಾಸಿಗಳು ಬೀದಿ ಪಾಲಾಗುತ್ತಾರೆಂದು ಸರ್ಕಾರಿ ಅಧಿಕಾರಿಗಳೇ ಒಪ್ಪಿಕೊಂಡಿದ್ದಾರೆ. ಈಗ ಹೆಚ್ಚಿಸುತ್ತಿರುವ ಎತ್ತರದಿಂದ ಕನಿಷ್ಠ 35,000 ಜನ ಬೀದಿ ಪಾಲಾಗಲಿದ್ದಾರೆ! ಆದ್ದರಿಂದಲೇ ಸುಪ್ರೀಂ ಕೋರ್ಟು ಸಹಾ ಎಲ್ಲಿಯವರೆಗೆ ಈಗಾಗಲೇ ನಿರ್ವಸಿತರಾಗಿರುವ ಆದಿವಾಸಿಗಳಿಗೆ ಸೂಕ್ತ ಪುನರ್ವಸತಿ ಒದಗಿಸುವುದಿಲ್ಲವೋ ಅಲ್ಲಿಯವರೆಗೆ ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸಬಾರದೆಂದು ಆದೇಶಿಸಿದೆ. ಆದರೂ ಸರ್ಕಾರ ಆ ಆದೇಶಗಳನ್ನು ಉಲ್ಲಂಘಿಸಿ ಅಣೆಕಟ್ಟಿನ ಎತ್ತರವನ್ನು ಇನ್ನಷ್ಟು ಹೆಚ್ಚಿಸಲು ಹೊರಟಿದೆ.

ಈ ಅನ್ಯಾಯವನ್ನು ದೆಹಲಿ ದೊರೆಗಳ ಗಮನಕ್ಕೆ ತರಲು ನರ್ಮದಾ ಬಚಾವ್ ಆಂದೋಲನದ ಕಾರ್ಯಕರ್ತರು ದೆಹಲಿಯಲ್ಲಿ ಅಹಿಂಸಾತ್ಮಕವಾದ ಧರಣಿ ಕೂತಿದ್ದಾರೆ. ಅದರ ನಾಯಕಿ ಮೇಧಾ ಪಾಟ್ಕರ್ 10 ದಿನಗಳಿಂದ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದಾರೆ. ಉಪವಾಸ ಕುಳಿತಿದ್ದ ಮೇಧಾರವರ ಆರೋಗ್ಯ ದಿನೇದಿನೇ ಕ್ಷೀಣಿಸಲಾರಂಭಿಸಿದಾಗ ಪ್ರಧಾನಿ ಮನಮೋಹನ್ ಸಿಂಗ್‌ರವರು ನೀರಾವರಿ ಮಂತ್ರಿ ಸೈಫುದ್ದೀನ್ ಸೋಜ್‌ರವರನ್ನು ಮೇಧಾರವರ ಬಳಿ ಕಳಿಸಿದರು. ಇವರೊಡನೆ ಪ್ರಧಾನಿಗಳು ಮೇಧಾರವರಿಗೆ ಉಪವಾಸ ನಿಲ್ಲಿಸಲು ಮನವಿಯನ್ನು ಮತ್ತು ಒಂದು ಗ್ಲಾಸ್ ಹಣ್ಣಿನ ರಸವನ್ನು ಕಳಿಸಿದ್ದರಂತೆ. ಮೇಧಾ ಈ ಖಾಜಿ ನ್ಯಾಯವನ್ನು ಹಾಗೂ ಹಣ್ಣಿನ ರಸವನ್ನು ತಿರಸ್ಕರಿಸಿದರಂತೆ.

ಏಕೆಂದರೆ ಪ್ರಧಾನಿಯವರು ಕಳಿಸಿದ್ದ ಗ್ಲಾಸಿನಲ್ಲಿ ಹಣ್ಣಿನ ರಸವಿದ್ದದ್ದು ಮಾತ್ರ ನಿಜ. ಅದು ಮೇಧಾರ ಉಪವಾಸ ನೀಗಲು ಸಾಕಾಗುತ್ತಿತ್ತೆಂಬುದೂ ನಿಜ. ಆದರೆ 5 ಲಕ್ಷ ಆದಿವಾಸಿಗಳ ಹಸಿವನ್ನು ಒಂದು ಗ್ಲಾಸ್ ಹಣ್ಣಿನ ರಸ ನೀಗಲು ಸಾಧ್ಯವೇ? ಇಲ್ಲ. ಏಕೆಂದರೆ ಈ ಹಣ್ಣಿನ ರಸವನ್ನು ಬಿಟ್ಟರೆ ಸೈಫುದ್ದೀನ್ ಸೋಜ್ ಜೊತೆ ಪ್ರಧಾನಿ ಕಳಿಸಿದ್ದೆಲ್ಲಾ ಪುಗಸಟ್ಟೆ ಭರವಸೆಗಳು ಮಾತ್ರ.

ಪ್ರಧಾನಿಯ ಹಣ್ಣಿನ ರಸವನ್ನು ತಿರಸ್ಕರಿಸಿದ್ದರಿಂದ ದೆಹಲಿ ಸರ್ಕಾರ ಮೇಧಾರವರನ್ನು ಬಂಧಿಸಿದ್ದಲ್ಲದೆ ಅವರ ಬೆಂಬಲಿಗರನ್ನು ರಾತ್ರೋ ರಾತ್ರಿ ಲಾಠಿ ಚಾರ್ಜ್ ಮಾಡಿ ಓಡಿಸಲು ಯತ್ನಿಸಿದೆ.

ಒಂದು ಅತ್ಯಂತ ಅಹಿಂಸಾತ್ಮಕ, ಜನಪ್ರಿಯ ಮತ್ತು ಅಪಾರ ಜನಬೆಂಬಲ ಪಡೆದಿದ್ದ ಚಳವಳಿಯ ಬಗ್ಗೆಯೇ ಸರ್ಕಾರ ಇಷ್ಟು ಕ್ರೂರವಾಗಿ ವರ್ತಿಸಬಹುದಾದರೆ ಉಳಿದ ಇಷ್ಟು ಪ್ರಖ್ಯಾತವಲ್ಲದ ಮತ್ತು ಇಷ್ಟು ಪ್ರಖ್ಯಾತ ನಾಯಕರನ್ನು ಹೊಂದಿರದ ಚಳವಳಿಗಳ ಪಾಡೇನು?

ಇದಕ್ಕೆ ಉತ್ತಮ ಉದಾಹರಣೆ ಮೇಧಾ ಪಾಟ್ಕರ್‌ರವರ ಧರಣಿ ನಡೆದ ಜಾಗದ ಮುಂದೆಯೇ ನಡೆದಿದ್ದ ಭೋಪಾಲ್ ಗ್ಯಾಸ್ ಸಂತ್ರಸ್ತರ ಧರಣಿ! ಭೋಪಾಲ್ ಗ್ಯಾಸ್ ದುರಂತದಿಂದ ಸಂತ್ರಸ್ತರಾದ ತಮಗೆ ಪರಿಹಾರದ ವಿತರಣೆಯಲ್ಲಾಗಿರುವ ಅನ್ಯಾಯದ ಬಗ್ಗೆ ದೆಹಲಿಗೆ ದೂರು ಹೇಳಲು ಕಾಲ್ನಡಿಗೆಯಲ್ಲಿ ನೂರಾರು ಜನರು ಬಂದಿದ್ದರು. ಅಷ್ಟೇ ಅಲ್ಲ, ಎನ್.ಬಿ.ಎ. ಧರಣಿಯ ಎದುರಿಗೇ ಅವರೆಲ್ಲ ಧರಣಿ ಕೂತಿದ್ದರು.

ಆದರೆ ಅವರ ಬೆಂಬಲಕ್ಕೆ ದೊಡ್ಡ ಜನಗಳಿರಲಿಲ್ಲ, ಮೇಧಾ ಪಾಟ್ಕರ್‌ರಂತ ನಾಯಕರಿರಲಿಲ್ಲ. ಆದ್ದರಿಂದ ಅವರಿಗೆ ಹಣ್ಣಿನ ರಸವೂ ಸಿಕ್ಕಲಿಲ್ಲ, ಯಾವ ಮಂತ್ರಿಗಳು ನೋಡಲೂ ಬರಲಿಲ್ಲ.


ಈಗ ಎತ್ತಂಗಡಿಯ ತೂಗುಕತ್ತಿಯನ್ನು, ಜೀವನ್ಮರಣದ ಪ್ರಶ್ನೆಯನ್ನು ಎದುರಿಸುತ್ತಿರುವ ನರ್ಮದಾ ಆದಿವಾಸಿಗಳ ಹೋರಾಟಕ್ಕೆ ಮುಂದಿನ ದಾರಿಯೇನು? ಕಂಫರ್ಟ್ ಝೋನುಗಳಲ್ಲಿ ಕೂತುಕೊಂಡು ನೊಂದ ಹಾಗೂ ಶೋಷಿತ ಜನತೆಗೆ ಹೋರಾಟ ಮಾರ್ಗಗಳ ಬಗ್ಗೆ ನೈತಿಕ ಪಾಠ ಹೇಳುವ ಪಂಡಿತೋತ್ತಮರು ಉತ್ತರ ಹೇಳಬೇಕು.

ಚಾರ್ವಾಕ

- ಶಿವಸುಂದರ್-

CET ಮಸೂದೆಯೆಂಬ ಮೋಸ:

CET ಸಮಸ್ಯೆ ಬಗೆಹರಿಸಲು ಬಿ.ಜೆ.ಪಿ-ದಳ ಸರ್ಕಾರ ಹೊಸ ಮಸೂದೆಯೊಂದನ್ನು ಶಾಸನ ಸಭೆಯಲ್ಲಿ ಮಂಡಿಸಿದೆ. ಉನ್ನತ ಶಿಕ್ಷಣ ಮಂತ್ರಿ ಡಿ. ಎಚ್. ಶಂಕರಮೂರ್ತಿಗಳಂತೂ ವೃತ್ತಿ ಶಿಕ್ಷಣದಲ್ಲಿ ಬಡವರಿಗೆ, ದಲಿತರಿಗೆ, ಹಿಂದುಳಿದ ವರ್ಗಗಳಿಗೆ ಮತ್ತು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಬೇಕೆಂದರೆ ಅವರಿಗೆ ಶೇ.50ರಷ್ಟು ಮೀಸಲಾತಿ ಕಲ್ಪಿಸಬೇಕೆಂದೂ, ಈ ಮಸೂದೆಗೆ ಎಲ್ಲಾ ಪಕ್ಷಗಳೂ ಬೆಂಬಲಿಸಲೇಬೇಕೆಂದೂ ಭಾಷಣ ಮಾಡಿದ್ದಾರೆ. ಹಾಗೆ ಮಾಡುವ ಮೂಲಕ, ಒಂದೆಡೆ ತಮ್ಮ ಸರ್ಕಾರ ಬಡವರ ಪರ ಎಂದೂ, ಈ ಮಸೂದೆಯನ್ನು ವಿರೋಧಿಸಿದರೆ ವಿರೋಧ ಪಕ್ಷಗಳೇ ಜನವಿರೋಧಿಗಳೆಂದೂ ಅಭಿಪ್ರಾಯ ಬರುವಂತೆ ಮಾಡಿ ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಹೊಡೆಯುವ ಕೆಲಸ ಮಾಡಿದ್ದಾರೆ.



ಆದರೆ ವಾಸ್ತವವೇನೆಂದರೆ ಜನ ಪರವಾದ ಯಾವುದೇ ಮಸೂದೆ ಮಾಡಿದರೂ ಅವು ಸುಪ್ರೀಂ ಕೋರ್ಟಿನಲ್ಲಿ ನಿಲ್ಲುವುದಿಲ್ಲ. ಏಕೆಂದರೆ ಹೋದ ವರ್ಷ ಈ ನಿಟ್ಟಿನಲ್ಲಿ ಬಂದ ಸುಪ್ರಿಂ ಕೋರ್ಟಿನ ಆದೇಶದಂತೆ ಖಾಸಗಿ ಶಿಕ್ಷಣ ಸಂಸ್ಥೆಗಳು ಸೀಟನ್ನು ಮಾರಿ ಲಾಭ ಮಾಡಬಹುದು. ಅದು ಅವರ ಹಕ್ಕಂತೆ. ಸರ್ಕಾರ ಇದರಲ್ಲಿ ಮಧ್ಯ ಪ್ರವೇಶಿಸುವಂತಿಲ್ಲವೆಂದು ಹೇಳಿದೆ. ಆದರೆ ಸರ್ಕಾರ ಖಾಸಗಿ ಸಂಸ್ಥೆಗಳೊಂದಿಗೆ ಬೇಕಿದ್ದಲ್ಲಿ ಮಾತುಕತೆಯಾಡಿ ಪರಸ್ಪರ ಒಪ್ಪಿಗೆಯಿಂದ ಮಾರ್ಪಾಡುಗಳನ್ನು ಮಾಡಿಕೊಳ್ಳಲು ಮಾತ್ರ ಅವಕಾಶ ನೀಡಿದೆ. ಈ ಜನವಿರೋಧಿ ನ್ಯಾಯಾದೇಶ ರದ್ದಾಗಲು ಖಾಸಗಿ ವೃತ್ತಿಶಿಕ್ಷಣ ಸಂಸ್ಥೆಗಳ ಬಗ್ಗೆ ಸಂಸತ್ತಿನಲ್ಲೇ ಮೂರನೇ ಎರಡರಷ್ಟು ಬಹುಮತದಿಂದ ಕಾಯಿದೆಯೊಂದನ್ನು ಪಾಸು ಮಾಡಬೇಕಾಗುತ್ತದೆ. ಅಷ್ಟು ಮಾತ್ರವಲ್ಲ, ಸರ್ಕಾರ ಬಡವರ ಶುಲ್ಕದ ಹಳೆಯ ಬಾಬತ್ತು 62 ಕೋಟಿ ರೂಪಾಯಿಗಳನ್ನೇ ಇನ್ನೂ ಕೊಟ್ಟಿಲ್ಲ. ಅದನ್ನು ನೀಡದೇ ಈ ಬಾರಿ ಸರ್ಕಾರಿ ಕೋಟಾದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ಮಾತೇ ಇಲ್ಲವೆಂದು ಕಾಮೆಡ್ ಪ್ರಭುಗಳು ಹೇಳಿದ್ದಾರೆ. ಅಲ್ಲದೆ ಈ ಬಾರಿಯ ಬಜೆಟ್ಟಿನಲ್ಲೂ ಈ ಹಳೆಯ ಬಾಕಿಗೆ ಸರ್ಕಾರ ಒಂದು ಪೈಸೆಯನ್ನೂ ತೆಗೆದಿಟ್ಟಿಲ್ಲ.

ಸರ್ಕಾರಕ್ಕೆ ಹಾಗೂ ಶಂಕರಮೂರ್ತಿಗೆ ಇದು ಗೊತ್ತಿಲ್ಲವೆಂದೇನೂ ಅಲ್ಲ. ಹೇಗಿದ್ದರೂ ಖಾಸಗಿ ಸಂಸ್ಥೆಗಳು ಈ ಮಸೂದೆಯ ವಿರುದ್ಧ ಕೋರ್ಟಿಗೆ ಹೋಗುತ್ತವೆ. ಅಲ್ಲಿ ಈ ಮಸೂದೆ ಬೀಳುತ್ತದೆ. ಅಲ್ಲಿಯ ತನಕ ತಮ್ಮ ಸರ್ಕಾರ ಜನಪರ ಎಂದು ಪ್ರಚಾರ ಮಾಡಬಹುದಲ್ಲ..! ಇದು ಸಮ್ಮಿಶ್ರ ಸರ್ಕಾರದ ಪರಿಶುದ್ಧ ಮೋಸದ ಕಥೆ.

ಅಮೆರಿಕದ ರೈತರು ವಿಶ್ವಕ್ಕೇ ಬೇಕಾಗುವಷ್ಟು ಆಹಾರ ಉತ್ಪಾದನೆ ಮಾಡುತ್ತಾರೆ. ಹಾಗೂ ಅದೇ ರೀತಿ ಅಮೆರಿಕ ಸರ್ಕಾರ ವಿಶ್ವದ ಬಡ ರಾಷ್ಟ್ರಗಳಿಗೆಲ್ಲಾ ಆಹಾರ ಸರಬರಾಜು ಮಾಡುತ್ತಾ ದೊಡ್ಡ ದಯಾಪರ ರಾಷ್ಟ್ರವೆಂದು ಕೊಚ್ಚಿಕೊಳ್ಳುತ್ತದೆ. ಆದರೆ ಅಸಲಿ ವಿಚಾರವೇನೆಂದರೆ ಅಮೆರಿಕ ವಿಶ್ವಕ್ಕೆ ನೀಡುವ ಪ್ರತಿ ಆಹಾರ ಧಾನ್ಯ ಸಹಕಾರದ ಹಿಂದೆ ಅಮೆರಿಕದ ಸಾಮ್ರಾಜ್ಯಶಾಹಿ ಹಿತಾಸಕ್ತಿಯೂ ಇದೆಯೆಂದು ಸಾಬೀತಾಗಿದೆ. ವಾಸ್ತವವಾಗಿ ಅಮೆರಿಕದ ಆಹಾರ ಸಹಕಾರವನ್ನು ಅದರ ವಿದೇಶಾಂಗ ನೀತಿಯ ಮುಂದುವರೆದ ಭಾಗವೆಂದೇ ಪರಿಗಣಿಸಲಾಗುತ್ತದೆ. ಏಕೆಂದರೆ ಇತ್ತೀಚೆಗೆ ಅಫ್ಘಾನಿಸ್ತಾನಕ್ಕೆ ಆಹಾರ ಸರಬರಾಜು ಮಾಡುವುದು ಹೇಗೆ ಎಂಬ ಪ್ರಸ್ತಾಪವು ಅಂತರರಾಷ್ಟ್ರೀಯ ಸಮುದಾಯದ ಮುಂದೆ ಬಂದಾಗ ಐರೋಪ್ಯ ಒಕ್ಕೂಟವು ಹಣಕಾಸು ಕೊಡಲು ಮುಂದೆ ಬಂದರೆ ಅಮೆರಿಕ ತಾನು ಯಾವ ಕಾರಣಕ್ಕೂ ಹಣಕಾಸು ಕೊಡುವುದಿಲ್ಲವೆಂದು ನಿರಾಕರಿಸಿತು. ಏಕೆಂದರೆ "ಆ ಹಣದಿಂದ ಒಂದು ವೇಳೆ ಆ ಸರ್ಕಾರಗಳು ಬೇರೆ ದೇಶದಿಂದ ಆಹಾರ ಧಾನ್ಯಗಳನ್ನು ಖರೀದಿಸಿದರೆ ನಾವೇ ನಮ್ಮ ಕೈಯಾರೆ ನಮ್ಮ ಪ್ರತಿಸ್ಪರ್ಧಿಗಳಿಗೆ ಹಣಕಾಸು ಒದಗಿಸಿದಂತಾಗುತ್ತದೆ. ಆದ್ದರಿಂದ ನಾವು ಕೊಟ್ಟರೆ ಆಹಾರ ಕೊಡುತ್ತೇವೆಯೇ ವಿನಃ ಹಣಕಾಸನ್ನಲ್ಲ" ಎಂದು ಸ್ಪಷ್ಟವಾಗಿಯೇ ಹೇಳಿತು.

ಒಂದು ಸತ್ಯ:



ಅಷ್ಟು ಮಾತ್ರವಲ್ಲ, ಅಮೆರಿಕ ಕೊಟ್ಟ ಆಹಾರ ಸಹಕಾರದ ಬದಲಿಗೆ ತಾನು ಹಲವಾರು ಶರತ್ತುಗಳನ್ನು, ತನ್ನ ಬಂಡವಾಳಕ್ಕೆ ರಿಯಾಯಿತಿಗಳನ್ನು ಪಡೆದುಕೊಳ್ಳುತ್ತದೆ ಎಂದು ಅಮೆರಿಕ ತಾನೇ ವರದಿಗಳಲ್ಲಿ ಬರೆದುಕೊಂಡಿರುವುದು ಈಗ ಬೆಳಕಿಗೆ ಬಂದಿದೆ.

ತೋಳಕ್ಕೆ ಮೇಕೆಗಳ ಮೇಲೆ ಪ್ರೀತಿ ಬಂದರೆ ಅದಕ್ಕೆ ಏನು ಹೇಳಬೇಕು?

No Comments



ಸಾಂಸ್ಕೃತಿಕ ಕ್ಷೇತ್ರ ವಿಶ್ವಾಸಾರ್ಹತೆಯ ಬಿಕ್ಕಟ್ಟನ್ನು ಎದುರಿಸುತ್ತಿದೆ.
- ಬರಗೂರು ರಾಮಚಂದ್ರಪ್ಪ.

ಕಾಂಗ್ರೆಸ್-ಬಿ.ಜೆ.ಪಿ. ಮೈತ್ರಿ ಸಾಧ್ಯವಾದರೆ ದೇಶಕ್ಕೆ ಒಳ್ಳೆಯದು.
- ಅಡ್ವಾನಿ

ಜಾಗತೀಕರಣದ ಕರಿನೆರಳು ಧರ್ಮದ ಮೇಲೂ ಬೀಳುತ್ತಿದೆ.
- ರಂಭಾಪುರಿ ಸ್ವಾಮಿ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:

ನಾನು ಇಸ್ಪೀಟ್ ಆಡಲ್ಲ-ಲಫಂಗ ಅಲ್ಲ.
-ಮಂತ್ರಿ ಈಶ್ವರಪ್ಪ




ಶಿಕ್ಷಕರಿಗೆ ಪ್ರತಿ ತಿಂಗಳು 5ರೊಳಗೆ ಸಂಬಳ.
- ಮಂತ್ರಿ ಹೊರಟ್ಟಿ

ನಾನು ಮಾಡಲಾಗದ್ದು ಏನೂ ಇಲ್ಲ.
- ಶಿವಕುಮಾರ ಸ್ವಾಮಿಜಿ

ಒಂದು ಪ್ರಶ್ನೆ:

ಬ್ರಿಟನ್ ದೇಶವಾಸಿ ಹಾಗೂ ಭಾರತದ ಮೂಲನಿವಾಸಿಯಾದ ಲಕ್ಷ್ಮಿ ಮಿಟ್ಟಲ್‌ರವರ ಕಬ್ಬಿಣದ ಸಂಸ್ಥೆ ಈಗ ವ್ಯವಹಾರದಲ್ಲಿ ವಿಶ್ವದಲ್ಲೇ ಮೊದಲನೇ ಸ್ಥಾನದಲ್ಲಿದೆ. ಅದನ್ನು ಭಾರತದ ಹೆಮ್ಮೆಯೆಂದು ನಮ್ಮ ಸರ್ಕಾರ ಹೇಳಿಕೊಂಡಿದೆ. ಈಗ ಲಕ್ಷ್ಮಿ ಮಿಟ್ಟಲ್‌ರವರು ಉದ್ಯಮಿಗಳಿಗೇ ಒಂದು ಮಾದರಿಯೆಂದು ಬಿಂಬಿಸುತ್ತಾ ಅವರನ್ನು ಹಲವಾರು ವಿಶ್ವವಿದ್ಯಾಲಯಗಳು ತಮ್ಮ ಘಟಿಕೋತ್ಸವಗಳಿಗೆ ಆಹ್ವಾನಿಸುತ್ತಿವೆ.



ಅದೆಲ್ಲಾ ಒತ್ತಟ್ಟಿಗಿರಲಿ. ಈಗ ಆ ಮಹಾಶಯ ಲಕ್ಸೆಂಬರ್ಗ್ ದೇಶದ ಆರ್ಸೆಲರ್ ಎಂಬ ಕಬ್ಬಿಣದ ಕಂಪನಿಯನ್ನು ನುಂಗಲು ಸಿದ್ಧವಾಗುತ್ತಿದ್ದಾನೆ. ಆದರೆ ಬ್ರಿಟನ್ ಸರ್ಕಾರ ಮಿಟ್ಟಲ್ ಕಂಪನಿ ತಮ್ಮ ದೇಶದ್ದಲ್ಲ, ಬದಲಾಗಿ ಆತನದ್ದು ವಿದೇಶಿ ಕಂಪನಿಯೆಂದು ವಾದಿಸಿ ಇಲ್ಲದ ಅಡ್ಡಿಗಳನ್ನು ಸೃಷ್ಟಿಸುತ್ತಿದೆ.

ಇದರಿಂದ ವ್ಯಗ್ರವಾಗಿರುವ ಭಾರತ ಸರ್ಕಾರ ಕೂಡಲೇ ಮಧ್ಯ ಪ್ರವೇಶಿಸಿ "ಬ್ರಿಟನ್ ಸರ್ಕಾರದ ನೀತಿ WTO ಶರತ್ತುಗಳನ್ನು ಉಲ್ಲಂಘಿಸುತ್ತದೆ" ಎಂದು ಹೇಳಿ ಮಿಟ್ಟಲ್‌ರ ವಿರುದ್ಧ ತಾರತಮ್ಯ ನೀತಿ ಅನುಸರಿಸಬಾರದೆಂದು ದೂರನ್ನು ಜಿನಿವಾ ತನಕ ತೆಗೆದುಕೊಂಡು ಹೋಗಿದೆ.

ಈಗ ಪ್ರಶ್ನೆಯೇನೆಂದರೆ ಒಬ್ಬ ಲಕ್ಷ್ಮಿ ಮಿಟ್ಟಲ್ ಎಂಬ ಉದ್ಯಮಿಗೆ ಅನ್ಯಾಯವಾಯಿತೆಂದು ಇಡೀ ಭಾರತ ಸರ್ಕಾರವೇ ಎದ್ದು ನಿಂತಿದೆ, ಸರಿ. ಆದರೆ ಅದೇ WTO ಶರತ್ತುಗಳನ್ನು ಉಲ್ಲಂಘಿಸಿ ಇದೇ ಬ್ರಿಟನ್ ಮತ್ತು ಅಮೆರಿಕ ದೇಶಗಳು ಭಾರತದ ರೈತರಿಗೆ ಅನ್ಯಾಯ ಮಾಡುತ್ತಿವೆ. ಈ ಕಾರಣದಿಂದಾಗಿಯೇ ಭಾರತದ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಒಬ್ಬ ಅನಿವಾಸಿ ಭಾರತೀಯ ಉದ್ಯಮಿಯ ಲಾಭವನ್ನು ಕಾಪಾಡಲು ನಮ್ಮ ಇಡೀ ಸರ್ಕಾರವೇ ಎದ್ದು ನಿಲ್ಲಬಹುದಾದಲ್ಲಿ ನಮ್ಮ ಬಡ ರೈತರ ಜೀವ ರಕ್ಷಣೆಗೆ ಏಕೆ ಮುಂದಾಗುತ್ತಿಲ್ಲ?

ಕಲೆ, ಕಲಾಸೌಂದರ್ಯಕ್ಕೆ ಕಲಾವಿದರಷ್ಟೇ ಅಲ್ಲದೆ ಸಾಹಿತಿಗಳು, ಚಿಂತಕರು ಒಲಿಯುತ್ತಾರೆ.

ವಿಭಿನ್ನ ಕ್ಷೇತ್ರಗಳ ಶ್ರೇಷ್ಠರು ಕಲೆ ಎಂದರೇನು? ಅದರ ಮಹತ್ವವೇನು ಎಂಬುದರ ಕುರಿತು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಇಲ್ಲಿವೆ.

ನಮ್ಮ 'ಪತ್ರಿಕೆ'ಯ ಕಲಾವಿದ ಶಿವಾ ವಿ. ಹೂಗಾರ್ ಸಂಗ್ರಹಿಸಿಕೊಟ್ಟಿರುವ ಈ ಸೂಕ್ತಿಗಳು ನಿಮ್ಮ ಕಲಾಪ್ರಜ್ಞೆ ಅರಳಿಸಲಿ ಎಂದು ಆಶಿಸುತ್ತಾ....



-ಗೌರು

ಜಗತ್ತು ನಾವು ಕಂಡಂತೆ ಅಲ್ಲ; ನಾವು ಭ್ರಮಿಸಿದಂತೆ... ನಮ್ಮಲ್ಲಿ ಅದು ಬಿಂಬಿಸಿದಂತೆ. -ಸಾಲ್ವಿಡಾರ್ ಡಾಲಿ

ಕುರಿಗಳ ದೇಶ ನರಿಗಳ ಸರ್ಕಾರ ಪಡೆಯುತ್ತದೆ

"ಈ ವ್ಯವಸ್ಥೆಯೇ ಭಿದ್ರಕಾರಿಯಾಗಿದೆ. ಇಲ್ಲಿನ ಧಿಕಾರಿಗಳು, ರಾಜಕಾರಣಿಗಳು ಮುತ್ತು ಕಾಂಟ್ರಾಕ್ಟರ್ ಸ್-ಎಲ್ಲರೂ ಜೊತೆಗೂಡಿ ಭೂಗತಲೋಕದಲ್ಲಿ ಪಾರಿ ಪಡೆದವರಂತೆ ವರ್ತಿಸುತ್ತಾರೆ. ಚಳವಳಿಗಳನ್ನು, ತಿಭಟನೆಗಳನ್ನು ನಾಶ ಮಾಡಿ, ಎಲ್ಲರನ್ನು ಮುಗಿಸಿ ೦ದು ಅವರೆಲ್ಲ ಒಮ್ಮತದಿಂದ ಹೇಳುತ್ತಿದ್ದಾರೆ ನ್ನಿಸುತ್ತದೆ. ಈ ಭಿದ್ರಕಾರಿ ವ್ಯವಸ್ಥೆ ನಿರಂತರವಾಗಿ ರ್ಯ ನಿರ್ವಹಿಸುತ್ತಿದೆ. ನರ್ಮದಾ ಬಚಾವ್ ಂದೋಲನವನ್ನು ನಾಶ ಮಾಡುವುದು ಈ ವ್ಯವಸ್ಥೆಯ ಮುಖ ಗುರಿ. ಈ ಆಂದೋಲನವನ್ನು ನಾಶ ಾಡುವ ಮೂಲಕ ವ್ಯವಸ್ಥೆ ಒಂದು ಸಂದೇಶವನ್ನು ಡಲು ಯತ್ನಿಸುತ್ತಿದೆ. ಎಲ್ಲ ಚಳವಳಿಗಳಿಗೂ ಅನ್ವಯಿ ವ ಆ ಸಂದೇಶ ಯಾವುದೆಂದರೆ ನರ್ಮದಾ ಬಚಾವ್ ಂದೋಲನವನ್ನು ನಜ್ಜುಗುಜ್ಜು ಮಾಡಿದ್ದೇವೆ, ನಿಮ್ಮ ಂದೋಲನವನ್ನೂ ಸದೆಬಡಿಯುತ್ತೇವೆ, ಅಂತಿಮವಾಗಿ ಮ್ಮೆಲ್ಲರನ್ನೂ ಹೊಸಕಿ ಹಾಕುತ್ತೇವೆ."

ಈ ಮಾತನ್ನು ಮೊನ್ನೆ ಹೇಳಿರುವವರು ಮೇಧಾ ಟ್ಕರ್. ಎಲ್ಲರಿಗೂ ಗೊತ್ತಿರುವಂತೆ ಸ್ವತಂತ್ರ ಭಾರತ ದಿರುವ ಅಹಿಂಸಾತ್ಮಕ ಚಳವಳಿ ಮೇಧಾ ಪಾಟ್ಕರ್‌ರ ರದ್ದಾಗಿದೆ ಮಾತ್ರವಲ್ಲ, ಎರಡು ದಶಕಗಳ ನಿರಂತರ ೋರಾಟವೂ ಅವರದ್ದಾಗಿದೆ. ಸರ್ದಾರ್ ಸರೋವರ ಬ ಬೃಹತ್ ಯೋಜನೆಯಿಂದಾಗಿ ನಿರಾಶ್ರಿತರಾಗಿರುವ ಕ್ಷಾಂತರ ಬಡ ರೈತರ, ಆದಿವಾಸಿಗಳ ಪರವಾಗಿ ರ್ಮದಾ ಬಚಾವ್ ಆಂದೋಲನದ ಮುಂದಾಳತ್ವ ಹಿಸಿಕೊಂಡಿರುವ ಮೇಧಾ ಪಾಟ್ಕರ್‌ರವರಿಗೆ ಅಪಾರ ನ ಬೆಂಬಲ ಕೂಡ ದೊರತಿದೆ.

ಈ ಎರಡು ದಶಕಗಳಲ್ಲಿ ಮೇಧಾ ಪಾಟ್ಕರ್ ಲವಾರು ಬಾರಿ ಜೈಲಿಗೆ ಹೋಗಿದ್ದಾರೆ, ಲಾಠಿ ರುಚಿ ಡಿದ್ದಾರೆ, ಅಮರಣಾಂತ ಉಪವಾಸ ಕೈಗೊಂಡು ವಿನ ಅಂಚಿಗೂ ಹೋಗಿ ಬಂದಿದ್ದಾರೆ.

ಜನಪರವಾಗಿ ಅವರು ನಡೆಸಿರುವ ಈ ಅಹಿಂಸಾತ್ಮಕ ೋರಾಟ ನಿಜವಾಗಲೂ ಶ್ಲಾಘನೀಯ. ಆದರೆ ದರಿಂದ ಅವರು ಸಾಧಿಸಿರುವುದು ಏನನ್ನು ಎಂದು ೋಡಿದರೆ ಆಘಾತವಾಗುತ್ತದೆ. ಏಕೆಂದರೆ ಮೇಧಾ ಟ್ಕರ್ ಮತ್ತವರ ಸಂಗಡಿಗರು ಎಲ್ಲ ರೀತಿಯ ಷ್ಟಗಳನ್ನು ಎದುರಿಸಿ, ಬೀದಿಗಳಲ್ಲಿ ಪ್ರತಿಭಟಿಸಿ, ಜಲ ಮಾಧಿಯಾಗಲೂ ಸಿದ್ಧರಾಗಿ, ಸುಪ್ರೀಂ ಕೋರ್ಟ್ ರಿಗೂ ಹೋರಾಡಿದರೂ ವ್ಯವಸ್ಥೆ ಮಾತ್ರ ಒಂಚೂರು ಲುಗಾಡಿಲ್ಲ. ಅಷ್ಟೇ ಅಲ್ಲ, ಈ ಇಪ್ಪತ್ತು ವರ್ಷಗಳಲ್ಲಿ ಲವಾರು ಮುಖವಾಡಗಳ ರಾಜಕೀಯ ಪಕ್ಷಗಳು ೇಂದ್ರದಲ್ಲಿ ಹಾಗೂ ಗುಜರಾತ್, ಮಧ್ಯಪ್ರದೇಶ ಮತ್ತು ಹಾರಾಷ್ಟ್ರ ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದಿದ್ದರೂ ವಸ್ಥೆಯ ಜನ ವಿರೋಧಿ ಧೋರಣೆಯಲ್ಲಿ ಕಿಂಚಿತ್ತೂ ್ಯಾಸವಾಗಿಲ್ಲ.

ಇದೆಲ್ಲ ಏನನ್ನು ಸೂಚಿಸುತ್ತದೆ? ಮೇಧಾ ಪಾಟ್ಕರ್ ರೇ ಹೇಳಿರುವಂತೆ ನಮ್ಮ ಭಿದ್ರಕಾರಿ ವ್ಯವಸ್ಥೆಗೂ, ಗತಲೋಕದ ಸುಪಾರಿ ಕೊಲೆಗಡುಕರಿಗೂ ಾವುದೇ ವ್ಯತ್ಯಾಸವಿಲ್ಲ ಎಂಬುದನ್ನಲ್ಲವೇ?

ಇವತ್ತು ಜನಪರ ಚಳವಳಿಗಳನ್ನು ಕೊಲ್ಲಲು ಸಿದ್ಧವಾಗಿ ನಿಂತಿರುವ ವ್ಯವಸ್ಥೆ ಎಷ್ಟು ಅಹಂಕಾರದಿಂದ ವರ್ತಿಸುತ್ತಿದೆ ಎಂದರೆ, ಸರ್ದಾರ್ ಸರೋವರ ಯೋಜನೆಯಿಂದಾಗಿ ನಿರಾಶ್ರಿತರಾಗುವ ಜನರಿಗೆ ಸೂಕ್ತವಾದ ಪರಿಹಾರ ಮತ್ತು ಪುನರ್ ವಸತಿ ಕಲ್ಪಿಸದೇ ಅಣೆಕಟ್ಟಿನ ಎತ್ತರವನ್ನು ಏರಿಸಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದ್ದರೂ, ಆ ತೀರ್ಪನ್ನು ನಿರ್ದಾಕ್ಷಿಣ್ಯವಾಗಿ ಉಲ್ಲಂಘಿಸಿದೆ. ಇದರ ವಿರುದ್ಧವೇ ಮೊನ್ನೆ ಮೇಧಾ ಪಾಟ್ಕರ್ ಮತ್ತೊಮ್ಮೆ ಉಪವಾಸ ಸತ್ಯಾಗ್ರಹ ಹೂಡಿದ್ದು. ಆದರೆ ಅಹಿಂಸವಾದಿಯಾದ ಮೇಧಾ ಪಾಟ್ಕರ್‌ಗೆ ವ್ಯವಸ್ಥೆಯ ಕ್ರೌರ್ಯ ಅರ್ಥವಾಗುವುದಿಲ್ಲ. ಅವರು ಉಪವಾಸ ಕೂತಿದ್ದಾಗ ನನ್ನ ಪರಿಚಿತ ಪತ್ರಕರ್ತನೊಬ್ಬ ಅವರನ್ನು ಮಾತನಾಡಿಸಿದ್ದರ ಬಗ್ಗೆ ನನಗೆ ಫೋನ್‌ನಲ್ಲಿ ಹೇಳಿದ. "ಮೇಧಾ ಪಾಟ್ಕರ್‌ರವರಿಗೆ ಯುಪಿಎ ಸರ್ಕಾರದ ಬಗ್ಗೆ ಎಷ್ಟು ಭರವಸೆ ಇದೆ ಎಂದರೆ, ಅವರ ಬೇಡಿಕೆಗಳಿಗೆ ಕೇಂದ್ರ ಸರ್ಕಾರ ಸಮ್ಮತಿಸುತ್ತದೆ ಎಂದೇ ನಂಬಿದ್ದಾರೆ. ನೀವು ಯಾವ ಆಧಾರದ ಮೇಲೆ ಹೀಗೆ ನಂಬುತ್ತೀರಾ ಅಂತ ನಾನು ಕೇಳಿದರೆ 'ಮನಮೋಹನ್ ಸಿಂಗ್‌ರವರು ಸಜ್ಜನರು. ಅವರಿಗೆ ಜನರ ಕಷ್ಟ ಅರ್ಥವಾಗುತ್ತದೆ' ಎಂದು ಮೇಧಾ ಉತ್ತರಿಸಿದರು.



ಆದರೆ ಮೇಧಾಗೆ ಗೊತ್ತಿಲ್ಲದಿರುವುದೇನೆಂದರೆ ಈಗಾಗಲೇ ಪ್ರಧಾನಿ ಮನಮೋಹನ್ ಸಿಂಗ್‌ರವರು ಜಲಸಂಪನ್ಮೂಲ ಸಚಿವ ಸೈಫುದ್ದೀನ್ ಸೋಜ್‌ರವರನ್ನು ಕರೆಸಿ ಯಾವುದೇ ಕಾರಣಕ್ಕೂ ನರ್ಮದಾ ಬಚಾವ್ ಆಂದೋಲನದವರ ಬೇಡಿಕೆಗಳಿಗೆ ಸಮ್ಮತಿ ಸೂಚಿಸಬಾರದು ಎಂದು ಹೇಳಿದ್ದಾರೆ. ಅಷ್ಟೇ ಅಲ್ಲ, ಹೇಳಿಕೇಳಿ ಸೈಫುದ್ದೀನ್‌ರವರು ಕಾಶ್ಮೀರಿ ಮುಸ್ಲಿಮ್ ಆಗಿರುವುದರಿಂದ ಅವರೇನಾದರೂ ತಮ್ಮ ನಿಲುವನ್ನು ಸಡಿಲಗೊಳಿಸಿದರೆ ಅದನ್ನೇ ಹಿಂದೂತ್ವದ ಹೀರೋ ನರೇಂದ್ರ ಮೋದಿ ತನ್ನ ಕೋಮುವಾದಿ ರಾಜಕೀಯಕ್ಕೆ ಉಪಯೋಗಿಸಿಕೊಳ್ಳುತ್ತಾನೆ ಎಂದು ಸಿಂಗರು ಎಚ್ಚರಿಸಿದ್ದಾರಂತೆ. ವ್ಯವಸ್ಥೆಯ ಇಂತಹ ಕುತಂತ್ರ, ರಾಜಕಾರಣಿಗಳ ಆಟ ಮೇಧಾಗೆ ಗೊತ್ತಿರುವಂತಿಲ್ಲ" ಎಂದು ನನ್ನ ಮಿತ್ರ ಹೇಳಿದ.

ನನ್ನ ಪ್ರಕಾರ ಮೇಧಾರವರ ಹೋರಾಟ ಅತ್ಯಂತ ಶ್ಲಾಘನೀಯವಾಗಿದ್ದರೂ ಅದು ಈಗಾಗಲೇ ಮುಕ್ಕಾಲು ಭಾಗ ಸೋತಿರುವ ಹೋರಾಟ. ಏಕೆಂದರೆ ಇದು ಪ್ರಾರಂಭವಾದಾಗ, ಎರಡು ಪ್ರಮುಖ ಅಂಶಗಳಿಗಾಗಿ ಹೋರಾಡಿತ್ತು, ಅವುಗಳೆಂದರೆ ಒಂದು: ಬೃಹತ್ ಅಣೆಕಟ್ಟನ್ನು ನಿರ್ಮಿಸಬಾರದು, ಎರಡು: ನಿರಾಶ್ರಿತರಿಗೆ ಪರಿಹಾರ ಮತ್ತು ಪುನರ್‌ವಸತಿಯನ್ನು ಕಲ್ಪಿಸಬೇಕು. ಆದರೆ ಯಾವತ್ತು ಸುಪ್ರೀಂ ಕೋರ್ಟ್

ಕಂಡಹಾಗೆ



ಕೂಡ "ಯಾವುದೇ ಕಾರಣಕ್ಕೆ ಈ ಯೋಜನೆಯನ್ನು ನಿಲ್ಲಿಸುವಂತಿಲ್ಲ, ಹಾಗೆ ನಿಲ್ಲಿಸಿದರೆ ವಿದೇಶಿ ಬಂಡವಾಳಕ್ಕೆ ಧಕ್ಕೆ ಆಗುತ್ತದೆ" ಎಂದು ತೀರ್ಪು ನೀಡಿತೋ ಅವತ್ತೇ ಈ ಹೋರಾಟದ ಅರ್ಧ ಭಾಗ ಸೋತಿತ್ತು, ಈಗ ಈ ಹೋರಾಟ ನಿರಾಶ್ರಿತರಿಗಾಗಿ ಮುಂದುವರಿಯುತ್ತಿದೆ ಮಾತ್ರವಲ್ಲ, ಅದರಲ್ಲಾದರು ಯಶಸ್ವಿ ಆಗುವಂತೆ ಯಾವ ಸೂಚನೆಯೂ ಕಂಡು ಬರುತ್ತಿಲ್ಲ.

ಈ ಕಾರಣದಿಂದಾಗಿಯೇ ಇವತ್ತು ವ್ಯವಸ್ಥೆಯ ವಿರುದ್ಧ ಬಹಳಷ್ಟು ಜನ ಕೆಂಡ ಕಾರಿದ್ದಾರೆ. ಅವರುಗಳಲ್ಲಿ ಪ್ರಮುಖರಾದ ಅರುಂಧತಿ ರಾಯ್‌ರವರು "ಇಂತಹ ಜನ ಬೆಂಬಲವಿರುವ ಅಹಿಂಸಾತ್ಮಕ ಹೋರಾಟವನ್ನೇ ಸರ್ಕಾರ ಗಣನೆಗೆ ತೆಗೆದುಕೊಳ್ಳುತ್ತಿಲ್ಲ ಅಂದರೆ ನಮ್ಮ ವ್ಯವಸ್ಥೆ ಯಾವ ಸಂದೇಶವನ್ನು ಜನರಿಗೆ ರವಾನಿಸುತ್ತಿದೆ? ಇಲ್ಲಿ ಸರ್ಕಾರದ ಗಮನ ಸೆಳೆಯಬೇಕು ಅಂದರೆ ಹಿಂಸಾತ್ಮಕ, ಸಶಸ್ತ್ರ ಹೋರಾಟ ನಡೆಸಬೇಕೆ? ಇದೆಂತಹ ಪ್ರಜಾಪ್ರಭುತ್ವ ನೀತಿ?" ಎಂದು ಪ್ರಶ್ನಿಸಿದ್ದಾರೆ.

ಆ ಪ್ರಶ್ನೆಯನ್ನು ಇವತ್ತು ಎಲ್ಲರೂ ನಮ್ಮ ಸರ್ಕಾರಗಳನ್ನು ಕೇಳಬೇಕಿದೆ.

ಅಂದಹಾಗೆ, ಮೊದಲೇ ಹೇಳಿದಂತೆ ನಮ್ಮ ಪ್ರಜಾಪ್ರಭುತ್ವದಲ್ಲಿ ವ್ಯವಸ್ಥೆ ಎಷ್ಟು ಜನವಿರೋಧಿ ಆಗಿರುತ್ತದೆ ಎಂದು ಮತ್ತೊಮ್ಮೆ ತೋರಿಸಲು ಇಲ್ಲಿ ಹಲವು ಹೇಳಿಕೆಗಳನ್ನು ನೀಡುತ್ತೇನೆ. ಇದನ್ನು ಓದಿ ಈ ದೇಶದಲ್ಲಿ ಪ್ರಜೆಗಳ ಹಿತಾಸಕ್ತಿಗೆ, ಅಹಿಂಸಾತ್ಮಕ ಹೋರಾಟಗಳಿಗೆ, ಜನಪರ ಚಳವಳಿಗಳಿಗೆ ಯಾವ ಸ್ಥಾನವಿದೆ ಎಂದು ನೀವೇ ನಿರ್ಧರಿಸಿ!

"ನೀವು ನೋವನ್ನು ಅನುಭವಿಸಬೇಕು, ದೇಶದ ಹಿತಾಸಕ್ತಿಗಾಗಿ ನೀವು ನೋವನ್ನು ಅನುಭವಿಸಬೇಕು"

-ಜವಹಾರ್‌ಲಾಲ್ ನೆಹರು. ಹಿರಾಕುಡ್ ಡ್ಯಾಂನಿಂದಾಗಿ ನಿರಾಶ್ರಿತರಾಗಲಿದ್ದ ಗ್ರಾಮೀಣ ಜನರನ್ನು ಉದ್ದೇಶಿಸುತ್ತಾ (1948).

"ಡ್ಯಾಂ ಕಟ್ಟಿದ ಮೇಲೆ ನೀವು ನಿಮ್ಮ ಮನೆಗಳನ್ನು ತೊರೆಯಬೇಕು ಎಂದು ಕೇಳಿಕೊಳ್ಳುತ್ತೇವೆ. ಆಗ ನೀವು ಜಾಗ ಖಾಲಿ ಮಾಡಿದರೆ ಸರಿ. ಇಲ್ಲಾ ಅಂದರೆ ಡ್ಯಾಂಮಿನ ನೀರನ್ನೆಲ್ಲ ಬಿಟ್ಟು ನಿಮ್ಮನ್ನೆಲ್ಲ ಜಲ ಸಮಾಧಿ ಮಾಡುತ್ತೇವೆ."

-ಮೊರಾರ್ಜಿ ದೇಸಾಯಿ, ಪೊಂಗ್ ಡ್ಯಾಂ ಮುಳುಗಡೆ ಮಾಡಲಿದ್ದ ಪ್ರದೇಶದಲ್ಲಿ ಸಾರ್ವಜನಿಕ ಸಭೆ ಉದ್ದೇಶಿಸುತ್ತಾ (1961)

"ಸರ್ದಾರ್ ಸರೋವರ ಯೋಜನೆಯಿಂದಾಗಿ ನಿರಾಶ್ರಿತರಾಗುವ ಜನರಿಗೆ ಪುನರ್‌ವಸತಿ ಕಲ್ಪಿಸಲು ನಮ್ಮಲ್ಲಿ ಭೂಮಿ ಇಲ್ಲ".

-ಮಧ್ಯಪ್ರದೇಶ ಸರ್ಕಾರ, ಇತ್ತೀಚಿಗೆ ಸುಪ್ರೀಂ ಕೋರ್ಟಿಗೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ

"ಕುದುರೆಮುಖ ಕಂಪನಿಯನ್ನು ಮುಂದುವರಿಸಬೇಕು. ನಾನು ಪ್ರಧಾನಿ ಆಗಿದ್ದಾಗಲೂ ತೆಹ್ರಿ ಡ್ಯಾಂ ಕುರಿತಂತೆ ಹಲವು ಪರಿಸರವಾದಿಗಳು ಬಂದಿದ್ದರು. ಆದರೆ ನಾನು ಕೇರ್ ಮಾಡಲಿಲ್ಲ, ನಿಮಗೆಲ್ಲ ಹಣ ಎಲ್ಲಿಂದ ಬರುತ್ತೆ ಅಂತ ನಂಗೊತ್ತು, ಹೋಗ್ರಿ, ಹೋಗ್ರಿ ಅಂತ ಅವರಿಗೆ ಹೇಳಿದ್ದೆ."

-ಮಾಜಿ ಪ್ರಧಾನಿ ದೇವೇಗೌಡ (ಆರು ತಿಂಗಳ ಹಿಂದೆ 'ಲಂಕೇಶ್' ವಾರಪತ್ರಿಕೆಯೊಂದಿಗೆ ಮಾತನಾಡುತ್ತಾ)

* * * * * * * *

ಸದಾ ವ್ಯವಸ್ಥೆಯ ವಿರುದ್ಧ ಹೋರಾಡುವ ಪತ್ರಕರ್ತರು ದಿಟ್ಟತನ ಹೊಂದಿರಲೇಬೇಕು. ಏಕೆಂದರೆ ಅಂತಹ ಪತ್ರಕರ್ತರನ್ನು ಸದೆಬಡಿಯಲು ವ್ಯವಸ್ಥೆ ಹೊಂಚು ಹಾಕಿ ಕಾದಿರುತ್ತದೆ. ಇಂತಹ ಹೋರಾಟ ಮಾಡಿ ಅಮೆರಿಕಾ ಸರ್ಕಾರದ ಕೆಂಗಣ್ಣಿಗೆ ಗುರಿಯಾದ ಎಡ್ವರ್ಡ್ ಆರ್. ಮುರೋ ಎಂಬ ಖ್ಯಾತ ಪತ್ರಕರ್ತರು ಹೀಗೆ ಹೇಳಿದ್ದಾರೆ:

"ಭಿನ್ನಮತವನ್ನು ನಾವು ರಾಷ್ಟ್ರದ್ರೋಹ ಎಂದು ಅಪಾರ್ಥ ಮಾಡಿಕೊಳ್ಳಬಾರದು. ಹಾಗೆ ಯಾರಾದರೂ ನಮ್ಮನ್ನು ರಾಷ್ಟ್ರದ್ರೋಹಿಗಳೆಂದು ಆರೋಪಿಸಿದರೆ ಅದು ಸತ್ಯ ಆಗಿರಬೇಕಿಲ್ಲ, ಮಾತ್ರವಲ್ಲ, ಆ ಆರೋಪ ಸಾಕ್ಷಾಧಾರಿತವಾಗಿ ನ್ಯಾಯಾಲಯದ ಮುಂದೆ ಸಾಬೀತಾಗಬೇಕು. ಆದ್ದರಿಂದ ನಾವು ಹೆದರದೆ, ನಮ್ಮವರ ಬಗ್ಗೆ ಸಂಶಯ ಪಡೆದೆ ಮುನ್ನಡೆಯಬೇಕು. ಹಾಗೊಮ್ಮೆ ನಾವು ಹೆದರಿದರೆ ನಾವು ಚಿಂತಿಸದೇ ಇದ್ದಂತಹ ಅಂಧ ಯುಗಕ್ಕೆ ನೂಕಲ್ಪಡುತ್ತೇವೆ. ಆದ್ದರಿಂದ ನಾವು ಹೇಳುತ್ತಿರುವುದು ಈ ಕ್ಷಣ ಜನಪ್ರಿಯವಲ್ಲದಿದ್ದರೂ ನಮಗನ್ನಿಸಿದ್ದನ್ನು ಬರೆಯಲೇಬೇಕು, ಹೇಳಲೇಬೇಕು, ನಾವು ನಂಬಿರುವ ಸಿದ್ಧಾಂತದ ರಕ್ಷಣೆಗಾಗಿ ದನಿಯೆತ್ತಲೇಬೇಕು."


50 ರ ದಶಕದಲ್ಲಿ ಹೀಗೆ ಹೇಳಿದ್ದ ಮುರೋ ಅಂದಿನ ಕಮ್ಯುನಿಸ್ಟರನ್ನು ಗುರುತಿಸಿ ಹಿಂಸಿಸುತ್ತಿದ್ದ ಜೋಸೆಫ್ ಮೆಕಾರ್ಥಿಯ ಕೋಪಕ್ಕೆ ಗುರಿಯಾಗಿದ್ದರು. ಆದರೆ ತನ್ನ ದೃಢ ನಿಲುವಿನಿಂದಾಗಿ ಮುರೋ ಗೆದ್ದಿದ್ದರು. ಅಷ್ಟೇ ಅಲ್ಲ, "ಕುರಿಗಳ ದೇಶ ನರಿಗಳ ಸರ್ಕಾರವನ್ನು ಪಡೆಯುತ್ತದೆ" ಎಂದೂ ಎಚ್ಚರಿಸಿದ್ದರು. ಭಾರತದ ವ್ಯವಸ್ಥೆಯ ನರಿಗಳಿಗೂ, ಅಮೆರಿಕಾದ ನರಿಗಳಿಗೂ ಅಷ್ಟೇನು ವ್ಯತ್ಯಾಸ ಇಲ್ಲ ಎಂದಷ್ಟೇ ಇಲ್ಲಿ ಹೇಳಬಹುದು.

-ಗೌರಿ ಲಂಕೇಶ್

ಅಪ್ಪಿಕೊಳ್ಳುವುದನ್ನು ಒಪ್ಪಿಕೊಳ್ಳಬೇಕಾದವರು

ಕಳೆದ ಬುಧವಾರಕ್ಕೆ ನನ್ನ ಅಮ್ಮನಿಗೆ 50 ವರ್ಷ ತುಂಬಿತು. ಪ್ರತಿ ವರ್ಷದಂತೆ ಅಪ್ಪ, ಅಮ್ಮ, ನಾನು ಮತ್ತು ಶಾಂತನು ಯಾವುದೋ ಹೋಟೆಲ್ಲಿಗೆ ಹೋಗಿ ಊಟ ಮಾಡುತ್ತೇವೆಂದು ಅಮ್ಮ ಊಹಿಸಿದ್ದರು. ಆದರೆ ಅಮ್ಮನಿಗೆ ಗೊತ್ತಾಗದಂತೆ ನಾವು ಮೂವರು ಸೇರಿ ಕನಕಪುರ ರಸ್ತೆಯಲ್ಲಿರುವ ಹೋಟೆಲ್ ಒಂದರಲ್ಲಿ ಅಮ್ಮನಿಗೆ surprise ಪಾರ್ಟಿ ಏರ್ಪಡಿಸಿದ್ದೆವು.


ಅಂದು ಸಂಜೆ ನಾನು ಗಿಫ್ಟ್ ಆಗಿ ನೀಡಿದ್ದ ರೇಷ್ಮೆ ಸೀರೆಯನ್ನುಟ್ಟು, ಅಪ್ಪ ಕೊಟ್ಟಿದ್ದ ವಜ್ರದ ಓಲೆ ಹಾಕಿಕೊಂಡು, ಶಾಂತನು ನೀಡಿದ್ದ perfume ಸಿಂಪರಿಸಿಕೊಂಡು ಅಮ್ಮ ತನ್ನ ಹುಟ್ಟುಹಬ್ಬದ ಪಾರ್ಟಿಗೆ ತಯಾರಾದರು. ಸಂಜೆ ಏಳೂವರೆಗೆ ನಾವೆಲ್ಲರೂ ಕಾರ್ ಹತ್ತಿ ಕನಕಪುರ ರಸ್ತೆಯತ್ತ ಸಾಗಿದಾಗ "ಎಲ್ಲಿಗೆ ಹೋಗುತ್ತಿದ್ದೇವೆ?" ಅಂತ ಅಮ್ಮ ಕೇಳಿದರು. "ಇಲ್ಲೇ ಒಂದು ಸಾಧಾರಣ ಡಾಬಾಗೆ ಅಂತ ಅಪ್ಪ ಉತ್ತರಿಸಿದಾಗ ಅಮ್ಮ ಸುಮ್ಮನಾದರು. ಆದರೆ ಹೋಟೆಲ್ ತಲುಪಿದಾಗ ಅಮ್ಮನಿಗೆ ಆಶ್ಚರ್ಯ



ಕಾದಿತ್ತು, ಅಮ್ಮನ ಅಕ್ಕ-ತಮ್ಮಂದಿರು ಸೇರಿದಂತೆ, ಅವರ ಆಪ್ತರು, ಬಾಲ್ಯದ ಸ್ನೇಹಿತರು, ಎಲ್ಲರನ್ನೂ ನಾವು ಅಮ್ಮನಿಗೆ ಗೊತ್ತಾಗದಂತೆ ಆಹ್ವಾನಿಸಿದ್ದೆವು. ಅವರನ್ನಲ್ಲಿ ನೋಡುತ್ತಿದ್ದಂತೆ ಅಮ್ಮನಿಗೆ ಅಚ್ಚರಿ! ತನ್ನ ಕ್ಲಾಸ್‌ಮೇಟ್ ಕನಕಾಂಬರಿಯವರನ್ನು ನೋಡಿದಾಗಲಂತೂ ಅಮ್ಮ ಶಾಕ್ ಆದರು. "ನನ್ನ ಜೀವನದ ಪ್ರತಿ ಹಂತದ ಜನರನ್ನು ಅದು ಹೇಗೆ ಕರೆದಿರಿ?" ಎಂದು ಅಮ್ಮ ಕೇಳಿದಾಗ ಅಪ್ಪ ಅಮ್ಮನ ಕೈ ಹಿಡಿದು "ನಿನಗೆ ಸಂತೋಷ ಆಯ್ತಾ" ಅಂದರು.

ಅಪ್ಪ ಹೇಳದೇ ಇದ್ದದ್ದೇನೆಂದರೆ ನಾವು ಮೂವರು ಅಮ್ಮನಿಗೆ ಗೊತ್ತಾಗದಂತೆ ಅವರ ಎಲ್ಲ ಸ್ನೇಹಿತರನ್ನು ಸಂಪರ್ಕಿಸಿ ಆಹ್ವಾನಿಸಿದ್ದೆವು. ಅಲ್ಲಿದ್ದ ಜನರನ್ನು ನೋಡುತ್ತಿದ್ದಂತೆಯೇ ನಮ್ಮ ಶ್ರಮವನ್ನು ಗ್ರಹಿಸಿದ ಅಮ್ಮ, ಅಪ್ಪನನ್ನು ಆಲಂಗಿಸಿದ ನಂತರ, ನನಗೂ, ಶಾಂತನುಗೂ ಕೆನ್ನೆಯ ಮೇಲೆ ಮುತ್ತಿಟ್ಟರು. ಅನಂತರ ತಮ್ಮ ಆಪ್ತರೊಂದಿಗೂ, ಹಲವಾರು ವರ್ಷಗಳ ನಂತರ ಭೇಟಿ ಆಗುತ್ತಿದ್ದ ಸ್ನೇಹಿತರೊಂದಿಗೂ ಮಾತಿನಲ್ಲಿ ಮಗ್ನರಾದರು. ಅಪ್ಪ, ನಾನು ಮತ್ತು ಶಾಂತನು ಅಮ್ಮನ ಸಂಭ್ರಮ ನೋಡುತ್ತ ಸಂತೋಷ ಪಟ್ಟೆವು.

ಅಮ್ಮನ ಬಗ್ಗೆ ಅಪ್ಪನಿಗಿರುವ ಪ್ರೀತಿ, ನಾನು ಮತ್ತು ಶಾಂತನು ಅಮ್ಮನನ್ನು ಅವಲಂಭಿಸಿರುವ ರೀತಿ, ನಾವೆಲ್ಲರೂ ಸೇರಿ ಅಮ್ಮನ 50 ನೇ ಹುಟ್ಟುಹಬ್ಬವನ್ನು ಆಕೆಗಾಗಿ ವಿಶೇಷವಾಗಿ ಆಯೋಜಿದ್ದನ್ನು ನೆನಪಿಸಿಕೊಳ್ಳುತ್ತಿದ್ದ ನನ್ನ ಮನಸ್ಸಿನಲ್ಲಿ ಒಂದು ರೀತಿಯ ಕಳವಳ ಪ್ರಾರಂಭವಾಯಿತು. ನನ್ನ ಮುಂದೆ ವಿಸ್ಕಿ ಹೀರುತ್ತಾ, ಕುಳಿತು ಅಮ್ಮನ ಸಂತೋಷ ಕಂಡು ಸಂತಸಗೊಂಡಿದ್ದ ಅಪ್ಪ, ಅಮ್ಮನ 50ನೇ ಹುಟ್ಟುಹಬ್ಬವನ್ನು ನೆನಪಿನಲ್ಲಿ ಉಳಿಯುವಂತೆ ಮಾಡಿದ ಸಂತಸದಲ್ಲಿದ್ದ ನಾನು ಮತ್ತು ಶಾಂತನು... ಗಂಡನಿಂದ ಇಂತಹ ಪ್ರೀತಿ, ಮಕ್ಕಳಿಂದ ಇಂತಹ ವಾತ್ಸಲ್ಯ ನನಗೆ ಎಂದಾದರೂ ಸಿಗುತ್ತದೆಯೋ ಎಂದು ಯೋಚಿಸಲಾರಂಭಿಸಿದೆ.



ಹಾಗೆ ಯೋಚಿಸುತ್ತಾ, ಅಮ್ಮನ ಸಂಭ್ರಮವನ್ನು ಆನಂದಿಸುತ್ತಾ ಕುಳಿತಿರುವಾಗ ಪರಿಚಿತ ದನಿಯೊಂದು ನನ್ನ ಹಿಂದಿನಿಂದ ಕೇಳಿಸಿತು. "ಪಾರ್ಟಿ ಹೇಗೆ ನಡೆಯುತ್ತಿದೆ?" ಎಂದು ಕೇಳಿದ ಕಬೀರ್ ನಾನು ತಿರುಗಿ ಅವನ ಮುಖ ನೋಡುವ ಮುನ್ನ ನನ್ನ ಕತ್ತಿನ ಸುತ್ತ ತನ್ನ ತೋಳನ್ನು ಬಳಸಿ ಅಪ್ಪಿಕೊಂಡ.

ಅವನ ದನಿ, ಸ್ಪರ್ಶ ಎರಡೂ ನನ್ನಲ್ಲಿ ಆನಂದವನ್ನು ಹುಟ್ಟಿಸಿದವು. ಅದೇ ಹೊತ್ತಿಗೆ ನನ್ನಪ್ಪ "ನನ್ನ ಎದುರಿಗೆ ನನ್ನ ಮಗಳನ್ನು ಅಪ್ಪಿಕೊಳ್ಳಲು ಅನುಮತಿ ಇರುವುದು ನನ್ನ ಅಳಿಯನಿಗೆ ಮಾತ್ರ. ನಿನಗೆ ಗೊತ್ತಾ ಕಬೀರ್?" ಎಂದು ತಮಾಷೆಯಾಗಿಯೇ ರೇಗಿದರು.


"ಗೊತ್ತು ಸರ್. ಅದನ್ನು ಒಪ್ಪಿಕೊಳ್ಳಬೇಕಿರುವುದು ಶಾರದೆ ಮಾತ್ರ ಅಂತಾನೂ ನಿಮಗೆ ಗೊತ್ತಿರಲಿ" ಎಂದು ಹೇಳುತ್ತಾ ಕಬೀರ್ ನನ್ನ ಪಕ್ಕದಲ್ಲಿದ್ದ ಚೇರ್ ಮೇಲೆ ಕುಳಿತ.

ನಾನು ಏನನ್ನೂ ಹೇಳದೆ ಅಮ್ಮನ ಸಂಭ್ರಮವನ್ನು ನೋಡುತ್ತಾ ಕೂತೆ...

-ಶಾರದೆ

ಬೆಂಗಳೂರು ವಿ.ವಿ: ಜಾತಿ ಶಿಕಾರಿ–ನಾನಾ ದಾರಿ

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಜಾತಿ ಜಗಳ ಭುಗಿಲೆದ್ದಿದೆ. ಇಲ್ಲಿನ ಕನ್ನಡ ಅಧ್ಯಯನ ಕೇಂದ್ರದ ಮುಖ್ಯಸ್ಥ ಹಾಗೂ ವಿಧ್ವಾಂಸ ಡಾ. ಬಸವರಾಜ ಕಲ್ಗುಡಿ ವಿರುದ್ಧ ಅಸ್ಪೃಶ್ಯತಾ ಜಾತಿ ನಿಂದನೆಯ ಕೇಸ್ ದಾಖಲಾಗಿದ್ದು ವಿವಿಯು ಅವರನ್ನೀಗ ಕಡ್ಡಾಯ ರಜೆಯ ಮೇಲೆ ಕಳುಹಿಸಿದೆ. ಅಕಾಡೆಮಿಕ್ ಶಿಸ್ತು ತರುವ ಹಾಗೂ ಸಂಶೋಧನಾ ವಿದ್ಯಾರ್ಥಿಗಳ ಗುಣ ಮಟ್ಟವನ್ನು ಕಾಪಾಡಬೇಕೆಂಬ ಕಲ್ಗುಡಿಯವರ ಆಶಯವೇ ಈಗ ಅವರ ಕುತ್ತಿಗೆಗೆ ಉರುಳಾಗಿ ಸುತ್ತಿಕೊಂಡಿದೆ. ಇದನ್ನು ಸಾಧಿಸಬೇಕೆಂಬ ಕಲ್ಗುಡಿಯವರ ಸದುದ್ದೇಶದ ವರ್ತನೆಯೊಳಗೇ ಒಂದಿಷ್ಟು ಅಧಿಕಾರಶಾಹಿ ಮನೋಭಾವ ಹಾಗೂ ಸೂಕ್ಷ್ಮವಾಗಿ ಕಂಡುಬಂದಿರುವ ಜಾತಿ 'ಅಹಂ'ಗಳೇ ಈ ರಾದ್ಧಾಂತಗಳಿಗೆ ಕಾರಣವಿರಬಹುದೆಂದು ಮೇಲ್ನೋಟಕ್ಕೆ ಕಾಣುತ್ತಿದೆ. ಆದರೆ ವಿಷಯ ಅಷ್ಟು ಸರಳವಾಗಿಲ್ಲ. ಡಾ. ಕಲ್ಗುಡಿಯವರೊಂದಿಗೆ ಕಲಾನಿಖಾಯದ ಡೀನ್ ಎಸ್. ಚಂದ್ರಶೇಖರ್‌ರವರ ಹೆಸರನ್ನೂ ದುರುದ್ದೇಶದಿಂದ ಕಂಪ್ಲೆಂಟ್‌ನಲ್ಲಿ ಸೇರಿಸಲಾಗಿದೆ. ದಲಿತ ವಿದ್ಯಾರ್ಥಿಗಳ ಪ್ರತಿಭಟನೆಗಳ ಹಿನ್ನೆಲೆಯಲ್ಲಿ ಈಗ ಖಾಲಿ ಇರುವ ಉಪ ಕುಲಪತಿ ಹುದ್ದೆಯ ನೆರಳು ಇದೆ. ಅರ್ಥಾತ್ ಉಪ ಕುಲಪತಿ ಹುದ್ದೆಗಾಗಿ ನಡೆದಿರುವ ಪೈಪೋಟಿಯ ಲಾಬಿಗಳ ಕೈವಾಡವೂ ಇದೆ. ಅಷ್ಟೇ ಅಲ್ಲ ದಲಿತ


ಚಂದ್ರಶೇಖರ್

ಬಿಳಿದಾಳೆ ಈಶ


ವಿದ್ಯಾರ್ಥಿ ಸಮುದಾಯದ ಅಸಹಾಯಕತೆ, ಸರ್ಕಾರದ ಪಾಲಿಸಿಗಳು, ಕೆಲ ದಲಿತ ಸಂಶೋಧನಾ ವಿದ್ಯಾರ್ಥಿ ನಾಯಕರ ಠೇಂಕಾರ, ಮೇಲ್ಜಾತಿ ಪ್ರೊಫೆಸರ್‌ಗಳ ಪೆದ್ದು ಕ್ರೂರ ನಡವಳಿಕೆಗಳೆಲ್ಲಾ ಇದರ ಹಿನ್ನೆಲೆಯಲ್ಲಿವೆ. ಈ ಎಲ್ಲ ಅಂಶಗಳ ಸಂಕೀರ್ಣ ಘರ್ಷಣೆಗಳೇ ಈಗ ವಿವಿಯ ಜಾತಿ ಕಲಹವಾಗಿ ಸ್ಫೋಟಗೊಂಡಿದೆ. ಪಟ್ಟಭದ್ರರ ಕೈವಾಡದಿಂದ ಜಾತಿ ಶಿಕಾರಿಯಾಗಿ ಬದಲಾಗಿದೆ.

ಶಿಸ್ತೇ ಸಂಘರ್ಷಕ್ಕೆ ದಾರಿ

ವಿವಿಯ ಕನ್ನಡ ಅಧ್ಯಯನ ಕೇಂದ್ರಕ್ಕೂ ಅಕಾಡೆಮಿಕ್ ಶಿಸ್ತಿಗೂ ಅರ್ಥಾತ್ ಸಂಬಂಧವಿಲ್ಲ ಎಂಬ ಅನಿಸಿಕೆ ಇವತ್ತು ಎಲ್ಲೆಡೆ ಇದೆ. ಈಗ್ಗೆ ಒಂದು ವರ್ಷದ ಹಿಂದೆ ಡಾ. ಸಿದ್ಧಲಿಂಗಯ್ಯ, ಡಾ. ಸುಮಿತ್ರ ಹಾಗೂ ಸಂಶೋಧನಾ ವಿದ್ಯಾರ್ಥಿ ರಾಜಣ್ಣ ಎಂಬುವರ ನಡುವಿನ ತ್ರಿಕೋನ ಕಲಹ ದೊಡ್ಡ ರಾದ್ಧಾಂತಕ್ಕೆ ಕಾರಣವಾಗಿತ್ತು. ಇಲ್ಲಿರುವ ಎಂಟು ಮಂದಿ ಶಿಕ್ಷಕರ ಪೈಕಿ ಕನಿಷ್ಠ ಮೂವರಾದರೂ ಸರಿಯಾದ ಸಮಯಕ್ಕೆ ಹಾಜರಾಗುವ, ಕ್ಲಾಸ್ ತೆಗೆದುಕೊಳ್ಳುವ ಅಭ್ಯಾಸ ಬಿಟ್ಟಿದ್ದಾರೆ.

ಈಗ್ಗೆ ಮೂರು ತಿಂಗಳ ಹಿಂದೆ ಕಲ್ಗುಡಿಯವರು ಎಚ್‌ಒಡಿಯಾಗಿ ನೇಮಕಗೊಂಡಾಗ ಡಿಪಾರ್ಟ್‌ಮೆಂಟನೊಳಗೇ ಶಿಸ್ತು ತರುವ ಪ್ರಯತ್ನ ಚಾಲು ಮಾಡಿದ್ದರು. ಇದು ಕೆಲ ಟೈಂಪಾಸ್ ಮೇಷ್ಟ್ರುಗಳಿಗೆ ಕಿರಿಕಿರಿ ಉಂಟು ಮಾಡಿದೆ. ಜೊತೆಗೆ ಕಲ್ಗುಡಿಯವರ ಅಧಿಕಾರಶಾಹಿ ಮನೋಭಾವ, ಕಠಿಣ ಶಿಸ್ತಿನ ಧೋರಣೆಗಳು, ಜೊತೆಗೆ ಸಹೋದ್ಯೋಗಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಒಬ್ಬಂಟಿಯಾಗಿ ಡಿಪಾರ್ಟ್‌ಮೆಂಟನೊಳಗೆ ಬದಲಾವಣೆ ತರುವ ಅವರ ಸದುದ್ದೇಶವೇ ಅವರನ್ನು ಏಕಾಂಗಿಯಾಗಿಸಿದೆ. ಅದೇ ವೇಳೆಗೆ ವಿವಿಯ ಪಿಎಚ್‌ಡಿ ರಿಜಿಸ್ಟ್ರೇಷನ್ ಕೌನ್ಸಿಲ್‌ಗೆ ಕಲ್ಗುಡಿ ಸದಸ್ಯರೂ ಆದರು. ಅವರೊಂದಿಗೆ ಕಲಾನಿಖಾಯದ ಡಾ. ಎಸ್. ಚಂದ್ರಶೇಖರ್ ಹಾಗೂ ವಿಷಯ ತಜ್ಞರಾಗಿ ಮೈಸೂರು ವಿ.ವಿ.ಯ ಡಾ. ಹಿ.ಶಿ. ರಾಮಚಂದ್ರೇಗೌಡರು ಪಿಆರ್‌ಸಿಯ ಮೆಂಬರ್‌ಗಳಾದರು.

ಕಳೆದ ತಿಂಗಳು ಪಿಎಚ್‌ಡಿ ಸಂಶೋಧನಾ ವಿದ್ಯಾರ್ಥಿಗಳು ಸಲ್ಲಿಸಿದ್ದ ಅರ್ಧ ವಾರ್ಷಿಕ ಪ್ರಗತಿ ವರದಿಗಳನ್ನು ಪರಿಶೀಲಿಸಿದ ಈ ಸಮಿತಿಯು ಕಳಪೆ ವರದಿಗಳನ್ನು ಸಲ್ಲಿಸಿದ್ದ ಇನ್ನೂರರಷ್ಟು ವಿದ್ಯಾರ್ಥಿಗಳ ಪ್ರಗತಿ ವರದಿಯನ್ನು ಒಪ್ಪಿಕೊಳ್ಳದೆ ತಡೆಹಿಡಿದಿತ್ತು. ಕೆಲ ವಿದ್ಯಾರ್ಥಿಗಳಂತೂ 'ನಾನು ಇಂತಿಂತಾ ಪುಸ್ತಕ ಓದಿದೆ, ಗೈಡ್ ಜೊತೆ ಸಿಕ್ಕಾಪಟ್ಟೆ ಚರ್ಚೆ ನಡೆಸಿದ್ದೇನೆ' ಎಂಬಂತ ಒಂದು ಪುಟದ ಕಾಟಾಚಾರದ, ಅಸಂಬದ್ಧ ಪ್ರಗತಿ ವರದಿಗಳನ್ನೇ ಧೈರ್ಯವಾಗಿ ಸಲ್ಲಿಸಿಬಿಟ್ಟಿದ್ದರು. ಸಹಜವಾಗೇ ಸಮಿತಿಗೆ ಇದರಿಂದ ನಿರಾಶೆಯಾಗಿದೆ. ಈ ಭಂಡ ವಿದ್ಯಾರ್ಥಿಗಳಿಗೆ ಸಂಶೋಧನಾ ಕಾರ್ಯವನ್ನು ಸರಿಯಾಗಿ ನಡೆಸುವಂತೆ ತಾಕೀತು ಮಾಡಬೇಕು ಎಂದು ನಿರ್ಧರಿಸಿದೆ ಕೌನ್ಸಿಲ್ ಸಭೆ.


ಬಸವರಾಜ ಕಲ್ಗುಡಿ


ಇದರಲ್ಲಿ ಜಾತಿ ಕಾರಣ ಹುಡುಕುವುದಾಗಲಿ, ಕುತಂತ್ರ ಎನ್ನುವುದಾಗಲೀ ಮಾಡಿದರೆ ಅದು ಅಸಂಬದ್ಧವಷ್ಟೇ.

ಆದರೆ ಮಾರ್ಚ್ 18 ರಂದು ಸೆಮಿನಾರ್ ಒಂದರಲ್ಲಿ ಭಾಗವಹಿಸಲು ಮೈಸೂರಿಗೆ ಹೋದ ಡಾ. ಕಲ್ಗುಡಿ ಸೆಮಿನಾರ್ ಮುಗಿದ ನಂತರ ಅಕಾಡೆಮಿಕ್ ವಲಯದ ಒಂದಷ್ಟು ಗೆಳೆಯರೊಂದಿಗೆ ಮಾತಾಡುತ್ತಾ ಕುಳಿತಿದ್ದಾಗ ಬೆಂಗಳೂರು ವಿ.ವಿ.ಯಲ್ಲಿ ತಾವು ಕಂಡುಕೊಂಡ 'ಸಂಶೋಧನಾ ಪ್ರತಿಭೆಗಳ' ಬಗ್ಗೆ ಮಾತನಾಡಿದ್ದಾರೆ. ಹಾಗೆ ಮಾತನಾಡುವ ಆತುರದಲ್ಲಿ 'ದಲಿತ ಸಂಶೋಧನಾ ವಿದ್ಯಾರ್ಥಿಗಳು ಕೇವಲ ಊಟ-ವಸತಿ ಸೌಲಭ್ಯಕ್ಕಾಗಿ ಪಿಎಚ್‌ಡಿಗೆ ಸೇರುತ್ತಿದ್ದಾರೆ' ಎಂದರು ಎಂದು ಪ್ರಜಾವಾಣಿಯ ಮೈಸೂರು ವರದಿಗಾರ ಕೆ. ನರಸಿಂಹಮೂರ್ತಿ ಏಪ್ರಿಲ್ ಒಂದರ ಸಂಚಿಕೆಯಲ್ಲಿ ಬರೆದರು. ಆಶ್ಚರ್ಯದ ಸಂಗತಿ ಏನೆಂದರೆ ಕಲ್ಗುಡಿ ಮೈಸೂರಿಗೆ ಹೋಗಿ ಬಂದ ಹದಿನೈದು ದಿನಗಳ ನಂತರ ಈ ವರದಿ ಪ್ರಕಟವಾಗಿದೆ!

ಇದು ನಿಜವೇ ಆಗಿದ್ದರೆ ಡಾ. ಕಲ್ಗುಡಿ ಖಂಡನಾರ್ಹರು. ನಿಜಕ್ಕೂ ಇದೊಂದು ಕ್ರೂರ ಮನಸ್ಸಿನ ಅನಿಸಿಕೆ. ಯಾರೇ ಸ್ವಾಭಿಮಾನಿ ವಿದ್ಯಾರ್ಥಿಗಳಿಗೂ ಹರ್ಟ್ ಮಾಡುವ ಮಾತಿದು.

ಈ ವರದಿ ಪ್ರಕಟಗೊಂಡ ಬೆನ್ನಲ್ಲೇ ಏಪ್ರಿಲ್ ನಾಲ್ಕರಂದು ಬೆಂಗಳೂರು ವಿವಿಯ ದಲಿತ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು. ಅವತ್ತು ವಿವಿಯ ರಿಜಿಸ್ಟ್ರಾರ್ ಬಂದು "ಮುವತ್ತು ವರ್ಷಗಳಿಂದ ಇಲ್ಲಿರುವ ಕಲ್ಗುಡಿಯವರ ಬಗ್ಗೆ ಅನುಮಾನ ಪಡಬೇಡಿ. ಬೇಕಿದ್ದರೆ ಅವರನ್ನೇ ಕರೆಸೋಣ, ಕ್ಷಮೆ ಕೇಳಿಸೋಣ" ಎಂದೆಲ್ಲಾ ಹೇಳಿದರೂ ಹುಡುಗರು ಕಿವಿಗೊಟ್ಟಿಲ್ಲ. ಆದಾದ ನಂತರ 4 ನೇ ತಾರೀಖು ಸಂಜೆ ಏನಾಯಿತೋ ಏನೋ 5 ರಂದು ಮಧ್ಯಾಹ್ನ ಜ್ಞಾನಭಾರತಿ ಪೋಲೀಸ್ ಠಾಣೆಯಲ್ಲಿ ಡಾ. ಕಲ್ಗುಡಿ ಹಾಗೂ ಡಾ. ಎಸ್. ಚಂದ್ರಶೇಖರ್‌ರವರ ವಿರುದ್ಧ 1989 ರ ಪರಿಶಿಷ್ಟ ಜಾತಿ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆಯನ್ವಯ ಟಿ. ರಾಜಪ್ಪ ಎಂಬ ದಲಿತ ವಿದ್ಯಾರ್ಥಿ ಕಂಪ್ಲೆಂಟ್ ಕೊಟ್ಟು, ಕೂಡಲೇ ಇನ್ಸ್‌ಪೆಕ್ಟರ್ ನರಸಿಂಹಯ್ಯ ಪ್ರಕರಣ ದಾಖಲಿಸಿಕೊಂಡಿದ್ದಾರೆ (ಕೇಸ್ ನಂಬರ್ 90/2006)

ಈ ಸುದ್ದಿ ಕಿವಿಗೆ ಬಿದ್ದ ತಕ್ಷಣ ಕನ್ನಡ ಸಾಂಸ್ಕೃತಿಕ ಕ್ಷೇತ್ರದ ಇಬ್ಬರು ಗಣ್ಯರು ಪೋಲೀಸ್ ಬಂಧನದಿಂದ ಪಾರಾಗಲು ಹಾಗೂ ಜಾಮೀನು ಪಡೆಯಲು ತಲೆಮರೆಸಿಕೊಳ್ಳಬೇಕಾಗಿ ಬಂತು. ಡಾ. ಬಸವರಾಜ ಸಿ. ಕಲ್ಗುಡಿ 'ಮಧ್ಯಕಾಲೀನ ಭಕ್ತಿ ಅನುಭಾವ, ಸಾಹಿತ್ಯ ಹಾಗೂ ಚಾರಿತ್ರಿಕ ಪ್ರಶ್ನೆ', ನಕ್ಷೆ-ನಕ್ಷತ್ರ, ಮಹಾಸತಿ ಆಚರಣೆ ಒಂದು ಅಧ್ಯಯನ, ಬಹುರೂಪಿ ಎಂಬ ಪುಸ್ತಕಗಳನ್ನು ಪ್ರಕಟಿಸಿರುವ ಒಬ್ಬ ಗಂಭೀರ ಚಿಂತಕ ಹಾಗೂ ಬರಹಗಾರ.


ಟಿ.ರಾಜಪ್ಪ

ಡಾ. ಎಸ್. ಚಂದ್ರಶೇಖರ್ ಕೂಡ ಕರ್ನಾಟಕದ ಇತಿಹಾಸವನ್ನು, ವರ್ತಮಾನದ ಬದುಕಿನ ತಲ್ಲಣಗಳನ್ನು ಗಂಭೀರ ವಿಮರ್ಶೆಗೆ ಒಳಪಡಿಸುತ್ತಾ ದಾಖಲಿಸಿರುವವರೆ. ಅವರ ಮೈಸೂರು ಸಂಸ್ಥಾನದ ಸಾಮಾಜಿಕ ಚಳವಳಿಗಳು ಕೃತಿ ಬಗ್ಗೆ ಎಲ್ಲರಿಗೂ ಗೊತ್ತಿದೆ. (ದೂರು ಕೊಟ್ಟಿರುವ ವಿದ್ಯಾರ್ಥಿಗಳನ್ನು ಬಿಟ್ಟು).

ಇವರಿಬ್ಬರ ಈ ಅಕಾಡಮಿಕ್ ಕೊಡುಗೆಗಳನ್ನು ಅವರ ಮೇಲಿರುವ 'ಜಾತಿವಾದಿ ದಲಿತ ವಿರೋಧಿ' ಎಂಬ ಕೆಲ ದಲಿತ ವಿದ್ಯಾರ್ಥಿಗಳ ಆರೋಪಗಳಿಗೆ ಕೌಂಟರ್ ಆಗಿ ಪರಿಗಣಿಸುವ ಅಗತ್ಯವಿಲ್ಲ, ಆದರೆ ವಿವಿಯೊಳಗೆ ಅಕಾಡೆಮಿಕ್ ಶಿಸ್ತು ತರಬೇಕೆಂಬ, ಸಂಶೋಧನೆಗಳ ಗುಣಮಟ್ಟ ಹೆಚ್ಚಿಸಬೇಕೆಂಬ ಉದ್ದೇಶದಿಂದ ಅವರು ಕೈಗೊಂಡಿರುವ ಕೆಲ ಆಂತರಿಕ ಕ್ರಮಗಳಿಂದಾಗಿ ಈ ಆರೋಪಗಳು ಸೃಷ್ಟಿಯಾಗಿದ್ದಲ್ಲಿ ಅಂತಹದ್ದನ್ನು ಸಮರ್ಥಿಸಲಾಗದು.

ಏಕೆಂದರೆ ಬೆಂಗಳೂರು ವಿವಿಯ ಕನ್ನಡ ವಿಭಾಗದ ಅಶಿಸ್ತಿನ ಟ್ರ್ಯಾಕ್ ರೆಕಾರ್ಡ್ ಹೇಗಿದೆಯೆಂದರೆ ಅಲ್ಲಿ ಶಿಸ್ತು ಮೂಡಿಸುವ ಪ್ರಯತ್ನ ಪಟ್ಟವರೆಲ್ಲಾ ಈ ಹಿಂದೆ ಪೆಟ್ಟು ತಂದಿದ್ದಾರೆ. ಬರಗೂರು ರಾಮಚಂದ್ರಪ್ಪ ಯಾಕೆ ರಾಜೀನಾಮೆ ಕೊಟ್ಟು ಹೋದರು? ಭಾಷಾ ಅಧ್ಯಯನದ ತಜ್ಞ ಕೆ.ಪಿ. ಭಟ ಏಕೆ ಸ್ವಯಂ ನಿವೃತ್ತಿ ಪಡೆದರು?

ಡಾ. ಕಾರ್ಲೋಸ್ ವಿವಿಯನ್ನೇ ಬಿಟ್ಟು ಏಕೆ ದ್ರವಿಡ್‌ಯನ್ ವಿವಿ ಸೇರಿಕೊಂಡರು....

ಇವರೆಲ್ಲಾ ಬೆಂಗಳೂರು ವಿವಿಯ ಕನ್ನಡ ವಿಭಾಗದೊಳಗೆ ಕೆಲ ಬದಲಾವಣೆಗಳನ್ನು ತರುವ ಪ್ರಯತ್ನ ಮಾಡಿ ಸೋತು ನಿರ್ಗಮಿಸಿದವರು.

(12 ನೇ ಪುಟಕ್ಕೆ)

ದಲಿತ ವಿದ್ಯಾರ್ಥಿಗಳು ಹೇಳಿದ್ದು...

ಡಾ. ಕಲ್ಗುಡಿ ಹಾಗೂ ಡಾ.ಎಸ್. ಚಂದ್ರಶೇಖರ್ ವಿರುದ್ಧ ಅಸ್ಪೃಶ್ಯತಾ ಕಾಯ್ದೆ ಆಡಿ ಪೋಲೀಸರಿಗೆ ದೂರು ನೀಡಿರುವ ಟಿ. ರಾಜಪ್ಪ ಸಮಾಜಶಾಸ್ತ್ರದ ವಿದ್ಯಾರ್ಥಿ. ಅವರು ಮಾಲೂರಿನ ಮಾಸ್ತಿಯವರು. ಈ ಪ್ರಕರಣ ಹಾಗೂ ದೂರಿನ ಹಿನ್ನೆಲೆ ಅರಿಯಲು ಈ ವರದಿಗಾರ ಯೂನಿವರ್ಸಿಟಿಯ ಸಂಶೋಧನಾ ವಿದ್ಯಾರ್ಥಿಗಳಿರುವ ಹಾಸ್ಟೆಲ್‌ಗೆ ಹೋದಾಗ ರಾಜಪ್ಪನವರೊಂದಿಗೆ ದೇವಾನಂದ, ರಮೇಶ್, ಸಂತೋಷ ಕುಮಾರ, ರಾಮಚಂದ್ರ, ಚಲಪತಿ, ನಟರಾಜ ಇನ್ನೂ ಮುಂತಾದ ವಿದ್ಯಾರ್ಥಿಗಳಿದ್ದರು.

ಅವರೊಂದಿಗೆ ನಡೆದ ಮಾತುಕತೆಯ ವಿವರಗಳನ್ನು ಇಲ್ಲಿ ಯಥಾವತ್ತಾಗಿ ನೀಡಲಾಗಿದೆ.


ವಿ.ವಿ.ಯ ವಿದ್ಯಾರ್ಥಿಗಳು

ಲಂಕೇಶ್ : ನಿಮಗೆ ಬಸವರಾಜ ಕಲ್ಗುಡಿ ಮೂಲಭೂತವಾಗಿ ಜಾತಿವಾದಿ ಅನ್ನಿಸಿದೆಯಾ?

ವಿದ್ಯಾರ್ಥಿಗಳು : ಹೌದು, ಡಿಪಾರ್ಟಮೆಂಟಗೆ ಹೋಗುವ ಎಸ್‌ಸಿ, ಎಸ್‌ಟಿ ಸ್ಟೂಡೆಂಟ್ಸ್ ಜೊತೆ ಅವನು ಸರಿಯಾಗಿ ಮಾತಾಡುತ್ತಿರಲಿಲ್ಲ,

ಲಂಕೇಶ್ : ಅವರ ಮೇಲೆ ಕಂಪ್ಲೆಂಟ್ ಕೊಡಲು ಏನು ಕಾರಣ?

ವಿದ್ಯಾರ್ಥಿಗಳು : ದಲಿತರು ಊಟ-ವಸತಿಗೋಸ್ಕರ ಪಿಎಚ್‌ಡಿ ಮಾಡ್ತಿದ್ದಾರೆ ಅಂದಿರೋದು ನಮಗೆ ಬಹಳ ನೋವಾಗಿದೆ. ಅಷ್ಟೇ ಅಲ್ಲ, ಅವನು ಸಂಶೋಧನೆಯ ಗುಣಮಟ್ಟದ ಬಗ್ಗೆ ಬಹಿರಂಗ ಹೇಳಿಕೆ ಕೊಟ್ಟಿರುವುದು ವಿವಿ ನಿಯಮಾವಳಿಯ ಉಲ್ಲಂಘನೆ ಕೂಡ.

ಲಂಕೇಶ್ : ಡಾ. ಎಸ್. ಚಂದ್ರಶೇಖರ್ ಹೆಸರನ್ನೂ ಕಂಪ್ಲೆಂಟ್‌ನಲ್ಲಿ ಸೇರಿಸಿದ್ದು ಯಾಕೆ?

ವಿದ್ಯಾರ್ಥಿಗಳು : ಅವನೂ ಜಾತಿವಾದಿನೇ, ಅದಕ್ಕೆ

ಲಂಕೇಶ್ : ನಿಮಗೆ ಯಾಕೆ ಹಾಗನ್ನಿಸಿದೆ. ಅವರು ದಲಿತ ವಿರೋಧಿ ಅನ್ನಿಸುವಂತಹ ಘಟನೆಗಳೇನಾದರೂ ನಿಮ್ಮ ಅನುಭವಕ್ಕೆ ಬಂದಿದೆಯಾ?

ವಿದ್ಯಾರ್ಥಿಗಳು : ಹ್ಞೂಂ.. ಎಸ್‌ಸಿ, ಎಸ್‌ಟಿ ಸ್ಟೂಡೆಂಟ್ಸ್ ಹೋದರೆ ಅವರು ಬರೀ ನೆಗೆಟೀವ್ ಆಗೇ ಮಾತಾಡೋರು.

ಲಂಕೇಶ್ : ಹಾಗಾದರೆ ಈ ಮೊದಲೇ ಪ್ರತಿಭಟಿಸಬಹುದಿತ್ತಲ್ಲ?

ವಿದ್ಯಾರ್ಥಿಗಳು: ಸಂಶೋಧನಾ ವಿದ್ಯಾರ್ಥಿಗಳ ಈಗಿನ ಪ್ರಗತಿ ವರದಿ ತಿರಸ್ಕರಿಸಲು ಅವರೂ ಕಾರಣ. ಕಲ್ಗುಡಿಗೂ, ಚಂದ್ರಶೇಖರ್‌ಗೂ ದಲಿತರು ಜಾಸ್ತಿ ಪಿಎಚ್‌ಡಿ ಮಾಡ್ತಿದ್ದಾರೆ ಅಂತ ಅಸಹನೆ. ಅದಕ್ಕೆ ಮಟ್ಟಹಾಕಲು ತಾವು ಫಿಗರ್ ಆಗಲು (!) ಹೇಳಿರೋ ಮಾತಿದು.

ಲಂಕೇಶ್ : ಸಂಶೋಧನೆಯ ಗುಣಮಟ್ಟದ ಬಗ್ಗೆ ವಿಸ್ತೃತವಾದ ಅಭಿಪ್ರಾಯ ಹೇಳುವ ಹಕ್ಕು ಚಂದ್ರಶೇಖರ್ ಗಿದೆ. ಆದರೆ ಅವರು ಕಲ್ಗುಡಿ ಜೊತೆ ಮೈಸೂರಿಗೆ ಹೋಗಿರಲಿಲ್ಲ, ಎಲ್ಲೂ ಬಹಿರಂಗ ಹೇಳಿಕೆನೂ ಕೊಟ್ಟಿಲ್ಲ, ಆದರೂ ಅವರ ವಿರುದ್ಧ ಜಾತಿ ನಿಂದನೆ ದೂರು ಕೊಟ್ಟಿದ್ದೀರಲ್ಲ ಏಕೆ?

ವಿದ್ಯಾರ್ಥಿಗಳು : ......

ಲಂಕೇಶ್ : ಇದು ಈಗಲೂ ಸಮರ್ಥನೀಯ ಅನ್ಸುತ್ತಾ?

ವಿದ್ಯಾರ್ಥಿಗಳು : ಹೌದು. ಇವರೆಲ್ಲಾ ಜಾತಿವಾದಿಗಳೇ.


ಲಂಕೇಶ್ : ನಿಮಗೆ ಡಾ.ಚಂದ್ರಶೇಖರ್ ಬಗ್ಗೆ ಬೇರೇ ಏನು ಗೊತ್ತಿದೆ?

ವಿದ್ಯಾರ್ಥಿಗಳು : ಅವರ ಪರ್ಸನಲ್ ಎಲ್ಲಾ ನಮಗೆ ಗೊತ್ತಿಲ್ಲ.

ಲಂಕೇಶ್ : ನಾವು ಕೇಳ್ತಿರೋದು ಪರ್ಸನಲ್ ವಿಚಾರ ಅಲ್ಲ, ಒಬ್ಬ ಅಕಾಡಮಿಷಿಯನ್ ಆಗಿ ಅವರ ಚಿಂತನೆ, ಚಟುವಟಿಕೆ, ಬರವಣಿಗೆಯ ಕೊಡುಗೆ ಬಗ್ಗೆ ಮೀಸಲಾತಿ, ಸಾಮಾಜಿಕ ನ್ಯಾಯ ಇತಿಹಾಸ ಕುರಿತು ಅವರು ಪುಸ್ತಕ ಬರೆದಿದ್ದಾರೆ.

ವಿದ್ಯಾರ್ಥಿಗಳು : ನಮಗೇನೂ ಗೊತ್ತಿಲ್ಲ ಸಾರ್.

–ಇದು ದಲಿತರ ಸ್ವಾಭಿಮಾನ, ಆತ್ಮಗೌರವವರನ್ನು ಕಾಪಾಡಲು ನಿಂತಿರುವ ವಿದ್ಯಾರ್ಥಿ ನಾಯಕರ ಮನಸ್ಥಿತಿ. ಇವರಿಗೆ ಕರ್ನಾಟಕದ ಇತಿಹಾಸ-ವರ್ತಮಾನದ ಬಗ್ಗೆಯಾಗಲಿ, ದಲಿತ ಸಮುದಾಯದ ಜೊತೆ ನಿಲ್ಲುವವರು ಯಾರು, ನಿಜವಾದ ಶತ್ರುಗಳಾರು ಎಂಬ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ಸಿಗಬೇಕಾಗಿದೆ.


ವಿ.ವಿ.ಯ ಹಾಸ್ಟೆಲ್


ಆದರೇನು ಮಾಡುವುದು. ಕನ್ನಡದ ಸಾಂಸ್ಕೃತಿಕ ಹಾಗೂ ಬೌದ್ಧಿಕ ವಲಯದ ಜನರಾಗಲಿ, ದಲಿತ-ಪ್ರಗತಿಪರ ಚಳವಳಿಗಳ ನಾಯಕರಾಗಲೀ ಇವತ್ತು ಯುವ ವಿದ್ಯಾರ್ಥಿ-ಯುವ ಸಮುದಾಯಗಳೊಂದಿಗೂ ಒಂದು ಜೀವಂತ ಸಂಬಂಧ ಹೊಂದಿಲ್ಲ, ಹೀಗಿರುವಾಗ ಪಟ್ಟಭದ್ರರು ಅಖಾಡಕ್ಕಿಳಿಯಲು ಅವಕಾಶಗಳು ಸುಲಭವಾಗಿ ಒದಗಿಬರುತ್ತದೆ.

ಬೆಂಗಳೂರು ರಿಯಲ್ ಎಸ್ಟೇಟ್ ಏಜಂಟರ ಸರಣಿ ಕೊಲೆ!

ಹಣ್ಣುಹಣ್ಣು ಮುದುಕ ಲಾರಿ ನಂಜಪ್ಪ ಲ್ಯಾಂಡಿಗೆ ಕೈಯಿಟ್ಟೇ ಹೆಣವಾದ. ಕಾಮಾಕ್ಷಿಪಾಳ್ಯದ ಮಚ್ಚನನ್ನು ಲ್ಯಾಂಡ್ ಡೀಲರುಗಳೇ ಮುಗಿಸಿದರು. ಆತನ ಗುರು ತಿಮ್ಮೇನಹಳ್ಳಿ ತಮ್ಮಯ್ಯ ಕೊಲೆಯಾಗಿದ್ದೂ ನೆಲಗಳ್ಳರ ಸಹವಾಸಕ್ಕೆ ಬಿದ್ದೇ. ಲೇಔಟ್ ಮಂಜನಿಂದ ಹಿಡಿದು ಬಿಲ್ಡರ್ ಸುಬ್ಬರಾಜು ತನಕ, ಬೆಕ್ಕಿನ್ ಕಣ್ ರಾಜೇಂದ್ರನಿಂದ ಹಿಡಿದು ರಜಾಕ್‌ನ ಎನ್‌ಕೌಂಟರ್ ತನಕ ಭೂ ಮೋಹಕ್ಕೆ ಬಿದ್ದು ಹರಿದ ರಕ್ತ ಮತ್ತು ಬಿದ್ದ ಹೆಣಕ್ಕೆ ಲೆಕ್ಕವಿಟ್ಟವರ್ಯಾರು?

ರಾ. ಸೋಮನಾಥ್

ಹೆಣ್ಣುಹಣ್ಣು ಮುದುಕ ಲಾರಿ ನಂಜಪ್ಪ ಲ್ಯಾಂಡಿಗೆ ...ಯಿಟ್ಟೇ ಹೆಣವಾದ. ಕಾಮಾಕ್ಷಿಪಾಳ್ಯದ ಮಚ್ಚನನ್ನು ...ಂಡ್ ಡೀಲರುಗಳೇ ಮುಗಿಸಿದರು. ಆತನ ಗುರು ...ಮ್ಮೇನಹಳ್ಳಿ ತಮ್ಮಯ್ಯ ಕೊಲೆಯಾಗಿದ್ದೂ ನೆಲಗಳ್ಳರ ...ಹವಾಸಕ್ಕೆ ಬಿದ್ದೇ. ಲೇಔಟ್ ...ಮಂಜನಿಂದ ಹಿಡಿದು ...ಲ್ಡರ್ ಸುಬ್ಬರಾಜು ತನಕ, ...ಕ್ಕಿನ್ ಕಣ್ ರಾಜೇಂದ್ರನಿಂದ ...ಡಿದು ರಜಾಕ್‌ನ ...ನ್‌ಕೌಂಟರ್ ತನಕ ಭೂ ...ೋಹಕ್ಕೆ ಬಿದ್ದು ಹರಿದ ರಕ್ತ ...ುತ್ತು ಬಿದ್ದ ಹೆಣಕ್ಕೆ ...ಕ್ಕವಿಟ್ಟವರ್ಯಾರು?




ಲಾರಿ ನಂಜಪ್ಪ

'ಭೂಗಳ್ಳರು ಯಾರೇ ...ರಲಿ, ಎಷ್ಟೇ ದೊಡ್ಡವ ...ಾಗಿರಲಿ ಅಂಥವರನ್ನು ...ಮಿನಲ್ ಕೇಸಲ್ಲಿ ನಿರ್ದಾಕ್ಷಿಣ್ಯ...ವಾಗಿ ಜೈಲಿಗೆ ಹಾಕಿ' ಎಂದು ...ುಖ್ಯಮಂತ್ರಿ ಕುಮಾರ...ಸ್ವಾಮಿ ಗುಡುಗಿದ ಮರುಕ್ಷಣವೇ ವಿದ್ಯಾರ್ಥಿ ಜನತಾದಳದ ...ಾಯಕ ಸಂತೋಷ್ ಸೈಟು ಜಗಳವೊಂದರಲ್ಲಿ ...ರ್ಬರವಾಗಿ ಕೊಲೆಯಾಗಿದ್ದ. ಲ್ಯಾಂಡ್ ಮಾಫಿಯಾ ...ರುದ್ಧ ಜಗದೀಶ್ ಶೆಟ್ಟರ್ ಕೂಡ ಘರ್ಜಿಸುತ್ತಾರೆ. ...ುಖ್ಯಮಂತ್ರಿಯಂತೂ ಹೋಗಿ ಬಂದಲ್ಲೆಲ್ಲ ನೆಲಗಳ್ಳರನ್ನು ...ಟ್ಟ ಹಾಕ್ತೀನಿ ಎಂದೇ ಶಪಥಗೈಯ್ಯುತ್ತಿದ್ದಾರೆ. ಆದರೆ ...ೂಮಿಗಾಗಿ ರಕ್ತ ಹರಿಯುವುದು ಮಾತ್ರ ನಿಂತಿಲ್ಲ.

ಬೆಂಗಳೂರು ಭೂಗತಲೋಕದ ಇತ್ತೀಚಿನ ಬರ್ಭರ ...ತ್ಯೆಗಳ ಪೈಕಿ ವಿವೇಕ್‌ನಗರದ ರೌಡಿಗಳಾದ ಪಳನಿ ...ುತ್ತು ಆತನ ಎದುರಾಳಿ ಉಮಾಶಂಕರ್ ಹತ್ಯೆಗಳನ್ನು ...ೂರತುಪಡಿಸಿದರೆ ಮಿಕ್ಕಂತೆ ಬಹುಪಾಲು ಕೊಲೆಗಳೆಲ್ಲ ...ೂವಿವಾದದ ಕಾರಣಕ್ಕೆ ಸಂಭವಿಸಿದ ಹತ್ಯೆಗಳೇ. ಒಂದೋ ...್ಯಾಂಡಿಗೆ ಕೈಯಿಟ್ಟು ರೌಡಿಯಾಗಿರುತ್ತಾನೆ. ಅಥವಾ ...ಾಂದವರಿಗೆ ಲ್ಯಾಂಡ್ ಡೀಲರ್ ಬೆಂಗಾವಲಾಗಿರುತ್ತಾನೆ. ...ಬ್ಬ ರೌಡಿ ಕೊಲೆಯಾದ ಎಂದಾಕ್ಷಣ ಪೊಲೀಸರಾಗಲಿ, ...ತ್ರಿಕೆಗಳಾಗಲಿ ಅದರ ಹಿಂದಿರುವ ಭೂ ವಿವಾದವನ್ನಾಗಲಿ, ...್ಯಾಂಡ್ ಡೀಲಿನ ದುಡ್ಡಿನ ಪರಿಣಾಮವನ್ನಾಗಲಿ ...ಮನಿಸುವುದಿಲ್ಲ.

ಇತ್ತೀಚೆಗೆ ಬನಶಂಕರಿಯ ಟ್ಯಾಕ್ಟರ್ ರಾಮನ ...ೊಲೆಯಾಯಿತು. ಮೇಲುನೋಟಕ್ಕದು ಕಿಲ್ಲರ್ ಬಳ್ಳನ ...್ಯಾಂಗ್ ಹಳೇ ಜಿದ್ದಿನಿಂದ ಮಾಡಿದ ಕೊಲೆಯಾಗಿತ್ತು. ...ದರೆ ರಾಮ ಲ್ಯಾಂಡ್ ಡೀಲಿಗೆ ಕೈಹಾಕಿದ್ದ. ಅದರಲ್ಲೇ ...ದ್ದು ಮಾಡಿ ಗ್ಯಾಂಗ್ ಕಟ್ಟುತ್ತಿದ್ದ. ಆತನ ಎದುರಾಳಿ ...ನಶಂಕರಿಯ ಲಿಂಗ ಮತ್ತು ಕೋಳಿ ರಾಜೇಶರೂ ...ಟ್ಟಿಮಡು ವ್ಯಾಪ್ತಿಯಲ್ಲಿ ಲ್ಯಾಂಡ್ ಡೀಲಿಗಿಳಿದಿದ್ದರು. ...ವರಿಬ್ಬರ ಜಿದ್ದಿಗೆ ಸೈಟು ವಿವಾದ ಕಾರಣವಾಗಿತ್ತು.

ಇಲ್ಲಿಗೆ ಐದು ವರ್ಷದ ಹಿಂದೆ ಕೊಲೆಯಾದ ...ಮ್ಮೇನಹಳ್ಳಿ ತಮ್ಮಯ್ಯನನ್ನು ವಿಜಯನಗರದ ...ೋರಿಯಸ್ ಲ್ಯಾಂಡ್ ಡೀಲರ್ ರಾಜ್‌ಕುಮಾರ್ ...ಬಾತ ಸಾಕಿಕೊಂಡಿದ್ದ. ಹಾಗೇ ರಾಜ್‌ಕುಮಾರ್‌ನ ...ತ್ಯೆಗೆ ಬಂದಿದ್ದ ತಮ್ಮಯ್ಯನನ್ನು ಆತನ ಎದುರಾಳಿ ...ೀವಿಂದನ ಗ್ಯಾಂಗ್ ಕತ್ತರಿಸಿ ಹಾಕಿತ್ತು. ಇದಕ್ಕೂ ಮುನ್ನ ...ಲೆಯಾದವನು ಲೇಔಟ್ ಮಂಜ. ಬಹುಶಃ ಲ್ಯಾಂಡ್ ...ಲಿನಲ್ಲಿ ಆತ ದುಡ್ಡು ಮಾಡದೇ ಹೋಗಿ... ಜೇಡರಹಳ್ಳಿ ಕೃಷ್ಣಪ್ಪನ ವಿರುದ್ಧ ...ದೆತಟ್ಟುವ ಮಟ್ಟಿಗೆ ಗ್ಯಾಂಗ್ ಕಟ್ಟುತ್ತಿರ... ಅದೇ ಸಾಲಿಗೆ ಸೇರಿದವನು ಕಾಮಾಕ್ಷಿ...ಳ್ಯದ ಮಚ್ಚ. ಆತನಿಗೂ ಮಾಜಿ ಕೌನ್ಸಿಲರ್ ...ೀಪಾಲಯ್ಯನಿಗೂ ಇದ್ದ ಜಿದ್ದಾಜಿದ್ದಿಗೆ ...ಟ್ಟ ಸುರಿದವನು ಕಡಬಗೆರೆ ರಾಮಣ್ಣ. ...ಚ್ಚ ರಾಮಣ್ಣನ ಲ್ಯಾಂಡಿಗೆ ಕೈಹಾಕಿದ್ದ. ...ದ್ದಕ್ಕೆ, ಸುಂಕದ ಕಟ್ಟೆ, ಗೊಲ್ಲರಹಟ್ಟಿ, ...ರೋಹಳ್ಳಿ, ಲಗ್ಗೆರೆ, ರಾಜಗೋಪಾಲ...ರದ ಆಸುಪಾಸಿನಲ್ಲಿ ಎಲ್ಲೆಲ್ಲಿ ಮತ್ತೊಬ್ಬ... ಮುಲಾಮು 'ಕೈಹಾಕಿ'ದ್ದನೋ ಅಲ್ಲೆಲ್ಲ ಮಚ್ಚ ...ಟ್ಟ. ಗೋಪಾಲಯ್ಯ, ಕಡಬಗೆರೆ ರಾಮಣ್ಣ ...ಲಾಮು, ಆತನ ಬಂಟರಾದ ರಾಮ-ಲಕ್ಷ್ಮಣ ಎಲ್ಲರೂ ...ಕೊಂಡೇ ಮಚ್ಚನನ್ನು ಕೊಂದರು.



ಕೊರಂಗು ಕೃಷ್ಣ

ಅಲ್ಲಿಗೆ ಜೇಡರಹಳ್ಳಿ ಕೃಷ್ಣಪ್ಪ ಮತ್ತು ಆತನ ಬಂಟ ...ದಿಂದಿನ ಮೂವರ ಪ್ರಬಲ ವೈರಿಗಳು ನಿಕಾಲಿ...ಗಿದ್ದರು. ಈ ಮೂರು ಕೇಸಲ್ಲಿ ಜೇಡರಹಳ್ಳಿ ಕೃಷ್ಣಪ್ಪನನ್ನೇ ...ಲೀಸರು ಆರೋಪಿಯನ್ನಾಗಿಸಿದ್ದರು. ಯಾವತ್ತು ಮಚ್ಚನ ...ಯಾಯಿತೋ ಆತ ಯಾವ್ಯಾವ ಸೈಟಿಗೆ ಕೈ ...ದ್ದನೋ ಅಂಥ ಡೀಲುಗಳೆಲ್ಲ ಮುಲಾಮನ ಬಂಟರಾದ ...-ಲಕ್ಷ್ಮಣರ ಪಾಲಾದವು. ಒಬ್ಬ ರೌಡಿ ಕೊಲೆಯಾದನೆಂದರೆ, ಆತನ ಎದುರಾಳಿಗೆ ಕೋಟಿ ಲೆಕ್ಕದ ಲ್ಯಾಂಡ್ ವ್ಯವಹಾರಗಳು ಹುಡುಕಿಕೊಂಡು ಬರುತ್ತವೆಯೆಂದರೆ ಅದೆಂಥಾ ಪುಡಿ ರೌಡಿಯಾದರೂ ಒಂದು ಕೈ ನೋಡದೇ ಇರುತ್ತಾನಾ?

ಬಿಲ್ಡರ್ ಸುಬ್ಬರಾಜು ಹತ್ಯೆ ತಾನೇ ಇನ್ನೇನು? 2001 ಜನವರಿ ಐದಕ್ಕೆ ಶೇಷಾದ್ರಿಪುರದ ತನ್ನ ರಿಯಲ್ ಎಸ್ಟೇಟ್ ಅಡ್ಡೆಯಲ್ಲಿದ್ದ ಬಿಲ್ಡರ್ ಸುಬ್ಬರಾಜುನನ್ನು ಮುಂಬಯಿಯ ಶಾರ್ಪ್ ಶೂಟರ್ ಯೂಸುಫ್ ಬಚಾಕಾನನ್ನು ಭೂ ಬಟ್ಟು ಮುತ್ತಪ್ಪ ರೈ ಕೊಲ್ಲಿಸಿಬಿಟ್ಟ. ಬಚಕಾನನ್ನು ಬಿಲ್ಡರ್ ಸುಬ್ಬರಾಜು ಬಳಿ ಕರೆದೊಯ್ದದ್ದು ಸೈಯದ್ ಮತ್ತು ಆರಿಫ್ ಎಂಬ ರೈ ಬಂಟರು. ಆದಾಗಿ ಎರಡು ವರ್ಷದ ನಂತರ ಬಚಕಾನ್ ದೆಹಲಿ ಪೋಲೀಸರಿಗೆ ಸಿಕ್ಕುಬಿದ್ದ. ಆತನನ್ನು ಬೆಂಗಳೂರಿಗೆ ಕರೆತಂದು ಪರಪ್ಪನ ಅಗ್ರಹಾರದ ಜೈಲಲ್ಲಿಡುವ ಹೊತ್ತಿಗೆ ಸ್ವತಃ ಮುತ್ತಪ್ಪ ರೈ ಬಂಧಿತನಾಗಿದ್ದ. ಅದೇನಾಯಿತೋ ಬಚಕಾನನ ತಮ್ಮ ರಜಾಕ್ ಕೂಡ ಬೆಂಗಳೂರಿಗೆ ಬಂದು ಅಣ್ಣನ ಬಿಡುಗಡೆಗೆ ಓಡಾಡಿಕೊಂಡಿದ್ದ.



ಪೂನಿ ಆರಿಫ್ ರಫಿಕ್ ಆಲಿ ಗೂಂಡಾ

ಈ ಮಧ್ಯೆ ರಜಾಕ್ ಬಿಡದಿಯ ಎಂ.ಎಸ್. ರೆಸಾರ್ಟ್‌ನ ಮಾಲೀಕ ನಟೋರಿಯಸ್ ಲ್ಯಾಂಡ್ ಡೀಲರ್ ನೂರ್ ಉರ್ಫ್ ನೂರ್ ಅಹ್ಮದ್ ಶರೀಫನ ಜೊತೆ ಬಿಡದಿಯಲ್ಲಿ ಅಡ್ಡೆ ಹಾಕತೊಡಗಿದ. ತನ್ನ ಅಣ್ಣನ ಮೂಲಕ ಬಿಲ್ಡರ್ ಸುಬ್ಬರಾಜುನನ್ನು ಕೊಲ್ಲಿಸಿದ ಮುತ್ತಪ್ಪ ರೈನನ್ನೇ ಮುಗಿಸ್ತೀನಿ ಎಂದು ಅಲ್ಲಲ್ಲಿ ಹೇಳಿಕೊಂಡ. ಈ ಮಧ್ಯೆ ಬನ್ನೇರಘಟ್ಟದ ಮತ್ತೊಬ್ಬ ಭೂಕಳ್ಳ ಬಳೇಕಳ್ಳಿ ಸಂಪತ್ತು ಕೈ ಹಾಕಿದ್ದ ಭೂವಿವಾದವೊಂದಕ್ಕೆ ರಜಾಕ್ ಕೈಯಿಟ್ಟ. ಯಾವತ್ತು ಸಂಪತ್ತಿಗೆ ರಜಾಕ್‌ನ ಥ್ರೆಟ್ ಕಾಲ್ ಶುರುವಾಯಿತೋ ಆತನ ಆಯುಸ್ಸು ಮುಗಿದಿತ್ತು. 2005ರ ಮೇ ಆರರ ರಾತ್ರಿ ಸಿಸಿಬಿ ಎಸಿಪಿ ಬಿ.ಕೆ. ಶಿವರಾಮ್ ತಂಡ ಆತನನ್ನು ಹೊಸೂರು ರಸ್ತೆಯ ಸೆಂಟ್ ಪ್ಯಾಟ್ರಿಕ್ ಸ್ಮಶಾನದಲ್ಲಿ ಎನ್‌ಕೌಂಟರ್ ಮಾಡಿ ಕೊಂದಿತ್ತು.


ಬನ್ನೇರುಘಟ್ಟ ರಸ್ತೆಯ ಇನ್‌ಫೋಸಿಸ್ ಕಚೇರಿ ಹಿಂಭಾಗದ ನಾಲ್ಕೂವರೆ ಎಕರೆ ಜಮೀನಿಗೆ ಕೈಹಾಕಿದ್ದ ನಟೋರಿಯಸ್ ನೆಲಗಳ್ಳ ಬಳೇಕಳ್ಳಿ ಸಂಪತ್ತು ಒಂದೆಡೆ ಸಿಸಿಬಿ ಪೋಲೀಸರನ್ನೂ ದಿಕ್ಕುತಪ್ಪಿಸಿ ಮತ್ತೊಂದೆಡೆ ಮುತ್ತಪ್ಪ ರೈಗೂ ಫಿಟ್ಟಿಂಗ್ ಇಟ್ಟು ರಜಾಕ್‌ನನ್ನು ಮುಗಿಸಿದ್ದ.

ಬಿಲ್ಡರ್ ಸುಬ್ಬರಾಜು ಹತ್ಯೆಗೆ ಪ್ರತಿಫಲವಾಗಿ ರಜಾಕ್ ಬಲಿಯಾಗಿದ್ದ. ಈ ಎರಡೂ ಹತ್ಯೆಗಳ ಹಿಂದಿದ್ದದ್ದು once again ಅದೇ ಲ್ಯಾಂಡ್ ಡಿಸ್‌ಪ್ಯೂಟು!

ಇವತ್ತು ಬೆಂಗಳೂರಿನ ಯಾವುದೇ ರೌಡಿಯನ್ನು ತೆಗೆದುಕೊಳ್ಳಿ, ಆತ ಒಂದಲ್ಲಾ ಒಂದು ಲ್ಯಾಂಡ್ ಡೀಲಿಗೆ ಕೈಯಿಟ್ಟಿರುತ್ತಾನೆ. ಭೂಗಳ್ಳರನ್ನು ಕ್ರಿಮಿನಲ್ ಕೇಸಲ್ಲಿ ಜೈಲಿಗೆ ಹಾಕುತ್ತೇನೆನ್ನುವ ಮುಖ್ಯಮಂತ್ರಿ ವೇದಿಕೆಯಲ್ಲಿ ಹಾಗೆಂದು ಭಾಷಣ ಮಾಡಿದ್ದು ಬಿಟ್ಟರೆ ಈತನಕ ಭೂಗಳ್ಳರ ವಿರುದ್ಧ ಸಣ್ಣದೊಂದು ಪೋಲೀಸ್ ತಂಡವನ್ನು ಕೂಡ ರಚಿಸಿಲ್ಲ. ಸಿಸಿಬಿಯ ಮಾದರಿಯಲ್ಲೇ ಭೂಗಳ್ಳರ ದಮನಕ್ಕೆ ಪೋಲೀಸ್ ಪಡೆಯೊಂದನ್ನು ರಚಿಸಬಹುದಿತ್ತು. ಪಾಲಿಕೆ ಮತ್ತು ರೆವಿನ್ಯೂ ಅಧಿಕಾರಿಗಳ ವಿಶೇಷ ತನಿಖಾದಳವನ್ನಾದರೂ ನೇಮಿಸಬಹುದಿತ್ತು. ಕನಿಷ್ಠ ಭೂಗಳ್ಳರ ಹಾವಳಿಯಿಂದ ಬಡ ನಿವೇಶನದಾರರ ರಕ್ಷಣೆಗೆ ವಿಶೇಷ ಕಾಯ್ದೆಯನ್ನಾದರೂ ಮಾಡಬಹುದಿತ್ತು. ಇದ್ಯಾವುದೂ ಇಲ್ಲದೇ ಭೂಗಳ್ಳರನ್ನು ಜೈಲಿಗೆ ಹಾಕ್ತೀನಿ ಎಂದು ಕಂಡ ಕಂಡಲ್ಲಿ ಭಾಷಣ ಬಿಗಿಯುವುದರಿಂದ ಜನ ಯಾಮಾರುತ್ತಾರೆಯೇ ಹೊರತು ಒಬ್ಬೇ ಒಬ್ಬ ಭೂಗಳ್ಳನನ್ನು ಈತನಕ ಪೋಲೀಸರು ಮುಟ್ಟಿಲ್ಲ.

ಸದ್ಯ ಬೆಂಗಳೂರಿನ ಅಷ್ಟೂ ರೌಡಿಪಡೆಗಳಿಗೆ ಅನ್ನ ಹುಟ್ಟುತ್ತಿರುವುದೇ ಲ್ಯಾಂಡ್ ಡೀಲಿನಿಂದ. ಇದಕ್ಕೆ ಕೆಂಗೇರಿಯ ನಟೋರಿಯಸ್ ಲ್ಯಾಂಡ್ ಗ್ರ್ಯಾಬರ್ ಕುಪ್ಪಂ ಗಣೇಶನಿಗಿಂತ ಉದಾಹರಣೆ ಬೇಕಿಲ್ಲ. ಒಂದಾನೊಂದು ಕಾಲಕ್ಕೆ ತಮಿಳುನಾಡಿನಿಂದ ಟಿಕೆಟ್ಟಿಲ್ಲದೇ ಬಂದ ಕುಪ್ಪಂ ಗಣೇಶ ಇವತ್ತು ಎಂಬತ್ತು ಕೋಟಿಯ ಆಸ್ತಿವಂತ. ಅರ್ಧ ಬೆಂಗಳೂರಿನ ರೌಡಿಗಳನ್ನು ತನ್ನ ಜೊತೆ ಭೂಗಳ್ಳತನಕ್ಕೆ ಬಳಸಿಕೊಂಡ ಈತ ಪಾರ್ವತಿಪುರದ ರೌಡಿ ಮಾದೇಶನನ್ನು ಮುಂದಿಟ್ಟುಕೊಂಡು ನಾಗದೇವನಹಳ್ಳಿಯ ಜಗಜ್ಯೋತಿ ಹೌಸಿಂಗ್ ಸೊಸೈಟಿಯ ನೂರಕ್ಕೂ ಅಧಿಕ ಸೈಟುದಾರರನ್ನು ಒಕ್ಕಲೆಬ್ಬಿಸಿದ. ಕಾನೂನು ರಿತ್ಯ ಎಲ್ಲಾ ಸರಿಯಾಗಿದ್ದರೂ ಬಡದಿ ಪೋಲೀಸರು ನಿವೇಶನದಾರರನ್ನು ರಕ್ಷಿಸಲಿಲ್ಲ. ಏಕೆಂದರೆ ಸಿವಿಲ್ ಡಿಸ್‌ಪ್ಯೂಟಿನಲ್ಲಿ ಪೋಲೀಸರು ಕೈಹಾಕಕೂಡದೆಂದು ಗೃಹ ಇಲಾಖೆಯೇ ಸುತ್ತೋಲೆ ಹೊರಡಿಸಿದೆ.

ಇವತ್ತು ಬೆಂಗಳೂರಿನ ಬಹುತೇಕ ಪೋಲೀಸರಿಗೆ ಪರೋಕ್ಷವಾಗಿ ನೆಲಗಳ್ಳರ ಜೊತೆ ಕೈ ಜೋಡಿಸಿರುವಂತೆ ನೆರವಾಗಿರುವುದೇ ಈ ಆದೇಶ. ಬಡವನ ಸೈಟಿಗೆ ರೌಡಿ ಗ್ಯಾಂಗ್ ಒಂದು ಕೈಯಿಟ್ಟಿತೆಂದರೆ ಆತನಿಗೆ ಪೋಲೀಸ್ ರಕ್ಷಣೆಯಿಲ್ಲ. ಯಾವುದೇ ಪೋಲೀಸ್ ಠಾಣೆಗೆ ಹೋಗಿ ರಕ್ಷಣೆ ಕೋರಿದರೆ 'ಸಿವಿಲ್ ಡಿಸ್‌ಪ್ಯುಟು ಕೋರ್ಟಿನಲ್ಲಿ ಕೇಸ್ ಹಾಕ್ರಿ' ಎಂದು ಪೋಲೀಸರು ಸಾಗಹಾಕುತ್ತಾರೆ. ನಕಲಿ ದಾಖಲೆ ಸೃಷ್ಟಿಸುವ ರೌಡಿಯ ವಿರುದ್ಧ ಕೋರ್ಟಿನಲ್ಲಿ ಕೇಸು ಹಾಕಿ ಗೆಲ್ಲುವ ಹೊತ್ತಿಗೆ ಆತನ ಆಯುಸ್ಸೇ ಮುಗಿದಿರುತ್ತದೆ.



ಲಿಂಗರಾಜು

ಪದ್ಮನಾಭನಗರದ ಕೌನ್ಸಿಲರ್ ಶ್ರೀನಿವಾಸನ ಮಾವನ ಮಗ ಬಾಬು ಒಬ್ಬನೇ ಹೊಸಕೆರೆಹಳ್ಳಿ, ಇಟ್ಟಮಡು, ಕತ್ರಿಗುಪ್ಪೆ ಏರಿಯಾಗಳಲ್ಲಿ ಯಾವ ಪರಿ ಭೂಕಂಟಕನಾಗಿದ್ದಾನೆಂದರೆ ಬನಶಂಕರಿಯ ರೌಡಿ ಲಿಂಗನ ಗ್ಯಾಂಗನ್ನು ಛೂಬಿಟ್ಟು ಯಾವುದೇ ಖಾಲಿ ನಿವೇಶನ ಕಂಡರೂ ಆಕ್ರಮಿಸಿಕೊಳ್ಳುತ್ತಾನೆ. ಸೈಟಿನ ನಿಜವಾದ ಮಾಲೀಕನೇನಾದರೂ ಚೂರುಪಾರು ಧೈರ್ಯವಂತನಾಗಿದ್ದರೆ ಬಂದು ಲಿಂಗನ ಗ್ಯಾಂಗನ್ನು ಕೇಳುತ್ತಾನೆ. ಏನಿದ್ದರೂ ಅಣ್ಣನ ಹತ್ರ ಮಾತಾಡು ಎಂದು ಲಿಂಗನ ಹುಡುಗರು ಮಾಲೀಕನನ್ನು ಬಾಬು ಮನೆಗೆ ಸಾಗ ಹಾಕುತ್ತಾರೆ. ಬಾಬು ಎಂಥಾ ಕಿಲಾಡಿಯೆಂದರೆ ಬಂದ ಸೈಟುದಾರನ ಮೂಲಕವೇ ಆತನ ದಾಖಲೆಯ ಜೆರಾಕ್ಸ್ ಪಡೆದುಕೊಂಡು ಇಂಥಾ ದಿನ ಬಂದು ತನ್ನನ್ನು ಕಾಣು ಎನ್ನುತ್ತಾನೆ. ಈತನಿಗಿಂತಲೂ ಒಂದು ತಿಂಗಳು ಮೊದಲಿನ ದಿನಾಂಕ ಹಾಕಿ ನಕಲಿ ದಾಖಲೆ ಸೃಷ್ಟಿಸುತ್ತಾನೆ. ತನ್ನದೇ ಅಸಲು ನಿನ್ನದು ನಕಲು ಎನ್ನುತ್ತಾನೆ. ಪೋಲೀಸರು ಮೊದಲೇ ಡೀಲಿಗೆ ಬುಕ್ ಆಗಿರುತ್ತಾರಾದ್ದರಿಂದ ನಿವೇಶನದಾರ ಒಂದೋ ಜೀವನ ಪರ್ಯಂತ ಕೋರ್ಟಿಗೆ ಅಲೆಯಬೇಕು. ಅಥವಾ ಕೊಟ್ಟಷ್ಟು ದುಡ್ಡು ಇಸಿಕೊಂಡು ತನ್ನ ಸೈಟು ಬರಕೊಡಬೇಕು.



ಕೊಲೆಯಾದ ಮಚ್ಚ

ಇನ್ನೂ ಕೆಲವರು ರೌಡಿಯ ಕೈಗೆ ಅಷ್ಟಿಷ್ಟು ದುಡ್ಡು ಕೊಟ್ಟು ಸೈಟು ಬಿಡಿಸಿಕೊಳ್ಳುತ್ತಾರೆ. ಬಂದ ದುಡ್ಡಲ್ಲಿ ರೌಡಿ ಮತ್ತು ಪೋಲೀಸರು ಸಮಸಮ ಹಂಚಿಕೊಳ್ಳುತ್ತಾರೆ.

ಇದು ಬೆಂಗಳೂರಿನ ಬಹುತೇಕ ಲ್ಯಾಂಡ್ ಡೀಲ್‌ಗಳ ಮರ್ಮ. ಯಾವುದೋ ಕಾಲಕ್ಕೆ ಸೊಸೈಟಿಯವರು ಮಾರಿದ ನಿವೇಶನಕ್ಕೆ ರೌಡಿಗಳು ಮೂಲ ಭೂ ಮಾಲೀಕನಿಂದ ಪತ್ರ ಬರೆಸಿಕೊಂಡು ಎಂಟ್ರಿ ಪಡೆಯುತ್ತಾರೆ. ಸದ್ಯ ಮಾಗಡಿ ರೋಡ್, ಸುಂಕದ ಕಟ್ಟೆ, ಲಗ್ಗೆರೆ, ಹೇರೋಹಳ್ಳಿಗಳ ಸಮಸ್ತ ಲ್ಯಾಂಡ್ ಡೀಲುಗಳನ್ನು ರೌಡಿ ಮುಲಾಮ ಮತ್ತು ಆತನ ಬಂಟರಾದ ರಾಮ-ಲಕ್ಷ್ಮಣ ನಿಭಾಯಿಸುತ್ತಾರೆ. ಆತನಿಗೆ ಎದುರು ನಿಂತು ಬಡಿದಾಡಿದವನು ಮಚ್ಚ. ಮಚ್ಚನ ಹತ್ಯೆಗೆ ಪ್ರತಿಕಾರವಾಗಿ ಕೋತಿರಾಮನ ಗ್ಯಾಂಗ್ ಮುಲಾಮನ ಮತ್ತೊಬ್ಬ ಬಂಟ ಮಂಡ್ಯ ಕೃಷ್ಣನನ್ನು ಕೊಂದಿತು.

ಈ ಮಂಡ್ಯ ಕೃಷ್ಣ ಇದ್ದಷ್ಟೂ ದಿನ ಲಗ್ಗೆರೆಯಲ್ಲಿ ಕಂಡಕಂಡವರ ಸೈಟು ಕಿತ್ತುಕೊಂಡ. ಪೋಲೀಸರು ನೆಟ್ಟಗಿದ್ದರೆ ಲಗ್ಗೆರೆಯ ನಕಲಿ ದಲಿತ ಲೀಡರ್ ಮುನಿಭೈರ, ಸೊಸೈಟಿ ಭೈರಪ್ಪ, ಲಕ್ಷ್ಮಿಕಾಂತ, ಛಪ್ಪರ್ ಗುರುಪತಿ, ಅಂದಾನಪ್ಪ ಎಲ್ಲರನ್ನೂ ಯಾವತ್ತೋ ಜೈಲಿಗೆ ಕಳಿಸಬೇಕಿತ್ತು. ಕನಿಷ್ಠ ಇವರನ್ನು ರೌಡಿ ಪಟ್ಟಿಗಾದರೂ ಸೇರಿಸಬೇಕಿತ್ತು. ಹಾಗೇ ಯಲಹಂಕ ವ್ಯಾಪ್ತಿಗೆ ಬಂದರೆ ಅಲ್ಲಿ ಪೋಲೀಸರೇ ರೌಡಿಗಳನ್ನು ಛೂಬಿಟ್ಟು ಲ್ಯಾಂಡ್ ಡೀಲಿಗಿಳಿದಿದ್ದಾರೆ. ಹಿಂದಿದ್ದ ಇನ್ಸ್‌ಪೆಕ್ಟರ್ ರಾಮಚಂದ್ರ ಪುಡಿ ರೌಡಿ ಮುಬಾರಕ್‌ನನ್ನು ಮುಂದೆ ಬಿಟ್ಟು ಇಪ್ಪತ್ತೆರಡು ಸೈಟುಗಳನ್ನು ದೋಚಿದ್ದ. ಬ್ಯಾಟರಾಯನಪುರ ನಗರಸಭೆಯ ಮಾಜಿ ಅಧ್ಯಕ್ಷ ಹನುಮಂತೇಗೌಡ ತಮಿಳು ರೌಡಿಗಳಾದ ಕಾಲಾಪತ್ಥರ್, ಪುಷ್ಪ ಮತ್ತು ಮಣಿಭಾರತಿಯನ್ನು ಮುಂದಿಟ್ಟುಕೊಂಡೇ ಇವತ್ತಿಗೂ ಲ್ಯಾಂಡ್ ಡೀಲ್ ನಡೆಸುತ್ತಿದ್ದಾನೆ.

ಜ್ಞಾನಭಾರತಿಯಿಂದ ಬನಶಂಕರಿ ತನಕ ಜೇಡರಹಳ್ಳಿ ಕೃಷ್ಣಪ್ಪನ ಸಾಮ್ರಾಜ್ಯವಾದರೆ, ಉತ್ತರ ಹಳ್ಳಿಯಿಂದ ಬಿಡದಿ ತನಕ ಕಬಡ್ಡಿ ಬಾಬು ಶಿಷ್ಯರ ಹಾವಳಿಯಿದೆ. ಬಸವೇಶ್ವರ ನಗರ-ವಿಜಯನಗರ ಸುತ್ತಮುತ್ತಲ ಲ್ಯಾಂಡ್ ಡೀಲುಗಳೆಲ್ಲ ಮತ್ತೊಬ್ಬ ರೌಡಿ ಕಾಂತ ನಿಭಾಯಿಸುತ್ತಾನೆ. ಜಯನಗರದಿಂದ ಕನಕಪುರದ ರಸ್ತೆಯ ಜೆ.ಪಿ. ನಗರದ ಸುತ್ತಮುತ್ತ ರೌಡಿ ಮಾಹಿಮ್ ಲ್ಯಾಂಡ್ ಡೀಲ್ ನಿಭಾಯಿಸುತ್ತಾನೆ. ಉತ್ತರಹಳ್ಳಿ ಶಾಸಕ ಅಶೋಕ್, ಶಿವಾಜಿನಗರದ ಎಮ್ಮೆಲ್ಲೆ ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಜಯನಗರದ ಶಾಸಕ ರಾಮಲಿಂಗಾರೆಡ್ಡಿ, ಮಲ್ಲೇಶ್ವರಂ ಶಾಸಕ ಸೀತಾರಾಂ ಹೇಳಿಕೇಳಿ ಅಧಿಕೃತ ಲ್ಯಾಂಡ್ ಡೀಲರುಗಳೇ. ಬನ್ನೇರುಘಟ್ಟ ರಸ್ತೆಯಲ್ಲಿ ಅಷ್ಟೂ ಲ್ಯಾಂಡ್ ವಾರ್‌ಗಳಲ್ಲಿ ಕುಮಾರಣ್ಣನ ಶಿಷ್ಯ ಪಡೆಯಿದೆ.


ಒಂದೆಡೆ ರಾಜಕಾರಣಿಗಳು, ಮತ್ತೊಂದೆಡೆ ರೌಡಿಗಳು, ಮಗದೊಂದೆಡೆ ಪೋಲೀಸರು..... ಪರಿಸ್ಥಿತಿಯೇ ಹೀಗಿರುವಾಗ ಭೂಗಳ್ಳರನ್ನು ಜೈಲಿಗೆ ಹಾಕ್ತೀನಿ ಎನ್ನುವ ಮುಖ್ಯಮಂತ್ರಿ ಮಾತಿಗೆ ಅರ್ಥವುಂಟೆ?

ದುರಂತವೆಂದರೆ ಇವೆಲ್ಲಕ್ಕೂ ಬಲಿಪಶುಗಳಾಗುವವರು ಜನಸಾಮಾನ್ಯರೆ. ರೌಡಿಗಳು ದುಡ್ಡು ಮಾಡುತ್ತಾರೆ. ಗ್ಯಾಂಗ್ ಕಟ್ಟುತ್ತಾರೆ. ಲ್ಯಾಂಡ್ ಡೀಲಿಗಿಳಿದು ಹೊಡೆದಾಡಿ ಸಾಯುತ್ತಾರೆ. ಸದ್ಯ ಬೆಂಗಳೂರಿನ ತುಂಬ ರೌಡಿಗಳು ಬಡಿದಾಡುತ್ತಿದ್ದಾರೆಂದರೆ ಅದಕ್ಕೆ ಅತೀ ಮುಖ್ಯ ಕಾರಣವೇ ಲ್ಯಾಂಡ್ ಡೀಲ್. ಇದ್ಯಾವುದಕ್ಕೂ ಕೊನೆಯಿಲ್ಲವೆ? ಪರಿಹಾರವಿಲ್ಲವೆ?

...ಗದ ರೂಪ ಬಣ್ಣಗಳು ನಿಶ್ಚಿತವಾದವು. ಚಿತ್ರದಲ್ಲಿ ಅವುಗಳ ಗುರುತು ಸಿಗಲೇಬೇಕು. ಆ ಮಟ್ಟಿಗೆ ಅವು ನಿಸರ್ಗವನ್ನು ಬಿಂಬಿಸಬೇಕು. -ಡಾ. ಶಿವರಾಮ ಕಾರಂತ

ನನ್ನಂಗೆ ಸೀರೆ ಉಡತಿದ್ದ ಸಾಬಿರ್‍ಯಲ್ಲ ಬುರ್ಕಾ ಹಾಕ್ತ ಅವ್ರೆ!

ರೇಣಬಿಸಿಲನ್ನು ಸಹಿಸಲು ಹಟ ತೊಟ್ಟಂತೆ ಚಿಕ್ಕಣ್ಣನ ಹೋಟೆಲ್ ಸಮೇತ ಅಲ್ಲಿದ್ದ ಸಮಸ್ತವೂ ತಯಾರಾಗಿ ಕುಳಿತಿತ್ತು. ಹಿಡಿದ ಸಂಗತಿಯನ್ನು ಪೂರ್ತಿ ಮಾತ ನಾಡುವ ಉತ್ಸಾಹ ಅಲ್ಯಾರಿಗೂ ಇರಲಿಲ್ಲ. ಆದರೂ ಸನ್ನಿವೇಶವನ್ನು ಶೂನ್ಯವಾಗಿ ಬಿಡುವ ಮನಸ್ಸೂ ಇರಲಿಲ್ಲ. ಆದ್ದರಿಂದ, ಸೀರ ಹಟಾತ್ತನೆ ಕಂಕುಳು ಕೆರೆದುಕೊಂಡು ಮೂಸುತ್ತಾ ಮುಖ ಸಿಂಡರಿಸಿ,



"ಆ ಧರಮಸಿಂಗ್ಯಾಕೆ ಅಂಗಾದ?" ಎಂದ.

"ಅವುನೇನಾಗಿದ್ನನೂ? ತ್ವಲೆ ತುಂಡಿದ್ದಂಗವುನೆ" ಎಂದ ಉಗ್ರಿ.

"ತ್ವಲೆ ತುಂಡಲ್ಲ, ಉಳ್ಳಿ ಮೂಟೆ ಅನ್ನು?"

"ಅದ್ಯಾಕ್ ಮಾವ ಅಂಗಂತೆ?" ಎಂದಳು ಜುಮ್ಮಿ.

"ಇಸಿಸಿ ತ್ವಲೆ ತುಂಡು ಗಟ್ಟಿ ಪದಾರ್ಥ ಕಣೆ, ಯಾತಕಾರ ಬತ್ತದೆ. ಉಳ್ಳಿ ಮೂಟೆ ಯಾತಕ್ಕೆ ಬಂದತೂ?"

"ಅಂಗಾದ ಅಂದ್ಕಲ್ಲ ಅವುನೇನಾಗ್ಯವುನೇ?"

"ಕುಮಾರಸ್ವಾಮಿ ವಳ್ಳೆ ಮುಕ್ಯಮಂತ್ರಿ, ವಳ್ಳೆ ಕ್ಯಲಸನೆ ಮಾಡ್ತ ಅವುನೆ ಅಂದಿದ್ದನಂತೆ."

"ಇರದೇಳ್ಕವುನೆ" ಎಂದ ಕಾಳಮಾವ.


"ಇರದೇಳ್ಕವುನೆ ಅಂದ್ರೆ ಇವುನು ಕ್ಯಟ್ಟ ಮುಖ್ಯಮಂತ್ರಿ ಯಾಗಿದ್ದ ಅಂತ ತಾನೆ?"

"ಅಂಗೆ ಆಯ್ತಪ್ಪ."

"ಅಲ್ಲಿಗೆ ಇವುನ್ನತ್ತಗೆ ಉಳ್ಳಿಸಿ, ಆ ಕುರ್ಚಿ ಮ್ಯಾಲೆ ಕುಮಾರಸ್ವಾಮಿ ಕುಂತಿದ್ದು ಸರಿ ಅಂದಂಗಾಯ್ತು. ಅಂದ್ರೆ ನನ್ನನ್ನು ಇಳಿಸಿದ್ದು ಸರಿ ಅಂತ ಅವುನೆ ಒಪ್ಪಿ ಗಂಡಂಗಾಯ್ತು."

"ಅವುನಂದುದ್ದು ಅಲ್ಲಿಗೇ ಬತ್ತಾ ಅದಪ್ಪ."

"ಆ ಕಾಂಗ್ರೆಸ್ ಬಡ್ಡೆತ್ತವು ಇಂಥೋನ್ನ ವಿರೋಧ ಪಕ್ಷದ ನಾಯ್ಕ ಅಂತ ಮಾಡಿಕಂಡವುರಲ್ಲಾ, ಆ ಬಡ್ಡೆತ್ತವುಕೆ ಏನಾರ ಮಾನ ಮರಿಯಾದಿ ಇದ್ದತೇ ಅಂತ?"



"ಅದ್ಯಾಕ್ಲ ಅಂಗೆ ಬೋದಿ ಕಾಂಗ್ರೆಸ್‌ನವಾ?"

"ಅಲ್ಲಾ ಕಣೆ, ಹಾಡಗಲು ಇಂಗ್ಲೀಸ್‌ನೋರು ಟಿಪ್ಪು ಸುಲ್ತಾನನ ಮ್ಯಾಲೆ ಬಿದ್ದು ಸಾಯಿಸಿ ಶ್ರೀರಂಗ ಪಟ್ಟಣ್ಣ ಕೈಗೆ ತಗಂಡಂಗೆ ಈ ಕುಮಾರ ಸೂರ್ಯ ಸ್ವಾಮಿ ಮುಳುಗೋವತ್ತಲ್ಲಿ ರಾಜ್ಯಪಾಲನ್ನು ಭೇಟಿ ಮಾಡಿ ಧರಮಸಿಂಗನಿಗೆ ಕೊಟ್ಟ ಬೆಂಬಲ ವಾಪಸ್ಸು ತಗಂಡು ಅನಾಮತ್ತು ಕೆಡಗಿಬುಟ್ಟ. ಅದು ಈ ಮುಂಡೆ ಮಗನಿಗೆ ಇವತ್ತಿಗೂ ಅವಮಾನವಾಗಿ ಕಾಣಲೇಯಿಲ್ಲ ನೋಡು."

"ಇಸಿಸಿ, ಅವುಮಾನ್ಯಂತೆದ್ದ? ಆರುಳೋನು ಮುದಿಯೆತ್ತ ಬದ್ನಾಸಿ ಯಳೆ ಎತ್ತಲ್ಲಿ ಆರೂಡಿದಂಗೆ ಒಂದಿದು ನ್ಯಡಕಂಡೋಯ್ತಿರಿರುವಾಗ ಅದ ಧರಮ ಸಿಂಗನೇ ಮೆಚ್ಗಂಡವುನೆ ಇದರಲ್ಲಿ ತಪ್ಪೇನೂ?" ಎಂದ ಕಾಳಮಾವ.

"ಅಂಗಲ್ಲ ಕಣಮಾವ, ಕಾಂಗ್ರೆಸ್‌ನೋರು ಇನ್ನೂ ಯಾರ್‍ಯಾರಿಗೋ ಫೋನು ಮಾಡುವಾಗ ಅಪ್ಪ ಮಕ್ಕಳು ಯಂತ ಕ್ಯಲಸ ಮಾಡಿದ್ರು ನೋಡಿ, ನಂಬಿಸಿ ಕೈಕೊಟ್ರು, ಇಂತ ಜನವ ನಾವಿಲ್ಲಿಗಂಟ ನೋಡೇಯಿಲ್ಲ ಅಂತ ಫೋನು ಮಾಡ್ತನಂತೆ. ಹಿಂಗೆ ವಳಗೊಂದು ವರ ಗೊಂದು ಮಾತಾಡದ್ಯಾಕೆ ಅಂತ?"

"ಯಲ್ಲ ಅಂಗೆ ಅಲವೇನ್ನ ಇರದು? ಈ ರಾಜಕೀಯ ಕ್ಯಸಿಯೊ ನನಮಕ್ಕಳು ಯಾವತ್ತು ನಿಜ ಮಾತಾಡಿದ್ದರೂ? ನೀನಿದ್ದಾಗ ನಿನ್ನಂಗೆಯಾ, ಅವನಿದ್ದಾಗ ಅವುನಂಗೆಯ, ಹಿಂಗೆ ಕಾಲಕ್ಕ ತಕ್ಕಂತೆ ಯಾಸ ಹಾಕೊ ಜನಗಳ ಮಾತುನೂ ದಿಟ ಅನ್ನಕಂಡಿದ್ದಿಯಾ ನೀನು?"

"ನಾನ್ಯಾವತ್ತೂ ಅಂಗೆ ತಿಳಕಂಡಿಲ್ಲ ಕಣ ಮಾವ. ಆದ್ರು ಈ ಧರಮಸಿಂಗ ಇದ್ಯಾಕಿಂಗೆ ಮಾತಾಡಿದ ಅಂತ ಯೇಚನೆ ಮಾಡತಿದ್ದೆ ಅಷ್ಟೆಯಾ" ಎಂದು ಉಗ್ರಿ ಸಮಜಾಯಿಸಿ ಕೊಡುತ್ತಿದ್ದಾಗ ಸೀರ,

"ಅದ್ಯಾವುದೊ ಹುಬಳಿ ಜಾಗದ ಗಲಾಟ ತಿರಗ ಹತ್ತಿಗಳಂಗೆ ಕಾಣ್ತ ಅದಲ್ಲ" ಎಂದ.

"ಅದಾಗ್ಲೆ ದ್ಯಾವೇಗೌಡ ಬಗೆಹರಿಸಿ ಕೈತ್ವಳಕಂಡಿರ ಲಿಲ್ಲವೆ?" ಎಂದ ಕಾಳಮಾವ.

"ಜಾಗ್ಯಾರದದೂ" ಎಂದ ಸೀರ.

"ಸಾಬರದಂತೆ."

"ಸಾಬರದ್ಯಾವ ಜಾಗಿರತದ್ದ? ಯಲ್ಲ ನಮ್ಮದೆ ತಾನೆಯಾ."

"ಓಹೊಹೊ, ಅಂಗರೆ ಇಡೀ ಕರ್ನಾಟಕ ನಿನ್ನ ಕಾತೆಲದೆ ಅನ್ನು?"

"ಲೈ, ಸಾಬರಿಗೆ ಸ್ವಂತ ಜಾಗ ಅಂತ ಯಾವುದಿದ್ದತ್ಲ? ಯಲ್ಲಾ ಸರ್ಕಾರದ್ದೆ ಆಗಿರತದೆ. ಅಲ್ಲಿ ಇವುರು ಇರತರೆ. ನಮ್ಮಂಗೆ ಕಾಲದಿಂದ ಇಲ್ಲೆ ಇದ್ದೊ ಅನ್ನಂಗಿದ್ದರೆ ಅವುರು" ಎಂದ ಸೀರ.

"ಸಾಬರು ಅಂದೇಟಿಗೆ ನ್ಯಾಪುಕ್ಕೆ ಬತ್ತು ಕಂಡ್ಯ ಉಗ್ರಿ. ಈಚಿಗೆ ಎಲ್ಲಿ ನೋಡಿದ್ರು ಸಾಬರು ಬುರ್ಕಾ ಹಾಕಿರತರೆ ಕಂಡ್ಯ. ಮದ್ದಿಗೆ ನಮ್ಮಂಗೆ ಸೀರೆ ಉಡತಿದ್ರು. ಅದ್ಯಾಕಂಗೆ ಬುರ್ಕಾ ಹಾಕ್ಯತರೇ?" ಎಂದಳು ಜುಮ್ಮಿ.

"ಕರಟ್ ಕಣಕ್ಕ. ನಾನೂ ಅಬ್‌ಜರು ಮಾಡಿದ್ದಿನಿ. ಇತ್ತೀಚೆಗೆ ಬುರ್ಕಾಗಳು ಜಾಸ್ತಿಯಾಗಿ ಬುಟ್ಟೊ" ಎಂದುಕೊಂಡು ವಾಟಿಸ್ಸೆ ಬಂದ.

"ಅದು ಹಿಂಗಂತೆ ಕಣೊ. ಸಾನಿಯಾ ಮಿರ್ಜಾ ಅಂತ ವಚ್ಚೆಣ್ಣ ಮಗಳು ಬ್ಯಾಡಮಿಂಟನ್ ಆಡ್ತಳೆ. ಅವುಳು ಚಿಡ್ಡಿ ಹಾಕ್ಯಂಡು ಆಟ ಆಡದ ನೋಡಕ್ಯಾಗದೆ ಸಾಬರು ಗಲಾಟ ಮಾಡಿದ್ರು. ಅದಕೇನೂ ಅವುಳು ಕೇರ ಮಾಡ ಲಿಲ್ಲ. ಅದಕ್ಕೆ ಈ ಹಾಳು ಸಾಬರು ಸಿಟ್ಯಾಗಿ ಯಲ್ಲಾ ಹೆಂಗಸರಿಗೂ ಬುರ್ಕಾ ಹಾಕ್ತಯಿದ್ದರಂತೆ."

"ಬುರ್ಕಾ ಇವುರಾಕ್ತರೆ ವರತೂ, ಯಾವೆಂಗಸರೂ ಹಾಯ್ಕಳದಿಲ್ಲ ಕಣೊ ಉಗ್ರಿ. ಪಾಪ ನಮ್ಮ ಅಬ್ದುಲ್ಲಣ್ಣನ ಮಗಳಿಗೆ ಅವುಳ ಗಂಡ ಬುರುಕ ತಂದಿದ್ದ. ಆ ಹುಡುಗಿ ನಾನಾಯ್ಕಳದಿಲ್ಲ ಅಂತ ಅಳತ ಕುಂತಿದ್ದ ನಾನೇ ನೋಡಿದೆ."

"ಬರೀ ಕಣ್ಣು ಮಾತ್ರ ಕಾಣಂಗೆ ಹಾಯ್ಕತರೆ ಕಂಡ್ಯ. ಈ ಬಿಸಿಲಿಗೂ, ಚಿವರಿಗೂ ಯಂಗೆ ತಡಕಂಡರೊ ಏನೊ?" ಎಂದಳು ಜುಮ್ಮಿ.

"ಸಾಬರುಡುಗ್ರು ಏನು ಮಾಡ್ತ ಅವುರೆ ಗೊತ್ತೆ? ಈಗ ಆ ಬುರ್ಕಿಗಳ ನೋಡಕ್ಕೆ ಹೋಗದಿಲ್ಲ, ನಮ್ಮ ಲೇಡೀಸ್‌ನೆ ನೋಡ್ತ ನಿಂತಗತ್ತರೆ" ಎಂದ ವಾಟಿಸ್ಸೆ.

"ವಡಿಬೇಕು ಲೌಡಿಗಂಡ್ರಿಗೆ ಬಾಲ ಮುರಿಯಂಗೆ" ಎಂದ ಸೀರ.

"ಈ ಸಾಬರ ಬುರ್ಕಾ ಇನ್ನೊಂದು ಕ್ಯಲಸ ಮಾಡ್ತ ಅದಂತೆ ಕಣೊ" ಎಂದ ಉಗ್ರಿ.

"ಏನಪ್ಪ ಅದು?"

"ಸಾಬರುಡುಗನ ಜ್ವತೆ ಹೋಗೊ ಹಿಂದೂ ಹುಡುಗಿ ಬುರಕ ಹಾಯ್ಕಂಡು ಹೋಗಿ ಬತ್ತಾಯಿದ್ದಳಂತೆ. ಅದ್ಯಂಗೆ ಪತ್ತೆ ಹಚ್ಚತೀ?"

"ಓಹೊ, ಇದೇ ಪ್ಲಾನಿಗೆ ಸೂಳೆಮಕ್ಕಳು ಬುರುಕ ಜಾರಿಗೆ ತಂದಿರಬೇಕು ಕಂಡ್ಯಾ" ಎಂದು ಸೀರ ಹಲ್ಲು ಕಡಿದ.

"ಅದಂಗಲ್ಲ ಕಣಮಾವ. ಸಾಬರು ಹಿಂದೂಗಳಿಗೆ ಉತ್ತರ ಕೊಡದ್ಯಂಗೆ ಅಂದ್ರೇ, ಹೆಚ್ಚು ಮತಾಂಧರಾಗೊ. ಮೂಲಕ ಅಂತೆ."

"ಅದು ಬಾಬರಿ ಮಸೀದಿ ಬಿದ್ದ ಮ್ಯಾಲೆ ಜಾಸ್ತಿ ಯಾಯ್ತು ಕಣೊ ಉಗ್ರಿ. ಮದ್ದಿಗೆ ಅವುರು ಮಾಡೊ ನಮಾಜು ಯಾರಿಗೆ ಕೇಳಿತಿತ್ತೊ ಇಲ್ಲವೋ? ಈಗ ತಲೆ ಮ್ಯಾಲೆ ಹ್ವಡದಂಗೆ ಕೂಗೊ ಮೈಕ್ ತಂದವುರೆ. ಯಾವಾಗ ಕೂಗ್ತರೆ, ಅಬ್‌ಜರು ಮಾಡಿದ್ದಿಯಾ?" ಎಂದ ವಾಟಿಸ್ಸೆ.

"ನಾನು ಮಾಡಕ್ಯೋಗಿಲ್ಲ. ಅಂತೂ ಸಾಬರು ಮದ್ಲಿನಂಗಿಲ್ಲ ಅಂತ ತಿಳಕಂಡಿದ್ದೀನಿ" ಎಂದ ಉಗ್ರಿ.

"ಅದೊಂದು ಜನಾಂಗ ಮಾತ್ರ ಒಗ್ಗಲೇಯಿಲ್ಲವಲ್ಲ" ಎಂದ ಕಾಳಮಾವ.

"ಅಂಗೆ ನೋಡಿದ್ರೆ ಯಾವ ಜನಾಂಗ ಯಾರಿಗೊ ಗ್ಯದೆ ಮಾವ ಯಲ್ಲಾ ಅವುರಷ್ಟಕವುರವುರೆ; ನಮಿಗಂಗೆ ಕಾಣತಯಿರಬವುದು. ಇಷ್ಟಲ್ಲ ಮಾತಾಡೊ ನೀನು, ವಲೇರ ಮನಿಗೋಗಿದ್ದಿಯಾ, ಇಲ್ಲ ಮಾದಿಗರ ಮನಿ ಗೋಗಿದ್ದಿಯಾ? ಅವುರೇನಾರ ಗುಂಪೆಲ್ವಂಟ್ರೆ ಈ ಸಾಬರಿ ಗ್ಯಂಗೆ ಬ್ಯೆತಿರೊ ಅಂಗ್ಯೆ ಬ್ಯೆತಿರಿ."

"ಬಟ್ ಕ್ಯಾಸ್ಟಿಸಮ್ ಜಾಸ್ತಿಯಾಗ್ತ ಅದೆ ಕಣೊ ಉಗ್ರಿ" ಎಂದ ವಾಟಿಸ್ಸೆ.

"ಯಾರಲ್ಲೀ?"

"ಯಲ್ಲರಲ್ಲುವೆ. ಇಂತ ಜನಾಂಗ ಅಂತ ಇಲ್ಲ, ಯಲ್ಲರಲ್ಲೂ ಜಾಸ್ತಿಯಾಯ್ತಾ ಅದೆ."

"ಆಯ್ತಪ್ಪ, ವಲೇರು, ಮಾದಿಗರಲ್ಲಿ ಜಾತಿಯತೆ ಜಾಸ್ತಿಯಾದ್ರೆ, ಅವುರೇನು ಮಾಡಬಲ್ಲರು."

"ಜಾತಿಯತೆ ಜಾಸ್ತಿ ಅಂದ್ರೆ, ನಾವು ಜಾತಿಗೇ ಅಂಟ ಗಂಡಿರತಿವಿ ಅಂತ ತಾನೆ?"

"ಊ ಮತ್ತೆ?"

"ಆ ತರ ವಲಿಮಾದಿಗರು ಹೇಳಕ್ಯಾದತೆ, ಹೇಳ್ತರ?" ಅವುರೇನಿದ್ರು ಬುಡಿಸಿಗಳಕೇ ವದ್ದಾಡ್ತರೆ."



"ಜಾತಿಯಿಂದ ಬುಡಿಸಿಗಳಕ್ಕೆ ವಂಟರೊ ಜನಾಂಗ ಅಂದ್ರೆ ಅವುರೆ ಕಣೊ."

"ಬುಡಿಸಿಗಳದ್ಯಾಕ್ಲ? ಸುಮ್ಮನಿದ್ರಾಗದೆ? ಅದೇನು ನಾವು ಮಾಡಿದ್ದೆ ಬುಡಿಸಿಕಳಕೆ? ನಮ್ಮ ನಮ್ಮ ಕ್ಯಲಸ ನಾವು ಮಾಡಿಕಂಡೋದ್ರಾಯ್ತಪ್ಪ, ಯಲ್ಲಾ ಚನಾಗಿರತದೆ" ಎಂದ ಕಾಳಮಾವ.

"ನೋಡೋ ಉಗ್ರಿ, ಜಾತಿ ಸಮಸ್ಯೆ ಇಲ್ಲೇ ತಲ ಊರ್‍ಯದೆ. ಅದೂ ನಮ್ಮ ದ್ವಡಪ್ಪನ ರೂಪದಲ್ಲಿ. ಕಾಳ ದ್ವಡಪ್ಪನ ಮಾತ ಕೇಳಿದ್ರೆ ಮಾಸ್ತಿ ವ್ಯಂಕಟೇಶ್ ಅಯ್ಯಂಗಾರಿ ಮಾತ ಕೇಳಿದಂಗಾಯ್ತು" ಎಂದ ವಾಟಿಸ್ಸೆ.

"ಮಾಸ್ತಿ ಎಂಟ ಕೇಸಯ್ಯಂಗಾರಿ ಅಂದ್ರೆ ಅವುನ್ಯಾರ್ಲ?" ಎಂದಳು ಜುಮ್ಮಿ.

"ಇದೇನಕ್ಕ ನೀನು ಕುಮಾರಸ್ವಾಮಿ ತಂಗಿಯಂಗೆ ಕೇಳ್ತಿ? ಮಾಸ್ತಿ ವೆಂಕಟೇಶ್ ಅಯ್ಯಂಗಾರಿ ಕನ್ನಡದ ಆಸ್ತಿಯಿದ್ದಂಗೆ. ಆತ ಜಾತಿಲೇನೂ ತಪ್ಪಿಲ್ಲ ಅದರಾಚರಣೆಲಿ ತಪ್ಪಿರಬವುದು ಅಂದಿದ್ದ. ಇದ ಒಪ್ಪತಿಯಾ ನೀನು?"

"ನಾನ್ಯಾಕೊಪ್ಪಲಿ?"

"ಆರ್ಥಾಗಿದ್ರ ತಾನೆಯ? ಕುಮಾರಸ್ವಾಮಿ ಸಿಸ್ಟರಲ್ಲ ನೀನು? ಯು ಕಾಂಟ್ ಅಂಡರ್‌ಸ್ಟ್ಯಾಂಡ್ ದಿಸ್ ಕಾಸ್ಟ್ ಪ್ರಾಬ್ಲಮ್."

"?!"

–ಬಿ. ಚಂದ್ರೇಗೌಡ

Bra(nd) ಸಂಧ್ಯಾಳ ಪ್ರೇಮ ತರಂಗ!

'ಉದಯವಾಣಿ'ಯ ಕುತಂತ್ರ ವರದಿಗಳಷ್ಟೇ 'ಜ್ಞಾಣದಡ್ಡಿ' ಸಂಧ್ಯಾ ಪೈ sumಪಾದಕತ್ವದ 'ತರಂಗ'ದ ದಡ್ಡ ಕುಚೇಷ್ಟೆಗಳೂ ಕರಾವಳಿ ಓದುಗರಿಗೆ ಕಿರಿಕಿರಿ ಮಾಡುತ್ತಲೇ ಇವೆ.

ಹಿಂದೊಮ್ಮೆ ಸಂಧ್ಯಾ ತಂದ್ರ ವಿಶೇಷ ಸಂಚಿಕೆಯೊಂದು 'ಎಡವಟ್ಟು' ದಾಖಲೆ ಮಾಡಿತ್ತು. ಆ ವಿಶೇಷ ಸಂಚಿಕೆಯ ತಿರುಳು "ಗಂಡಸರು ಬ್ರಾ ಧರಿಸಿದರೆ ಹೇಗಿರುತ್ತೆ?"..... ಈ ವಿಷಯ ಕುರಿತು ಲೇಖನಗಳು, ಓದುಗರ ಅಭಿಪ್ರಾಯಗಳನ್ನೆಲ್ಲ ಪ್ರಕಟಿಸಿದ್ದ ಸಂಧ್ಯಕ್ಕ, ತನ್ನ 'aBRAcadaBRA' ಬುದ್ಧಿ ತೋರಿಸಿದ್ದಳು.

ಶ್ರೀಮಂತ, ಮೇಲ್ ಮಧ್ಯಮ ವರ್ಗಗಳ ತಲೆಚಿಟ್ಟು ಹಿಡಿಸುವ ಕತೆಗಳ ಧಾರಾವಾಹಿಗಳನ್ನು ನಿರ್ಮಿಸುವ ಈಯಮ್ಮನ ದಡ್ಡತನ ಕುರಿತೇ ಒಂದು ಸೀರಿಯಲ್ ಮಾಡಬಹುದೇನೋ? ಸಂಧ್ಯಾ ನಿರ್ಮಾಣದ 'ಗುಪ್ತ ಗಾಮಿನಿ'ಯಂತಹ ಧಾರಾವಾಹಿಗಳಲ್ಲಿ ಮುಂಜಾನೆ ಎದ್ದಾಗಲೂ ಪಾತ್ರಗಳು ಓವರ್‌ಮೇಕಪ್‌ನಲ್ಲೇ ಇರುತ್ತವೆ, ಅಲ್ಲಿ ಥಟ್ಟನೆ ಲವ್ವು ಅರಳುತ್ತದೆ, ಪಟಕ್ಕನೆ ಮುರಿದೂ ಬೀಳುತ್ತದೆ!

ಮೂರ್ಖತನದಲ್ಲಿ 'ಉದಯವಾಣಿ'ಯನ್ನೂ ಮೀರಿಸುವ 'ತರಂಗ' ಸಂಪಾದಕಿ ಸಂಧ್ಯಾ ಪೈಳ ದಡ್ಡತನ ಗೊತ್ತಾಯ್ತಲ್ಲ? ಇಂತಹ ಸಂಧ್ಯಾ ಪೈ ಕೆ.ವಿ. ಸುಬ್ಬಣ್ಣ ತೀರಿಕೊಳ್ಳುವುದಕ್ಕೆ ಕೆಲವೇ ತಿಂಗಳ ಮೊದಲು ಅವರ ಬಳಿ 'ತರಂಗ'ಕ್ಕೆ ಒಂದು ಲೇಖನ ಬರೆದು ಕೊಡಲು ಕೇಳಿದ್ದರಂತೆ. ಯಾವುದರ ಬಗ್ಗೆ ಗೊತ್ತ?

ವ್ಯಾಲೆಂಟೈನ್ಸ್ ಡೇ!

ಸುಬ್ಬಣ್ಣ ಏನೋ ನೆಪ ಹೇಳಿ ತಪ್ಪಿಸಿಕೊಂಡರು. ಇದನ್ನು ತನ್ನ ಆಪ್ತರೊಬ್ಬರಿಗೆ ಹೇಳುತ್ತ ಸುಬ್ಬಣ್ಣ "ಇವತ್ತು ನನ್ನಲ್ಲಿ ಉಳಿದಿರಬಹುದಾದ ಅಲ್ಪಸ್ವಲ್ಪ ಅಹಂಕಾರವೂ ನಾಶವಾಯಿತು" ಅಂದರಂತೆ.

ವ್ಯಾಲೆಂಟೈನ್ ಡೇ ಇತಿಹಾಸ, ಅದು ಭಾರತದಂತಹ ದೇಶದಲ್ಲಿ ವೈಭವೀಕರಣದ ಆಚರಣೆಯಾಗುತ್ತಾ ಭಿನ್ನ ಸಂಸ್ಕೃತಿ ಹೇರುತ್ತಿದೆಯೇ? ಎಂಬ ಕುರಿತಾದ ಸೀರಿಯಸ್ ವಿಚಾರಗಳು ಸಂಧ್ಯಕ್ಕನಿಗೆ ಹೊಳೆಯುವುದು ಕಷ್ಟವೇ. 'ಬ್ರಾ' ಸಂಚಿಕೆ ಹೊರತರುವ ಸಂಧ್ಯಾ ಬಾಯಿ 'ವ್ಯಾಲೆಂಟೈನ್ ಡೇ' ಬಗ್ಗೆ ಅದೆಂತಹ ಲೇಖನ ಅಪೇಕ್ಷಿಸಬಲ್ಲಳು ಎಂಬುದು ಜಗಜ್ಜಾಹೀರಾತಾದ ವಿಷಯ. ಅದೂ ಕೆ.ವಿ. ಸುಬ್ಬಣ್ಣನವರಿಂದ.

ಹೇಗಿದೆ ಕರಾವಳಿ ಸಂಧ್ಯಾಳ ಕರಾಳ ಪ್ರೇಮ 'ತರಂಗ'!



ತೋಳ... ಹೆಣ್ಣು ತೋಳ!

"ಅವಳು ತೆಳ್ಳಗೆ ಎತ್ತರವಿದ್ದಳು. ಅಷ್ಟೇನೂ ಯೌವನಿಗಳಲ್ಲದಿದ್ದರೂ ಕಪ್ಪು ಕೂದಲಿನ ಆಕೆಯ ಸ್ತನಗಳು ಇನ್ನೂ ಬಿರುಸಾಗಿದ್ದವು. ...ದಾ ಮಲೇರಿಯಾದಿಂದ ನರಳುವವಳಂತೆ ಬಿಳಿಚಿಕೊಂಡಿದ್ದರೂ ...ಕೆ ಮನಸ್ಸು ಮಾಡಿದಾಗ ಅವಳ ತಣ್ಣನೆಯ ಸುಂದರ ಕೆಂಪು ...ಟ ಮತ್ತು ಆಯಸ್ಕಾಂತದ ಶಕ್ತಿಯುಳ್ಳ ವಿಶಾಲ ಕಣ್ಣುಗಳು ...ಮ್ಮನ್ನು ನುಂಗಿಬಿಡುವಂತೆ ಕಾಣುತ್ತಿದ್ದವು."

ಆಕೆಯನ್ನು ತೋಳವೆಂದೇ ಕರೆಯುತ್ತಿದ್ದರು. ಹುಡುಗರು ಅವಳ ...ಲೆಗೆ ಬಿದ್ದು ಅವರಿಂದ ಬಿಡಿಸಿಕೊಳ್ಳಲಾಗದೆ ಒದ್ದಾಡುತ್ತಿದ್ದರು. ...ಳ್ಳ ನಾಗರಿಕರೆನ್ನಿಸಿಕೊಂಡವರ ಮೇಲೆ ಆಕೆ ಕಣ್ಣಿಟ್ಟರೆ ಆಯಿತು,

ಇಷ್ಟವಿರಲಿಲ್ಲ, ಅವಳ ತಲೆ ಕೂದಲು ಹಿಡಿದು ಎಳೆದು ಅಲ್ಲಾಡಿಸಿ "ನೀನು ಅವನನ್ನು ಮದುವೆಯಾಗಲೇಬೇಕು!" ಅಂದಳು.

ಇಷ್ಟವಿಲ್ಲದಿದ್ದರೂ ಮಗಳು ಮದುವೆಯಾದಳು.

ತೋಳ ಮಾತ್ರ ಬಿಡಲಿಲ್ಲ, ಅವನ ಮೇಲೆ ಇಟ್ಟ ಕಣ್ಣು ತೆಗೆಯಲಿಲ್ಲ,

"ಬೇಡ! ನನ್ನನ್ನು ಕೆಡಿಸಬೇಡ" ಎಂದು ಅವನು ಕೂಗಿದ. ಅವಳು ಹೊಲಕ್ಕೆ ಬರಕೂಡದೆಂದು ತಿಳಿಸಿದ. ಆದರೆ ತನಗೆ ಗೊತ್ತಿಲ್ಲದಂತೆಯೇ ಆಕೆಗಾಗಿ ಕಾಯತೊಡಗಿದ. ಅದು ಆಕೆಯ ಮಗಳಿಗೂ ಗೊತ್ತಾಯಿತು.

ಮನುಷ್ಯತ್ವದ ಆಚೆ...



...ವರು ಅವಳ ತೋಳಲ್ಲಿ ಸಿಕ್ಕಿಹಾಕಿ...ಳ್ಳುತ್ತಿದ್ದರು. ಪಾದ್ರಿಗಳು ಅವಳ ...ದುರು ಮುಗ್ಗರಿಸಿ ಅವಳ ಜ್ವಾಲೆಯಲ್ಲಿ ...ರಿದುಹೋಗಿ ದೇವರ ಸಾಮ್ರಾಜ್ಯ ...ಳೆದುಕೊಂಡಿದ್ದರು. ಗಂಡಂದಿರನ್ನು, ...ಕ್ಕಳನ್ನು ಅವಳೆದುರು ಬಿಡಲು ...ಂಗಸರು ಹೆದರುತ್ತಿದ್ದರು. ತೋಳದ ...ತ್ತಿನಿಂದ ನಡೆಯುತ್ತಿದ್ದ ಆಕೆ ತನ್ನ ಕೆಂಪು ...ಟ ಸವರಿಕೊಂಡರೆ, ಕಣ್ಣಿನಿಂದ ಸೆಳೆದರೆ ...ಂಡುಗಳು ಅವಳ ಲಂಗವನ್ನು ಅನು...ರಿಸಿ ನಡೆಯತೊಡಗುತ್ತಿದ್ದರು.

ಆಕೆ ಹೊಲದಲ್ಲಿ ಕೆಲಸ ಮಾಡು...ವಾಗ ಅವನ ಮೇಲೆ ಮನಸ್ಸಿಟ್ಟಳು. ...ವನನ್ನು ನೋಡಿದಳು. ಅವನು ನಿಂತಲ್ಲಿ ...ಂತು ತುಟಿ ನೀಡಿದಳು. ಕಣ್ಣುಗಳನ್ನು ...ವನ ಮೇಲೆ ಹೂಡಿದಳು. ಅವನು ...ಕೆಯ ಕಾವು ತಾಳಲಾರದೆ, "ಯಾಕೆ ...ಗೆ ನನ್ನ ನೋಡ್ತಿದ್ದಿ?" ಅಂದ.

"ನಾನು ನಿನ್ನೊಂದಿಗೆ ಪ್ರೇಮಿಸ...ಬೇಕು" ಅಂದಳು.

"ಸಾಧ್ಯವಿಲ್ಲ, ನಾನು ನಿನ್ನ ಮಗಳನ್ನು ...ಪ್ರೀತಿಸ್ತೇನೆ. ಅವಳು ಒಪ್ಪಿದರೆ ಮದುವೆ...ಯಾಗಬೇಕೆಂದಿದ್ದೇನೆ. ಹೋಗು, ಇಲ್ಲಿಂದ ಹೋಗು, ನನ್ನನ್ನು ...ಆಕರ್ಷಿಸಬೇಡ!" ಅಂದ.


ಅವಳು ಮನಸ್ಸಿಲ್ಲದೆ ಮನೆಗೆ ಹೋದಳು. ಮಗಳನ್ನು ...ವಿಚಾರಿಸಿದಳು. ಮಗಳಿಗೆ ಅವನನ್ನು ಮದುವೆಯಾಗುವುದು

"ನಾಯಿ! ಅಳಿಯನೊಂದಿಗೇ ಮಲಗುತ್ತಿರುವ ನಾಯಿ!" ಎಂದು ಮಗಳು ತೋಳವನ್ನು ಬೈದಳು.

ಆಕೆಯ ಸೆಳೆತದ ಎದುರು ಎಲ್ಲರೂ ಅಸಹಾಯಕರಾಗಿದ್ದರು. ಆತ ಕೂಡ. ಅವಳ ವ್ಯಕ್ತಿತ್ವದಲ್ಲಿ ಭೀಕರ ಸಂಪತ್ತು, ಭೀಕರ ಕಾಮವಿತ್ತು, ಇದರಿಂದೆಲ್ಲ ಮುಕ್ತವಾಗಲೇಬೇಕೆಂದು ಆತ ಕೊಡಲಿ ಹಿಡಿದು ಆಕೆಗಾಗಿ ಕಾದು ನಿಂತ. ಅವಳನ್ನು ಅವತ್ತು ಮುಗಿಸಿಯೇ ಬಿಡಲು ಮನಸ್ಸು ಮಾಡಿದ್ದ. ಆಕೆ ಬಂದಳು. ಅವನು ಕೊಡಲಿಯೊಂದಿಗೆ ಮುಂದುವರಿದ. ಅವಳು ತಲೆ ತಗ್ಗಿಸಲಿಲ್ಲ, ಕಣ್ಣು ಕದಲಿಸಲಿಲ್ಲ, ನೇರವಾಗಿ ಅವನ ಪ್ರಕ್ಷುಬ್ಧ ಮುಖ ನೋಡುತ್ತಿದ್ದಳು. ಕಾಲುಗಳು ಕ್ರಮಿಸುತ್ತಲೇ ಇದ್ದವು...

ಕೊಡಲಿ ಕೈಯಿಂದ ಕಳಚಿಬಿತ್ತು.

ವ್ಯಕ್ತಿತ್ವದ ಆಳದ ಈ ದೈತ್ಯ ಸೆಳೆತವನ್ನು ಜಿಯೋವಾನಿ ವೆರ್ಗಾ ಎಂಬ ಇಟಾಲಿಯನ್ ಲೇಖಕ ತನ್ನ ಕತೆಯಲ್ಲಿ ಹೇಳಿದ್ದಾನೆ. ಮೂರು ಪುಟಗಳ ಈ ಪುಟ್ಟ ಕತೆ 'ತೋಳ' ಈಚೆಗೆ ಕಥಾ ಸಂಗ್ರಹವೊಂದರಲ್ಲಿ ಅಚ್ಚಾಗಿದೆ. ■



ಫೆಬ್ರವರಿ 21, 1988

ಕತೆಗೊಂದು ಹಿನ್ನೆಲೆ



ಈ ಸಲದ 'ಟೀಕೆ-ಟಿಪ್ಪಣಿ'ಯ ಕತೆಯನ್ನು ('ಮುಟ್ಟಿಸಿಕೊಂಡವನು') ಗೆಳೆಯರೊಬ್ಬರಿಗೆ ಹೇಳಿದವರು ಡಾ. ಬಿ.ಎಂ. ತಿಪ್ಪೇಸ್ವಾಮಿ. ಈ ಕತೆಯ ಜಾತೀಯತೆಯ ಗ್ರಹಿಕೆ, ಮಾನವೀಯತೆ, ದಿಗ್ಭ್ರಮೆ ಸದ್ಯದ ಸಾಮಾಜಿಕ ಸಂದರ್ಭದಲ್ಲಿ ಅಗತ್ಯ ಅಲೆಗಳನ್ನು ಎಬ್ಬಿಸಬಹುದು ಎಂಬ ಕಾರಣಕ್ಕೆ, ನಾನು ಕೇಳಿದ ಘಟನೆಯ ತುಣುಕಿನಿಂದ ಬಸಲಿಂಗ, ತಿಮ್ಮಪ್ಪ ಇವರಿಬ್ಬರ ವ್ಯಕ್ತಿತ್ವ ಊಹಿಸಿದ್ದೇನೆ.

ಜನತಾ ಸರ್ಕಾರದ ಪಾತಕಗಳಲ್ಲಿ ಒಂದು. ತಿಪ್ಪೇಸ್ವಾಮಿಯವರಂಥ ಶ್ರೇಷ್ಠ ವೈದ್ಯರು ಬರೀ ಶಾಸಕರಾಗಿದ್ದುಕೊಂಡು ತಮ್ಮ ಬದುಕಿನ ಐದು ವರ್ಷಗಳನ್ನು ವ್ಯರ್ಥ ಮಾಡಿಕೊಳ್ಳುವಂತೆ ಮಾಡಿದ್ದು. ಲೋಕಸೇವಾ ಆಯೋಗದಲ್ಲಿ ಅತ್ಯಂತ ಪ್ರಾಮಾಣಿಕ ಮನುಷ್ಯರಾಗಿದ್ದ ವ್ಯಕ್ತಿ ಈತ; ಅತ್ಯುತ್ತಮ ನೇತ್ರತಜ್ಞರು. ಎಲ್ಲಕ್ಕಿಂತ ಹೆಚ್ಚಾಗಿ ದಲಿತರಾದ ತಿಪ್ಪೇಸ್ವಾಮಿ ಈ ನಾಡಿನ ಜಾತಿಯ ದುರಂತವನ್ನು ತಿಳಿದವರು. ಮೇಲುಜಾತಿ, ಕೀಳುಜಾತಿ ಎಂದು ವಿಂಗಡಣೆಗೊಂಡ ಜನ ತಾವೇ ಸೃಷ್ಟಿಸಿಕೊಂಡ ನರಕದಲ್ಲಿ ಒದ್ದಾಡುವುದನ್ನು ಕಣ್ಣಾರೆ ಕಂಡು ಸ್ಪಂದಿಸುವ ಮನುಷ್ಯ ಡಾ. ತಿಪ್ಪೇಸ್ವಾಮಿ.

ಶರಣು, ಶರಣು



ವೀರಶೈವರು, ಲಿಂಗಾಯತರು, ಒಕ್ಕಲುತನದವರು, ಶಿವಾಚಾರದವರು... ವಿಭೂತಿ, ರುದ್ರಾಕ್ಷಿ, ಪವಾಡ ಇವು ಯಾವೂ ನನಗೆ ಅಪರಿಚಿತವಲ್ಲ, ಲಿಂಗಾಯತರ ಪ್ರೀತಿ, ದಯೆ, ವ್ಯವಹಾರಜ್ಞಾನ, ಔದಾರ್ಯ ಕೂಡ. ನಾನೇ ಬಲ್ಲಂತೆ ಅಸಂಖ್ಯಾತ ಮುಗ್ಧ ಮಾನವೀಯ ಲಿಂಗಾಯತರು ಬಸವಣ್ಣನ ನಿತ್ಯ ಸ್ಮಾರಕಗಳಾಗಿ ಅನಾಮಿಕ ಬದುಕು ನಡೆಸಿ ಕಣ್ಮರೆಯಾಗುತ್ತಾರೆ. ಆದರೆ ಇಂಥ ಮುಗ್ಧ ಜನರನ್ನು ಸ್ವಪ್ರತಿಷ್ಠೆ, ಜಾತೀಯತೆಯ ತಪ್ಪು ದಾರಿಗೆಳೆದು ಅವರಿಂದ ಅಪರಾಧಗಳನ್ನು ಮಾಡಿಸುವ ಜನರಿದ್ದಾರೆ. ಈ ದಾರಿ ತಪ್ಪಿಸಿದ ಸ್ವಾರ್ಥಿಗಳ ಪಟ್ಟಿಯನ್ನೇ ಕೊಡಬಲ್ಲೆ; ಅವರ ಬಿರುದು, ಪ್ರಶಸ್ತಿಗಳ ಹಿಂದಿನ ಭ್ರಷ್ಟತೆ, ವಂಚನೆಯ ಇತಿಹಾಸವನ್ನೇ ನೀಡಬಲ್ಲೆ, ಅದೀಗ ಬೇಡ. ಲಿಂಗಾಯತರು ರಾಜಕೀಯ, ಸಾಂಸ್ಕೃತಿಕ ನಾಯಕತ್ವವನ್ನೇ ಸೃಷ್ಟಿಸಲು ಆಗದಂಥ ಸ್ಥಿತಿ ತಲುಪಿರುವ ಬಗ್ಗೆ ಯೋಚಿಸಲಿ.

ಸಾಹಿತಿಗಳ ಬೈದಾಟಕ್ಕೂ, ಸ್ತ್ರೀಯರ ಬೈದಾಟಕ್ಕೂ ಇರುವ ವ್ಯತ್ಯಾಸ?

ಮಂಚಾಲಿ ಗುರುರಾಜಚಾರು. ಬಳ್ಳಾರಿ
ಕಾಂಗ್ರೆಸ್ ಆಡಳಿತಕ್ಕೂ, ಮಿಶ್ರ ಸರ್ಕಾರಕ್ಕೂ ಇರುವ ವ್ಯತ್ಯಾಸವೇನು?
* ಅದು ಪಂಡರ ಆಡಳಿತ, ಇದು ಭಂಡರ ಆಡಳಿತ.

ಆರ್. ಸಿರಿಗರ್ಲಗಟ್ಟಿ. ಬೀಳಗಿ
ಕೋಮುವಾದಿಗಳಿಗಿಂತ ಜಾತಿವಾದಿಗಳೇ ಹೆಚ್ಚು ಅಪಾಯಕಾರಿಗಳೆಂದು ಪ್ರಕಾಶ್ ಹೇಳುತ್ತಿದ್ದಾರಲ್ಲ?
* ಇವರಡಕ್ಕಿಂತ ತನ್ನಂತಹವರು ಇನ್ನೂ ಡೇಂಜರಸ್ ಅಂತ ಸದ್ಯದಲ್ಲೇ ಹೇಳಬಹುದು, ಕಾಯ್ತಿರಿ.

ಎಂ. ನಿಸರ್ಗ. ದಾವಣಗೆರೆ
ಸೋನಿಯಾ ಗಾಂಧಿ ರಾಯ್‌ಬರೇಲಿ ಹನುಮಂತನ ಗುಡಿಗೆ ಹೋಗಿದ್ದೇಕೆ?
* ರಾಮಭಕ್ತರಿಂದ ಪಕ್ಷಾಂತರ ಮಾಡಿಸಲು ಅಂತ ಅಧ್ವಾನಿ ಕೂಗುತ್ತಿರುವುದು ಕೇಳುತ್ತಿಲ್ಲವೇ.

ಒಡು ಸಿದ್ದೇಗೌಡ. ಕಬ್ಬೇಹಳ್ಳಿ
ರಕ್ಷಕರೆಲ್ಲ ಭಕ್ಷಕರಾದರೆ ಇನ್ನಾರಿಗೆ ದೂರುವುದು ಬಸವನಗುಡಿ ಲಂಕೇಶ್ವರಿ?
* ಪಂಚೆಯೊಳಗೊಂದು ಮನೆಯ ಮಾಡಿ ಮೃಗಗಳಿಗೆ ಅಂಜಿದೊಡೆಂತಯ್ಯಾ, ಒಡು ಸಿದ್ದೇಶ್ವರಾ?




ಬಸವರಾಜ್ ಬೆಸ್ತರ್. ಹರಪನಹಳ್ಳಿ
ನಿಮ್ಮ ತುಂಟಿಗೆ ಒಬ್ಬ ತುಂಟಾ ಬೇಡ್ವಾ?
* ಛೀ ತುಂಟ ಅಂತ ಹೇಳ್ತಿ ರೋದೆ ತುಂಟ ಕಣ್ರಿ!

ಪೂರ್ಣಿಮಾ. ಹಗರಿಬೊಮ್ಮನಹಳ್ಳಿ
ಕೆಲವರು ಮಗನನ್ನು ಪ್ಲಸ್(+) ಎಂದು, ಮಗಳನ್ನು ಮೈನಸ್ (-) ಎಂದು ಕರೆಯುತ್ತಾರಲ್ಲಾ?
* ಲೆಕ್ಕ ಗೊತ್ತಿಲ್ಲದ ಮೂರ್ಖರ ತರ್ಕ ಅದು.

ಎನ್. ಶ್ರೀನಿವಾಸರಾವ್. ಬೆಂಗಳೂರು
ಹೆಣ್ಣಿಗೊಂದು ಅಂದಕೊಟ್ಟು ಗಂಡಿಗೊಂದು ಆಸೆ ಇಟ್ಟಿರುವುದೇಕೆ?
* ಅಂದರೆ ನಿಮ್ಮ ಪ್ರಕಾರ ಹೆಣ್ಣಿಗೆ ಆಸೆ ಇಲ್ಲ, ಗಂಡಿಗೆ ಅಂದ ಇಲ್ಲ ಅಂತಾನಾ?!

ಇಂದಿರಾ ಶ್ರೀಧರ್. ದಾವಣಗೆರೆ
'ಕೋ-ಜಾ' ಸರ್ಕಾರ ಬಂದ ಮೇಲೆ ಸ್ಲಂಗಳಿಗೆ ಬೆಂಕಿ ಬೀಳುತ್ತಿವೆಯಲ್ಲ?
* ಬಡತನ ನಿರ್ಮೂಲನೆಗೆ ಕುಮಾರಸ್ವಾಮಿ ಕಂಡುಕೊಂಡಿರುವ ಉಪಾಯವದು.



ಎಚ್.ಸಿ.ಮಹಾದೇವ್. ಬಳ್ಳಾರಿ
ಗೌಡರು Ghost CM ಅಂತೆ?
* ಹೌದೌದು, ಅದಕ್ಕೆ ಮುಂದಿನ ಚುನಾವಣೆಯಲ್ಲಿ ಜನ ಭೂತ ಬಿಡಿಸಲಿದ್ದಾರಂತೆ.

ಕೆ. ಶ್ರೀನಿವಾಸ್. ಮಂಡ್ಯ
ಮುತ್ತುಲಕ್ಷ್ಮಿ ಎಲೆಕ್ಷನ್‌ಗೆ ನಿಲ್ತಾಳಂತೆ, ಗೆದ್ದರೆ ಅರಣ್ಯ ಸಚಿವೆನಾ?
* ಪೋಲೀಸ್ ಇಲಾಖೆ ಸಿಗದಿದ್ದರೆ ಸಾಕು ಅಂತ ಖಾಕಿಗಳು ಹೆದರಿದ್ದಾರಂತೆ.

ಕೆ. ಪ್ರಾಣೇಶ್ ರಾವ್. ಹಗರಿಬೊಮ್ಮನಹಳ್ಳಿ
ರಾಜ್ಯಸಭೆ ಚುನಾವಣೆಯ ನಂತರ ರಾಜ್ಯದ ಶ್ರೀಸಾಮಾನ್ಯನ ಪ್ರತಿಕ್ರಿಯೆ ಏನಿರಬಹುದು?
* ಮುಂದಿನ ಬಾರಿ ತಮ್ಮ ರೇಟೂ ಜಾಸ್ತಿ ಮಾಡಿಕೊಳ್ಳಬೇಕು ಅಂತ ಅನ್ನಿಸುತ್ತಿದೆಯಂತೆ.

ಜೆ.ಎ. ಖಲಂದರ್ ಅಜೀಜ್. ಜಾವಗಲ್
ಪ್ರೀತಿಯಿಂದ ಪ್ರೀತಿ ಹುಟ್ಟುತ್ತದೆ ಎಂಬ ಮಾತಿತ್ತು, ಆದರೆ ಈಗ ಕಾಮ ಹುಟ್ಟುತ್ತದೆಯಲ್ಲಾ?
* ಅದೆಲ್ಲಾ ಇರಲಿ, ಇಷ್ಟು ದಿನ ಎಲ್ಲಿ ಹೋಗಿದ್ರಿ ಅಜೀಜ್‌ರವರೇ?

ಜೆ.ಎನ್. ಪ್ರಸನ್ನಕುಮಾರ್. ತುಮಕೂರು
ಪ್ರೀತಿ ಕಣ್ಣಿನಲ್ಲಿ ಹುಟ್ಟಿ ಹೃದಯಕ್ಕೆ ಬಂದು ಬಾಯಲ್ಲಿ ಮಾತಾಗುತ್ತದೆ ಅಂತಾರಲ್ಲ?
* ಹಲವೊಮ್ಮೆ ಬಾಯಲ್ಲಿ ಮಾತಾಗದೇ ದೇಹದಲ್ಲಿ ಕಾವ್ಯವಾಗುವುದೂ ಉಂಟು ಗೊತ್ತಾ

ಛೀ ತುಂಟಿ!

ಒಂದು ವಠಾರದಲ್ಲೊಬ್ಬ ಹುಟ್ಟು ಕುರುಡನಿದ್ದ. ಅಲ್ಲಿದ್ದವರಿಗೆಲ್ಲ ಪರಿಚಿತನಾಗಿ ಅವರಿಂದ ಸಹಾನುಭೂತಿ ಗಳಿಸಿದ್ದ. ಒಂದು ಬೆಳಿಗ್ಗೆ ಒಂದು ಪ್ಯಾಕೇಟ್ ಸ್ವೀಟ್ ಹಿಡಿದುಕೊಂಡು ಎಲ್ಲರಿಗೂ ಹಂಚುತ್ತಿದ್ದ.

ಪಕ್ಕದ ಮನೆ ಆಂಟಿಗೂ ಸ್ವೀಟ್ ಕೊಡಲು ಹೋದಾಗ ಆಂಟಿ ಆಗ ತಾನೇ ಸ್ನಾನ ಮುಗಿಸಿ ಕುರುಡನಲ್ಲವೇ ಎಂದು ಹಾಗೆಯೇ ಹೊರಬಂದು ಅವನಿಗೆ, "ಏನು ವಿಶೇಷ, ಸ್ವೀಟ್ ಕೊಡುತ್ತೀದ್ದೀರಲ್ಲಾ?" ಅಂದಳು.

ಅದಕ್ಕೆ ಕುರುಡ "ಕಳೆದವಾರ ಆಪರೇಷನ್ ಆಯ್ತು, ಕಣ್ಣು ಬಂದ ಖುಷಿಗೆ...." ಅಂದ.




ಬಹುಮಾನಿತ ಪ್ರಶ್ನೆಗಳು

ಅ.ರಾ. ಮಂಜುನಾಥ. ಗದಗ
ಸಾಹಿತಿಗಳ ಬೈದಾಟಕ್ಕೂ, ಸ್ತ್ರೀಯರ ಬೈದಾಟಕ್ಕೂ ಏನು ವ್ಯತ್ಯಾಸ?
* ಸ್ತ್ರೀಯರ ಬೈದಾಟ ಕಾಲ್ಪನಿಕವಾಗಿರುತ್ತದೆ.

ಆರ್. ಅರುಂಧ...
ಛೀ ತುಂಟಿ ರಕ್ಷಿತಾಗೂ ಈ ಗುಂಗುರ್ ಕೂದ್ಲು ಪ್ರೇಮ್‌ಗೂ ಎಷ್ಟಂದಕ್ಕೂ ನಂಟು!
* ಈ ಲವ್‌ನ ನಂಟೇ ಅಂಟಂಟು!

ದಲಿತ ಮಹಿಳೆಗೆ 'ಬಂ' ವಂಚನೆ!



'ಬಂ' ದಲಿತ ಪ್ರೇಮಕ್ಕೂ, ಪೆಟ್ರೋಲ್ ಬಂಕಿಗೂ ಅದೇನು ವೈರವ್ರೋ. ಅಥವಾ ದಲಿತರು ಪೆಟ್ರೋಲ್ ಬಂಕ್ ನಡೆಸುವುದು ಕೂಡ ಅಂಬೇಡ್ಕರ್‌ಗಾದಷ್ಟೇ ಅವಮಾನ ಎಂಬುದು 'ಬಂ' ಲೆಕ್ಕಾಚಾರವ್ರೋ ಗೊತ್ತಾಗುತ್ತಿಲ್ಲ.

ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನವಾಯಿತೆಂದು ಬಂಗಾರಪ್ಪ ಬೀದಿಗಿಳಿದಿದ್ದಕ್ಕೆ, ಬೊಬ್ಬೆ ಹೊಡೆದಿದ್ದಕ್ಕೆಲ್ಲ ಈಗ ಶಿವಮೊಗ್ಗದ ದಲಿತರು ದಂಡಕಟ್ಟಬೇಕಾಗಿದೆ. ಅಸ್ಪೃಶ್ಯತೆ ಆಚರಿಸಿದ ಆನವಟ್ಟಿ ಗ್ರಾಮ ಪಂಚಾಯ್ತಿಯನ್ನು ಬರಖಾಸ್ತುಗೊಳಿಸುವಂತೆ ಒತ್ತಾಯಿಸಿ ದಲಿತರು ಪ್ರತಿಭಟಿಸುತ್ತಿದ್ದರೆ ಅದು ಬಂಗಾರಿ ವಿರುದ್ಧ ಮೊಳಗಿದ ಧಿಕ್ಕಾರದಂತಿರುತ್ತದೆ. ಯಾವ 'ಬಂ' ಭಟ್ಟಂಗಿಗಳೆಲ್ಲ ಅಂಬೇಡ್ಕರ್ ಭಾವಚಿತ್ರಕ್ಕಾದ ಅಪಮಾನದ ವಿರುದ್ಧ ಶಿವಮೊಗ್ಗದಲ್ಲಿ ಬಾಯಿ ಬಡಕೊಂಡರೋ ಈಗ ಅವರೇ ನಿಂತು ದಲಿತ ಮಹಿಳೆಯೊಬ್ಬಳ ಪೆಟ್ರೋಲ್ ಬಂಕಿಗೆ ಕೊಳ್ಳಿ ಇಡುತ್ತಿರುವುದು 'ಬಂ' ದಲಿತ ಕಾಳಜಿಗೊಂದು ನಿದರ್ಶನವಷ್ಟೆ.

ಹೀಗೆ ಸಮಾಜವಾದಿ ವೀರರ ಕೃಪಾಕಟಾಕ್ಷಕ್ಕೆ ಬಲಿಯಾದಾಕೆ ಸೊರಬ ತಾಲ್ಲೂಕು ಆನವಟ್ಟಿಯ ದಲಿತ ಮಹಿಳೆ ಸರಸ್ವತಿ.ಕೋಂ ಲಕ್ಕಪ್ಪ. ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೋರೇಷನ್ 2004ರ ಅಕ್ಟೋಬರ್ ಹದಿನಾಲ್ಕರಂದೇ ಆಕೆಗೆ ಪೆಟ್ರೋಲ್ ಬಂಕ್ ಮಂಜೂರು ಮಾಡಿದೆ. ಅದಕ್ಕೆ ಆನವಟ್ಟಿ ಗ್ರಾಮ ಪಂಚಾಯ್ತಿ ನಿರಾಪೇಕ್ಷಣ ಪತ್ರ ಕೊಡಬೇಕಿತ್ತು. ಸೊರಬದ ಅಭಿವೃದ್ಧಿಗೆ ಅದು ಅಗತ್ಯವಾಗಿತ್ತು. ದುರಂತವೆಂದರೆ ಸಮಾಜವಾದಿ ಪಕ್ಷದ ಆಳ್ವಿಕೆಯುಳ್ಳ ಆನವಟ್ಟಿ ಗ್ರಾಮ ಪಂಚಾಯ್ತಿಗೆ ಸಾರಾಯಿ ಅಂಗಡಿಗೂ, ಪೆಟ್ರೋಲ್ ಬಂಕಿಗೂ ವ್ಯತ್ಯಾಸವೇ ಗೊತ್ತಿಲ್ಲ!

ಪೆಟ್ರೋಲ್ ಬಂಕ್‌ಗೆಂದು ಸರಸ್ವತಿ ಈಗಾಗಲೇ ಆನವಟ್ಟಿಯಲ್ಲಿ ಹದಿನೈದು ಗುಂಟೆ ಜಮೀನು ಖರೀದಿಸಿದ್ದಾರೆ. NOC ಕೊಡುವಂತೆ ಪಂಚಾಯ್ತಿಗೆ ಅರ್ಜಿಯನ್ನೂ ಕೊಟ್ಟಿದ್ದಾರೆ. ಆದರೆ 2005ರ ಏಪ್ರಿಲ್ ಹದಿನೈದರಂದು ಸಭೆ ಸೇರಿದ ಪಂಚಾಯ್ತಿ ಪೆಟ್ರೋಲ್ ಬಂಕ್‌ನಿಂದಾಗಿ ಸಮಾಜದ ನೆಮ್ಮದಿಗೆ ಭಂಗಬರುತ್ತದೆಯೆಂದೂ, ಸಾರ್ವಜನಿಕರ ಆಕ್ಷೇಪಣೆಗಳಿರುವುದರಿಂದಾಗಿ NOC ಕೊಡಲು ಸಾಧ್ಯವಿಲ್ಲವೆಂದೂ ಸರಸ್ವತಿಯವರ ಅರ್ಜಿಯನ್ನು ತಳ್ಳಿಹಾಕಿದೆ.



'ಬಂ' ವಿರುದ್ಧ ದಲಿತರ ಪ್ರತಿಭಟನೆ



ಸರಸ್ವತಿ

ಸರಸ್ವತಿ ಇದರ ವಿರುದ್ಧ ತಾಲ್ಲೂಕು ಪಂಚಾಯ್ತಿಗೆ ದೂರು ಕೊಟ್ಟರೆ ಕಾಂಗ್ರೆಸ್ ಹಿಡಿತದ ತಾಲ್ಲೂಕು ಪಂಚಾಯ್ತಿ 2005ರ ಜೂನ್ ಹದಿನೈದರಂದೇ NOC ಕೊಡುವಂತೆ ನಿರ್ಣಯ ಕೈಗೊಂಡಿದೆ. ಶಿವಮೊಗ್ಗ ಜಿಲ್ಲಾಧಿಕಾರಿ, ಜಿಲ್ಲಾ ರಕ್ಷಣಾಧಿಕಾರಿ, ಲೋಕೋಪಯೋಗಿ ಇಲಾಖೆ, ಡಿಸ್ಟ್ರಿಕ್ಟ್ ಸರ್ಜನ್, ಅಗ್ನಿ ಶಾಮಕ ಇಲಾಖೆ, ಸಾಗರದ ಉಪವಿಭಾಗಾಧಿಕಾರಿ, ಮೆಸ್ಕಾಂ ಹೀಗೆ ಪ್ರತಿಯೊಬ್ಬರೂ NOC ಕೊಟ್ಟಿದ್ದಾರೆ. ಸಾಲದ್ದಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಯವರೇ ಆನವಟ್ಟಿ ಪಂಚಾಯ್ತಿಗೆ NOC ಕೊಡುವಂತೆ ಆದೇಶ ನೀಡಿದ್ದಾರೆ. ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿಗಳು ಪದೇ ಪದೇ ಆದೇಶ ಕೊಟ್ಟಾಗಲೂ ಗ್ರಾಮ ಪಂಚಾಯ್ತಿಗೆ ಅದು ಲೆಕ್ಕಕ್ಕಿಲ್ಲ.

ಏಕೆಂದರೆ ಆನವಟ್ಟಿಯಿಂದ ಒಂದು ಕಿ.ಮಿ. ದೂರದ ಕೋಟಿಪುರದಲ್ಲಿ ಸಮಾಜವಾದಿ ಪಕ್ಷದ ಜಿಲ್ಲಾ ಪಂಚಾಯ್ತಿ ಸದಸ್ಯ ಗಿರೀಶನ ರೇಣುಕಾ ಫ್ಯೂಯೆಲ್ಸ್ ಎಂಬ ಮತ್ತೊಂದು ಪೆಟ್ರೋಲ್ ಬಂಕಿದೆ. ಜಡೆ ಕ್ಷೇತ್ರದಿಂದ ಜಿಲ್ಲಾ ಪಂಚಾಯ್ತಿಗೆ ಗೆದ್ದ ಗಿರೀಶ ಬಂಗಾರಪ್ಪನವರ ಖಾಸಾ ಅಳಿಯ. ಈತನ ತಂದೆ ಪಾಲಾಕ್ಷಪ್ಪ 'ಬಂ' ಒಡೆತನದ ಚಂದ್ರಹಾಸ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಮತ್ತು ಸೊರಬದ ಪಾಳೇಗಾರ. ಈ ಸುತ್ತಮುತ್ತ ಆತನ ಅನುಮತಿ ಇಲ್ಲದೆ ಕಡ್ಡಿ ಕೂಡಾ ಅಲ್ಲಾಡುವಂತಿಲ್ಲ. ಸಮಾಜವಾದಿ ಪಕ್ಷದಿಂದ ಯಾರಿಗೆ ಟಿಕೆಟ್ ಕೊಡಬೇಕು, ಯಾರಿಗೆ ಯಾವ ಕಾಂಟ್ರಾಕ್ಟು ನೀಡಬೇಕು ಇತ್ಯಾದಿಯನ್ನು ನಿರ್ಧರಿಸುವುದೇ ಈತ.


ಆನವಟ್ಟಿಯಲ್ಲಿ ಸರಸ್ವತಿಯ ಪೆಟ್ರೋಲ್ ಬಂಕ್ ಬಂದರೆ ಎಲ್ಲಿ ತನ್ನ ಮಗನ ಪೆಟ್ರೋಲ್ ಬಂಕಿಗೆ ವ್ಯಾಪಾರ ಕುಂದುತ್ತದೆ ಎಂದು ಲೆಕ್ಕಹಾಕಿದ ಪಾಲಾಕ್ಷಪ್ಪ ಶತಗತಾಯ ಅದನ್ನು ತಡೆಗಟ್ಟಲು ತಾ.ಪಂ.ಸದಸ್ಯ ಜರ್ಮನಿ ಚಂದ್ರಪ್ಪನನ್ನೂ, ಗ್ರಾ.ಪಂ. ಅಧ್ಯಕ್ಷೆ ನೀಲಮ್ಮ ಗೌಳಿಯನ್ನೂ ಛೂಬಿಟ್ಟ. ಆನವಟ್ಟಿ ಗ್ರಾಮ ಪಂಚಾಯ್ತಿಯ ಹತ್ತೊಂಬತ್ತೂ ಮಂದಿ ಸಮಾಜವಾದಿ ಪಕ್ಷದ ಸದಸ್ಯರು ಪೆಟ್ರೋಲ್ ಬಂಕ್ ವಿರುದ್ಧ ಕಾರ್ಯಾಚರಣೆಗಿಳಿದರು.

ಇತ್ತ ಶಿವಮೊಗ್ಗದ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಅಧ್ಯಕ್ಷ ಗುರುಮೂರ್ತಿ, ನಮ್ಮ ಹಕ್ಕು ವೇದಿಕೆಯ ಪಾಲಾಕ್ಷ, ಸಿವಿಲ್ ಲಿಬರ್ಟಿಸ್ ಫೋರಂನ ಈಸೂರು ಲೋಕೇಶ್, ತಾಲ್ಲೂಕು ದ.ಸಂ.ಸ. ಸಂಚಾಲಕ ಹಾಲೇಶಪ್ಪ

ಎಸ್.ಎಂ. ಕೃಷ್ಣ-ಬಿ.ಎಲ್. ಶಂಕರ್ ಕಿತಾಪತಿ

ಚಿತ್ರಕಲಾ ಪರಿಷತ್ ಅವನತಿ!

ದೇಶದ ಮೊದಲ ಐದು ಚಿತ್ರಕಲಾ ಸಂಸ್ಥೆಗಳ ಪೈಕಿ ಒಂದು ಎನಿಸಿಕೊಂಡಿದ್ದ ಕರ್ನಾಟಕ ಚಿತ್ರಕಲಾ ಪರಿಷತ್ ಇವತ್ತು ಅವನತಿಯ ಹಾದಿ ಹಿಡಿಯುತ್ತಿದೆ. ದೇಶದ ಖ್ಯಾತ ಕಲಾವಿದರೆಲ್ಲ ಗೌರವ ಉಪನ್ಯಾಸ ನೀಡಲು ಈ ಪರಿಷತ್‌ಗೆ ಬರಲು ಹಿಂದೆಮುಂದೆ ನೋಡುತ್ತಿದ್ದಾರೆ. ಬಡ, ಗ್ರಾಮೀಣ ವಿದ್ಯಾರ್ಥಿಗಳಿಗೆ ದಾರಿ ದೀಪವಾಗಿದ್ದ ಚಿತ್ರಕಲಾ ವಿದ್ಯಾಲಯವೀಗ ವಾಣಿಜ್ಯಕರಣಗೊಂಡು ಇಂಜನಿಯರಿಂಗ್ ಶಿಕ್ಷಣದಷ್ಟೇ ಕಲಾ ಶಿಕ್ಷಣವೂ ದುಬಾರಿ ಯಾಗಿದೆ. ಈಗ ಪರಿಷತ್‌ನ ಭೂಮಿಯನ್ನು ಅತ್ಯಂತ ನಾಜೂಕಾಗಿಯೇ ಲಪಟಾಯಿಸುವ ಯತ್ನಗಳು ಸಾಗಿವೆ.




ಲಾಭಕರ ಹುದ್ದೆ ವಿವಾದದ ಹೊಡೆತಕ್ಕೆ ಹೆದರಿದ ಮಹಾರಾಷ್ಟ್ರ ಗವರ್ನರ್ ಕೃಷ್ಣರು ಪರಿಷತ್‌ನ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿದು, ಅಲ್ಲಿ ಬಿ.ಎಲ್.ಶಂಕರ್ ಕೂಡಿಸಿ, ಈಗಲೂ ಸದಸ್ಯರಾಗಿದ್ದುಕೊಂಡೇ ಎಲ್ಲವನ್ನೂ ನಿಯಂತ್ರಿಸುತ್ತಿದ್ದಾರೆ. ಹಾಗೆಯೇ ಪರಿಷತ್‌ನ ಟ್ರಸ್ಟ್ ಅಧ್ಯಕ್ಷರಾಗಿಯೂ ಪರಿಷತ್ ಆಸ್ತಿಯನ್ನೆಲ್ಲಾ ಟ್ರಸ್ಟಿಗೆ ವರ್ಗಾಯಿಸಿಕೊಳ್ಳಲು ಹೊಂಚು ಹಾಕುತ್ತಿದ್ದಾರೆ.

ಯಾವ ಕ್ಷೇತ್ರಕ್ಕೆ ಕಾಲಿಟ್ಟರೂ ತಮ್ಮ 'ಕೈಚಳಕ' ತೋರುವುದರಲ್ಲಿ ನಿಸ್ಸೀಮರಾದ ಎಸ್.ಎಂ. ಕೃಷ್ಣ ಕಲಾಸೌಂದರ್ಯವೆಂದರೆ ಇಂಚಂಚು ಪೌಡರ್ ಮೆತ್ತಿಕೊಳ್ಳುವುದು ಎಂದು ತಿಳಿದಂತಿರುವ ಬಿ.ಎಲ್. ಶಂಕರ್ ಎಂಬ ಸೋಗಲಾಡಿ ರಾಜಕಾರಣಿಗಳು ಎಂದು ಪರಿಷತ್‌ಗೆ ಕಾಲಿಟ್ಟರೋ ಅಂದಿನಿಂದ ಪರಿಷತ್ತು ವಾಣಿಜ್ಯಮಯವಾಗಿ ಕಲೆಯ ಗಂಧವೇ ಇಲ್ಲದ ಕಂದನಾಗಿ ಬಣಬಣಗುಟ್ಟುತ್ತಿದೆ.

ಕೃಷ್ಣ, ಶಂಕರರಿಗೊಬ್ಬ ಚೌಟ!

ನಂಜುಂಡರಾವ್‌ರ ಕನಸಿನ ಕೂಸಾದ ಪರಿಷತ್‌ನ ಕಲಾವೈಭವವನ್ನು ಅಧೋಗತಿಯತ್ತ ಒಯ್ಯುವುದಕ್ಕೆ ಪರಿಷತ್ ಸೆಕ್ರೆಟರಿ ಡಿ.ಕೆ. ಚೌಟ ಎಸ್.ಎಂ. ಕೃಷ್ಣ ಮತ್ತು ಬಿ.ಎಲ್. ಶಂಕರರ ಕೀಲುಗೊಂಬೆಯಂತೆ ವರ್ತಿಸುತ್ತಿದ್ದಾರೆ. ಎಸ್.ಎಂ. ಕೃಷ್ಣ ಬಿ.ಎಲ್. ಶಂಕರ್ ಆರಂಭದಲ್ಲಿ ತಾವು ಕಲಾಪ್ರೇಮಿಗಳು ಎಂದು ತೋರಿಸಿಕೊಳ್ಳಲಿಕ್ಕೆ ಪರಿಷತ್ತಿನ ವೇದಿಕೆಗಳನ್ನು ಉಪಯೋಗಿಸಿಕೊಳ್ಳುತ್ತ ಬಂದರು. ಈಗ ನೋಡಿದರೆ 'ಕರ್ನಾಟಕ ಚಿತ್ರಕಲಾ ಪರಿಷತ್ ಟ್ರಸ್ಟ್'ಗೆ ಪರಿಷತ್‌ನ ಭೂಮಿಯೆಲ್ಲವನ್ನೂ ನೀಡುವಂತೆ ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ಈಗ ಚಿತ್ರಕಲಾ ಪರಿಷತ್ ಹೆಸರಿಗೆ ಇರುವ ಸುಮಾರು 5 ಎಕರೆ ಭೂಮಿಯ ಲೀಸ್ ಈ ಏಪ್ರಿಲ್‌ಗೆ ಮುಗಿಯಲಿದೆ. ಕೃಷ್ಣ-ಶಂಕರ್ ಜೋಡಿ ಆ ಜಾಗೆಯನ್ನು ತಮ್ಮ ಹಿಡಿತ ಇರುವ ಪರಿಷತ್‌ನ ಟ್ರಸ್ಟ್ ಹೆಸರಲ್ಲಿ renewal ಮಾಡಿಕೊಡಬೇಕೆಂದು ಕಂದಾಯ ಇಲಾಖೆಗೆ ದುಂಬಾಲು ಬಿದ್ದಿದೆ. ಹಾಗೆಯೇ ಪರಿಷತ್‌ನ 14 ಎಕರೆ ಯಲಹಂಕ ಭೂಮಿಯ ಮೇಲೂ ಇವರಿಬ್ಬರ ವಕ್ರದೃಷ್ಟಿ ಬಿದ್ದಿದೆ. ಈ ಪರಿಷತ್ತಿಗೆ 180 ಸದಸ್ಯರಿದ್ದಾರೆ. ಎಕ್ಸಿಕ್ಯೂಟಿವ್ ಕಮಿಟಿಯೇ ಎಲ್ಲ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಬೇಕೆಂಬ ನಿಯಮಗಳನ್ನು ಮುರಿಯುತ್ತಲೇ ಸಾಗಲಾಗುತ್ತಿದೆ. ಪರಿಷತ್ತಿನ ಲಡಕಾಸಿ ಮೊಪೆಡ್ ಮಾರುವ, ಕ್ಯಾಂಟೀನ್ ಆರಂಭಿಸುವ ಕುರಿತಾದ ಸಣ್ಣಪುಟ್ಟ ವಿಷಯಗಳನ್ನು ಮಾತ್ರ ಎಕ್ಸಿಕ್ಯೂಟಿವ್ ಕಮಿಟಿಯ ಮುಂದೆ ತರಲಾಗುತ್ತಿದೆ. ಹೊಸ ಕಟ್ಟಡ ನಿರ್ಮಾಣ, ಅಕಾಡೆಮಿಕ್ ವಿಷಯಗಳಂತಹ ಪ್ರಮುಖ ವಿಷಯಗಳ ಕುರಿತು ಎಕ್ಸಿಕ್ಯೂಟಿವ್ ಕಮಿಟಿಗೆ ಏನೊಂದೂ ಕೇಳದ ಕೃಷ್ಣಾಪೋಷಿತ ಶಂಕರ-ಚೌಟ ಪಡೆ ಏಕಪಕ್ಷೀಯ ನಿರ್ಧಾರ ಕೈಗೊಳ್ಳುತ್ತಿದೆ.




ಆರು ಎಕ್ಸಿಕ್ಯೂಟಿವ್ ಸಭೆಗಳಿಗೆ ಹಾಜರಾಗಲಿಲ್ಲವೆಂದು ಪರಿಷತ್ ಉಪಾಧ್ಯಕ್ಷ ಕಮಲೇಶ್‌ರನ್ನು ಏಕಾಏಕಿ ತೆಗೆದು ಹಾಕಿದ್ದರು. ಆದರೆ ವರ್ಷದಲ್ಲಿ ಒಂದೂ ಸಭೆಗೆ ಹಾಜರಾಗದ ಎಸ್.ಎಂ. ಕೃಷ್ಣಗೆ ಈ

ಆ ಕಲಾವೈಭವದ ದಿನಗಳು.... ಈ ಅಧೋಗತಿಯ ದಿನಗಳು

ಅವರು ಕಲಾಪ್ರೇಮಿ, ಕಲಾವಿದ ನಂಜುಂಡ ರಾವ್. ಚಿತ್ರಕಲಾ ಪರಿಷತ್ತನ್ನು ತಮ್ಮ ಜೀವನದುದ್ದಕ್ಕೂ ಕಟ್ಟಿ ಬೆಳೆಸಿದ ನಿಸ್ವಾರ್ಥಿ ಮಹಾನುಭಾವ. 1960 ರಲ್ಲಿ ಚಿತ್ರಕಲಾ ಪರಿಷತ್ ಹೆಸರಿಂದ ಆರಂಭಗೊಂಡ ಈ ಸಂಸ್ಥೆ ಸಾವಿರಾರು ಬಡ ಕಲಾವಿದರಿಗೆ ಕಲಾಶಿಕ್ಷಣ ಒದಗಿಸುತ್ತ ಶಿಕ್ಷಣ ದಾಸೋಹ ನಡೆಸುತ್ತಿತ್ತು.

ಮಧ್ಯದಲ್ಲಿ ಮೈಸೂರು ಚಿತ್ರಕಲಾಪರಿಷತ್ ಎಂದಾಗಿ ನಂತರ ಕರ್ನಾಟಕ ಚಿತ್ರಕಲಾ ಪರಿಷತ್ ಎಂದು ನಾಮಕರಣಗೊಂಡಿತು. 1967 ರಲ್ಲಿ ಆಗಿನ ಸಿ.ಎಂ. ದೇವರಾಜ್ ಅರಸ್‌ರವರು ಮೂರು ಎಕರೆ ಭೂಮಿಯನ್ನು ಲೀಸ್‌ಗೆ ನೀಡಿ ಪರಿಷತ್ ಬೆಳವಣಿಗೆಗೆ ಸಹಾಯ ಮಾಡಿದ್ದರು. ನಂಜುಂಡರಾವ್ ಶ್ರಮದಿಂದ ಪ್ರಸಿದ್ಧ ಕಲಾವಿದರ ಸಾವಿರಾರು ಪೇಂಟಿಂಗ್ಸ್, ಕಲಾಕೃತಿಗಳು ಸಂಗ್ರಹವಾದವು. ರೋರಿಚ್‌ರ ಬಹುಪಾಲು ಕಲಾಕೃತಿಗಳು ಇಲ್ಲಿ ಲಭ್ಯವಾದವು. ಜೇಜರಿವಾಲ ಎಂಬ ಶ್ರೀಮಂತ ಕಲಾಪ್ರೇಮಿಯೂ ತನ್ನ ಬಳಿ ಇದ್ದ ಕಲಾಕೃತಿಗಳನ್ನು ಪರಿಷತ್‌ಗೆ ನೀಡಿದ್ದರು.

ಈಗ ಕೃಷ್ಣರ ಕರಾಮತ್ತಿನಿಂದ ಕಿರಣ್ ಮುಜುಮುದಾರಂತಹ ಉದ್ಯಮಿಗಳೂ ಇಲ್ಲಿ ಮೆಂಬರ್ಸ್. ಡಿ.ಎನ್.ಎ. structure ನ ಚಿತ್ರ ಬರೀ ಅಂದರೆ ಆರ್.ಎನ್.ಎ. structure ಬರೆಯುವ ಈಯಮ್ಮನಿಂದ ಅದೇನು ಕಲಾಸೇವೆ ಜರುಗುತ್ತಿದೆಯೋ?




ನಂಜುಂಡರಾವ್

ಆಗಾಗ ಚಿತ್ರಕಲಾ ಪರಿಷತ್ ವಿದ್ಯಾರ್ಥಿ ಗಳು ಪ್ರತಿಭಟನೆಗಿಳಿಯುವುದನ್ನು ಓದು ತ್ತಲೇ ಇರುತ್ತೀರಿ. ಲೈಂಗಿಕ ಕಿರುಕುಳದ ದೊಡ್ಡ ಕತೆಯೇ ಇಲ್ಲಿದೆ. ಲೆಕ್ಚರರ್ ಟಿ.ಎಮ್.ವಿ. ಗೌಡನ ವಲ್ಗರ್ (ಬೈಗುಳ) ಭಾಷೆ ಹುಡುಗಿಯರ ಮಾನ ಹರಾಜು ಹಾಕುತ್ತಿದೆ. ಈತ ಕೆಲಸಕ್ಕೆ ಸೇರಿರುವುದೇ age bar ಆದ ನಂತರ. MFA ನಲ್ಲಿ 3rd ಕ್ಲಾಸ್‌ನಲ್ಲಿ ಪಾಸಾಗಿರುವ ಈತ ಉಪನ್ಯಾಸಕನಾಗಲು ಅನರ್ಹ. ಸಿ.ಎಸ್. ರಾಜೇಶನ ಮಂಗಚೇಷ್ಟೆಗಳಿಗೆ ಮಿತಿಯೇ ಇಲ್ಲ. ಎಸ್. ರಘುನಾಥ್ ಸಹ ಇದರಲ್ಲಿ ನಿಸ್ಸೀಮನೇ. ಪಾಠ ಹೇಳದೇ ಗುಂಪು ಕಟ್ಟಿಕೊಂಡು ನಿಲ್ಲುವುದು, ಟೈಟಾಗಿ ಬಂದು ಪಾಠ ಕಲಿಸುವ ತಿಕ್ಕಲುತನ ಮಾಡುವುದೇ ವಿಶ್ವನಾಥನ ನಿತ್ಯ ಚಟ. ಇವರಿಗೆಲ್ಲ ಲೀಡರ್‌ನಂತೆ ಇರುವ ಶ್ರೀಧರ್‌ಮೂರ್ತಿ ಎಂಬ ಲೆಕ್ಚರರ್ ಪಾಲಿಟಿಕ್ಸ್ ಮಾಡುತ್ತಾ ವಿದ್ಯಾರ್ಥಿಗಳಿಂದ ಥೂ ಎಂದು ಉಗುಳಿಸಿಕೊಳ್ಳುತ್ತಲೇ ಇದ್ದಾನೆ.

ಕ್ಯಾಂಪಸ್‌ನಲ್ಲಿದ್ದ ಮರಗಳಿಗೂ ಕುತ್ತು ಬಂದಿದೆ. ರಂಗಮಂದಿರ ಹಾಳುಗೆಡುವವ ಪ್ರಯತ್ನವೂ ನಡೆದಿದೆ. ಕಲಾಶಿಕ್ಷಕರೆಂಬ ಈ ಸಂಸ್ಕೃತಿಹೀನರಿಗೆ ಪಾಠ ಕಲಿಸಬೇಕಾದ ಕೃಷ್ಣ-ಶಂಕರ್ ಜೋಡಿಗೇ ನೈತಿಕತೆ ಇಲ್ಲವಲ್ಲ!

ನಿಜವಾದ ಕಲೆ ಅಮರವಾದುದು -ಗಾಂಧೀಜಿ

...ಣಿತಾಪವರ ನೇತೃತ್ವದಲ್ಲಿ ಮಾರ್ಚ್ ಹದಿನೇಳರಂದು ...ವಮೊಗ್ಗ ಜಿಲ್ಲಾ ಪಂಚಾಯ್ತಿಯ ಎದುರು ಆನವಟ್ಟಿ ...ಮ ಪಂಚಾಯ್ತಿಯನ್ನು ಬರಖಾಸ್ತುಗೊಳಿಸುವಂತೆ ...ಹ್ರಾಯಿಸಿ ಪ್ರತಿಭಟನೆ ನಡೆಯಿತು.


ಪ್ರಶಾಂತ್

ಪಕ್ಷಬೇಧ ಮರೆತು ಬೇರೆಲ್ಲಾ ಪಕ್ಷಗಳೂ ದಲಿತರ ಹೋರಾಟವನ್ನು ಬೆಂಬಲಿಸಿದರೆ ಸಮಾಜವಾದಿ ಪಕ್ಷದ ಯಾವೊಬ್ಬ ಸದಸ್ಯನೂ ಅತ್ತ ತಲೆಹಾಕಲಿಲ್ಲ. ಆನವಟ್ಟಿ ಪಂಚಾಯ್ತಿಯನ್ನು ವಜಾ ಮಾಡುವಂತೆ ಒಮ್ಮತದ ...ರ್ಣಯವನ್ನು ಕೈಗೊಳ್ಳಲಾಯ್ತು.

ಸದ್ಯ ಶಿವಮೊಗ್ಗ ಜಿಲ್ಲಾ ಪಂಚಾಯ್ತಿ ಮುಖ್ಯ ...ರ್ಯನಿರ್ವಹಣಾಧಿಕಾರಿ ಶಿವಕುಮಾರ್ ಆನವಟ್ಟಿ ...ಂಚಾಯ್ತಿಗೆ ಷೋಕಾಸ್ ನೋಟೀಸ್ ಕೊಟ್ಟಿದ್ದಾರೆ. ...ಷ್ಟಾದ ನಂತರವೂ ಸರಸ್ವತಿಯವರ ಪೆಟ್ರೋಲ್ ಬಂಕಿಗೆ ...OC ಕೊಡದ ಪಕ್ಷದಲ್ಲಿ ಆನವಟ್ಟಿ ಪಂಚಾಯ್ತಿಯ ...ರಖಾಸ್ತು ಶತಸಿದ್ಧ.

ಪ್ರಶ್ನೆಯಂದರೆ ಯಾವ 'ಬಂ' ಅಂಬೇಡ್ಕರ್ ಭಾವಚಿತ್ರ ...ದ ಅವಮಾನದ ವಿರುದ್ಧ ಪ್ರತಿಭಟಿಸಿದರೋ, ತಮ್ಮ ...ಮಾಜವಾದಿ ಪಕ್ಷದ ಪ್ರಚಾರಕ್ಕೆಂದು ಇವತ್ತಿಗೂ ...ಂಬೇಡ್ಕರ್ ಫೋಟೋ ಬಳಸುತ್ತಿದ್ದಾರೋ, ಅದೇ ...ಂ' ಓರ್ವ ದಲಿತ ಮಹಿಳೆಗೆ ಪೆಟ್ರೋಲ್ ಬಂಕ್ ...ಂಜೂರಾದರೆ ಏಕೆ ಸಹಿಸುತ್ತಿಲ್ಲ? ತಮ್ಮ ಅಳಿಯನ ...ಪಾದನೆಯ ಮುಂದೆ ಪಕ್ಷ ಸಿದ್ಧಾಂತಗಳ್ಯಾವುವೂ ...ಕ್ಕಿಲ್ಲವೆ?

'ಬಂ' ಇಷ್ಟಾದ ನಂತರವಾದರೂ ತಮ್ಮ ಪಕ್ಷದ ...ದಸ್ಯರನ್ನು ಸುಮ್ಮನಿರಿಸಬಹುದಿತ್ತು. ಪೆಟ್ರೋಲ್ ...ಂಕ್‌ಗೆ NOC ಕೊಡಿಸಬಹುದಿತ್ತು. ಆದರೆ ...ಬಟೂರು ಪಾಲಾಕ್ಷಪ್ಪ ಹಾಕಿದ ಗೆರೆ ದಾಟುವುದು ...ಂ' ಜಾಯಮಾನವಲ್ಲ, ಅಂಬೇಡ್ಕರ್ ಫೋಟೋ ...ಟ್ಟು ಗಳಿಸಿದ್ದೆಲ್ಲ ಪೆಟ್ರೋಲ್ ಬಂಕು ನುಂಗಿ ...ಕಿದೆ. ಶಿವಮೊಗ್ಗ ದಲಿತರು ಬಂ ವಿರುದ್ಧ ತಿರುಗಿ ...ದ್ದಿದ್ದಾರೆ.

-ರಾ. ಸೋಮನಾಥ್

ಕುಲಘಾತುಕ ಶಾಂತವೀರನಾಯ್ಕ

ಒಂದೆಡೆ ಸರಸ್ವತಿಗಾದ ಅನ್ಯಾಯದ ವಿರುದ್ಧ ದಲಿತರು ಪ್ರತಿಭಟಿಸುತ್ತಿದ್ದರೆ ಮತ್ತೊಂದೆಡೆ ತಮ್ಮ ಪರವಾಗಿ ದಲಿತನೇ ಆದ ಜಿಲ್ಲಾ ಪಂಚಾಯ್ತಿ ಸದಸ್ಯ ಶಾಂತವೀರನಾಯ್ಕನನ್ನು 'ಬಂ' ಛೂ ಬಿಟ್ಟಿದ್ದಾರೆ. ಶಾಂತವೀರ ನಾಯ್ಕನದು ನಾಯಿ ನಿಯತ್ತು, ಪಕ್ಕಾ ನಸುಗುನ್ನಿ. ಕಳೆದ ಬಾರಿ ಹೊಳಲೂರಿನಿಂದ ಜಿಲ್ಲಾ ಪಂಚಾಯ್ತಿಗೆ ಗೆದ್ದು, ಈ ಬಾರಿ ಹೊಳೆಹೊನ್ನೂರಿನ ಆನ ವೇರಿಯಿಂದ ಸಮಾಜವಾದಿ ಪಕ್ಷದಿಂದ ಗೆದ್ದು ಬಂದಿರುವ ನಾಯ್ಕ ಜಾತಿಯಲ್ಲಿ ಲಂಬಾಣಿ. ಎಲ್ಲೆಲ್ಲಿ 'ಬಂ' ವಿರುದ್ಧ ದಲಿತರು ತಿರುಗಿ ಬೀಳುತ್ತಾರೋ ಅಲ್ಲೆಲ್ಲ ಧಣಿಯ ಪರ ಗುರು ಗುಟ್ಟುವುದು ಈತನ ಹುಟ್ಟುಗುಣ.


ಶಾಂತವೀರನಾಯ್ಕ

ಶಿವಮೊಗ್ಗ ಜಿಲ್ಲಾ ಪಂಚಾಯ್ತಿಯ ಅಧ್ಯಕ್ಷೆ ಭಾರತಿ ಮಂಜನಾಥಯ್ಯ ಜಾತಿಯಲ್ಲಿ ಬ್ರಾಹ್ಮಣರು. ಉಪಾಧ್ಯಕ್ಷ ಕೆ.ಎಂ. ಕೃಷ್ಣಮೂರ್ತಿಯವರದು ಹಿಂದುಳಿತ ಜಾತಿ. ಹಾಲುನಹಳ್ಳಿ ಬುಳ್ಳಾಪುರ ಬಸವರಾಜಪ್ಪ ಲಿಂಗಾಯತ ರಾದರೆ, ಸಾಗರದ ಬಿ.ಆರ್. ಜಯಂತ್ ಬ್ರಾಹ್ಮಣರು. ಇವರೆಲ್ಲರೂ ದಲಿತರ ಪರವಾಗಿ ಸರಸ್ವತಿಗಾದ ಅನ್ಯಾಯದ ವಿರುದ್ಧ ಜಿಲ್ಲಾ ಪಂಚಾಯ್ತಿ ಸಭೆಯಲ್ಲಿ ಕಿಡಿಕಾರುತ್ತಿದ್ದರೆ, ದಲಿತ ಮೀಸಲಾತಿಯಿಂದಲೇ ಗೆದ್ದಿದ್ದ ಶಾಂತವೀರನಾಯ್ಕ 'ಬಂ' ಪರವಹಿಸಿ ಬೊಗಳುತ್ತಿದ್ದ. "ಅಲ್ರೀ ನೀವೂ ಒಬ್ಬ ದಲಿತರಾಗಿ ದಲಿತ ಮಹಿಳೆಗೆ ಅನ್ಯಾಯ ಮಾಡ್ತೀರಲ್ಲಾ?" ಎಂದು ಜೆಡಿಎಸ್‌ನ ಕೃಷ್ಣಮೂರ್ತಿ ಕೇಳಿದ್ದಕ್ಕೆ, ಶಾಂತವೀರನಾಯ್ಕ "ಪೆಟ್ರೋಲ್ ಬಂಕ್ ಮಾಡುವಷ್ಟು ದುಡ್ಡಿರೋರು ಹ್ಯಾಗ್ರಿ ದಲಿತರಾಗ್ತಾರೆ?" ಎಂದು ವಾದಿಸಿದ್ದ. ನಾಯ್ಕ ಈ ಹಿಂದೆ ಜಿಲ್ಲಾ ಪಂಚಾಯ್ತಿಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷನಾಗಿದ್ದ!

ದಲಿತ ಕುಲಘಾತುಕನ ಕೈಯಲ್ಲಿ ದಲಿತರ ಭವಿಷ್ಯ ಕೊಟ್ಟರೆ ಇನ್ನೇನಾದೀತು?

...ರುಮ ಅನ್ವಯವಾಗಲಿಲ್ಲ. ಪರಿಷತ್ ಸದಸ್ಯರ ...ತಿಭಟನೆಗೆ ಮಣಿದ ಚೌಟರವರು ಮತ್ತೆ ಕಮ ...ಶ್‌ರನ್ನು ಒಳಕ್ಕೆ ಕರೆದರು. ಆದರೆ ಈಗ ಕಮಲೇಶ್ ...ರರೂ ಸಹ ಹಿಂಬಾಲಕರಾಗಿ ಬಿಡುವುದೆ?

ಚೌಟರ ಡ್ರಾಮಾ, ಶಂಕರ್ ಮೆಲೊಡ್ರಾಮಾ

ಕಳೆದ ಡಿಸೆಂಬರ್‌ನಲ್ಲಿ ಪರಿಷತ್ ಬಗ್ಗೆ ಕಾಳಜಿ ...ರುವವರೆಲ್ಲ ಪರಿಷತ್‌ನ ಕಲಾಪರಿಸರ ಹಾಳಾಗುತ್ತಿರು ...ದನ್ನು ವಿರೋಧಿಸಿದರು. ಆರ್ಟ್ ಗ್ಯಾಲರಿ ಬಾಡಿಗೆ ...ಟ್ಟಿಸಿದ್ದರಿಂದ ಬಡ ಕಲಾವಿದರು, ಬಡ ಕಲಾಸಂಸ್ಥೆಗಳು ...ಾ ಪ್ರದರ್ಶನಕ್ಕೆ ಪರಿಷತ್ ಅವಲಂಭಿಸದಂತಾಗಿದೆ. ...ಾ ಶಿಕ್ಷಣವನ್ನು ದುಬಾರಿಗೊಳಿಸಿರುವುದರಿಂದ ...ಮಂತ ವಿದ್ಯಾರ್ಥಿಗಳಷ್ಟೇ ಕಲಿಯಲು ಬರುತ್ತಿದ್ದಾರೆ. ...ಲೇಜಿನಲ್ಲಿ ಶಿಕ್ಷಕರು ಸರಿಯಾಗಿ ಪಾಠ ಮಾಡದೇ ...ದ್ಯಾರ್ಥಿ ವಿರೋಧಿಗಳಾಗಿದ್ದಾರೆ. ಪರಿಷತ್‌ನ ಸದಸ್ಯರಿಗೆ ...ಲೆಯೇ ಇಲ್ಲದಂತಾಗಿ ಹೋಗಿದೆ ಹಾಗೂ ಪರಿಷತ್‌ನ ...ಆಸ್ತಿಯನ್ನು ಎಲ್ಲರ ವಿರೋಧದ ನಡುವೆಯೂ ...ಖಾಸಗೀಕರಣಗೊಳಿಸಲು ಯತ್ನಿಸಲಾಗುತ್ತಿದೆ... ಇಂತಹ ...ರೋಪಗಳು ಹಲವು ತಿಂಗಳಿಂದ ಕೇಳಿಬರುತ್ತಿದೆ.

ಇವತ್ತು ಪರಿಷತ್ ತನ್ನ ಹಳೆಯ ಖ್ಯಾತಿಯನ್ನು ...ದುಕೊಳ್ಳುತ್ತಾ ಸಾಗುತ್ತಿರುವುದಕ್ಕೆ ಎಸ್.ಎಂ. ಕೃಷ್ಣ ...ತ್ತು ಬಿ.ಎಲ್. ಶಂಕರ್‌ರ ಕುತಂತ್ರ ಬುದ್ಧಿಯೇ ...ರಣವಾಗಿದೆ. ಈ ಹಿಂದೆ ಪರಿಷತ್ ಅಧ್ಯಕ್ಷರಾಗಿ ಅನೇಕ ರಾಜಕಾರಣಿಗಳು ಕಾರ್ಯನಿರ್ವಹಿಸಿದ್ದರೂ ಈ ರೀತಿ ಯಾರೂ ಸರ್ವಾಧಿಕಾರಿ ಆಗಿರಲಿಲ್ಲ. ಜೀವರಾಜ್ ಆಳ್ವ, ಕೆ.ಎಸ್. ನಾಗರತ್ನಮ್ಮ, ಚಂದ್ರಪ್ರಭಾ ಅರಸ್, ರಾಮಕೃಷ್ಣ ಹೆಗಡೆ ತಮ್ಮ ಪಾಡಿಗೆ ತಾವಿದ್ದು ಪರಿಷತ್‌ನ್ನು ಜನಪ್ರಿಯತೆಗೆ ಮಾತ್ರ ಬಳಸಿಕೊಂಡಿದ್ದರು. ಒಮ್ಮೆ ಮಾಡರ್ನ್ ಆರ್ಟ್ಸ್ ಪ್ರದರ್ಶನ ಉದ್ಘಾಟಿಸಿದ್ದ ಹೆಗಡೆ "ಏನಿದು ಈ ಚಿತ್ರಗಳಿಗೆ ಮುಖ-ಗಿಖ ಏನೂ ಇಲ್ಲವಲ್ಲ" ಎಂದು ಹೇಳಿ ತಮ್ಮ 'ಕಲಾಬುದ್ಧಿ' ಪ್ರದರ್ಶಿಸಿದ್ದರು.

ಕಲ್ಕತ್ತಾದ ಶಾಂತಿನಿಕೇತನ ವಿದ್ಯಾಲಯಕ್ಕೆ ಹೋಲಿ ಸಲ್ಪಡುತ್ತಿದ್ದ ಕರ್ನಾಟಕ ಚಿತ್ರಕಲಾ ಪರಿಷತ್ ಅವನತಿಯತ್ತ ಸಾಗದಂತೆ ತಡೆಯುವುದು ಎಲ್ಲ ಪ್ರಜ್ಞಾವಂತರ ಕರ್ತವ್ಯ ಆಗಬೇಕಿದೆ. ಬಿ.ಎಲ್. ಶಂಕರ್, ಸರ್ವಾಧಿಕಾರಕ್ಕೆ ಬೇಸತ್ತ ಹಿರಿಯ ಕಲಾವಿದ ಕೆ.ಟಿ. ಶಿವಪ್ರಸಾದರು ಶಂಕರ್‌ಗೆ ಉಗಿದು ರಾಜೀನಾಮೆ ನೀಡಿಬಿಟ್ಟಿದ್ದಾರೆ.

ನಂಜುಂಡರಾವ್ ಕಷ್ಟಪಟ್ಟು ಕಟ್ಟಿ ಬೆಳೆಸಿದ ಸಂಸ್ಥೆಯಲ್ಲಿ ಮೌಲ್ಯ ಕಲಾರಾಧನೆ, ಕಲಾಶಿಕ್ಷಣಗಳೆಲ್ಲವನ್ನು ಕೊಲ್ಲುತ್ತ ಸಾಗಿರುವುದು ಅಕ್ಷಮ್ಯ ಅಪರಾಧವಲ್ಲವೆ?

ಕುಂಚವನ್ನು ಹಿಡಿಯದ 'ಕಲಾಕಾರ'ರಾದ ಕೃಷ್ಣ ಮತ್ತು ಶಂಕರ್‌ರಿಂದ ಪರಿಷತ್ತನ್ನು ಶೀಘ್ರ ಮುಕ್ತಗೊಳಿಸ ಬೇಕಾಗಿದೆ. ಈ ಇಬ್ಬರು ಕಾರ್ಟೂನ್‌ಗಳು ಪರಿಷತ್ತನ್ನೇ ಹಾಸ್ಯಾಸ್ಪದಗೊಳಿಸುತ್ತಿರುವುದನ್ನು ಕಲಾವಿದರೆಲ್ಲ ಪ್ರತಿಭಟಿಸಬೇಕಿದೆ.

-ಪಿ.ಕೆ. ಮಲ್ಲನಗೌಡರ್

ಚೌಟಗ್ಯಾಕೆ ಬೇಕೀ ರಗಳೆ?

"ಇವತ್ತು ಡಿ.ಕೆ. ಚೌಟರನ್ನು ವಿರೋಧಿಸುತ್ತಿರುವವರೆಲ್ಲರೂ ಚೌಟರ ಶುದ್ಧ ಕೈ ಬಗ್ಗೆ ಹೇಳುವುದನ್ನು ...ರೆಯುವುದಿಲ್ಲ, ಆಗರ್ಭ ಶ್ರೀಮಂತರಾಗಿರುವ ಡಿ.ಕೆ. ಚೌಟಗೆ ಚಿತ್ರಕಲಾ ಪರಿಷತ್‌ನ ಹಣ ಯಾವ ಲೆಕ್ಕ? ಆದರೆ ಅವರ ಧೋರಣೆಗಳೂ ಅವರ business ಶೈಲಿಯಲ್ಲೇ ಇರುವುದೇ ಎಲ್ಲರ ವಿರೋಧಕ್ಕೆ ಕಾರಣವಾಗಿದೆ. ...ಸಿಗಳಿಂದ, ಸರ್ಕಾರದಿಂದ ಅನುದಾನ ಅಪೇಕ್ಷಿಸಲಾರೆ ಎಂದು ವಾದಿಸುವ ಚೌಟರು ಪರಿಷತ್ತಿನ ಆರ್ಥಿಕ ...ಸ್ವಾವಲಂಬನೆಗಾಗಿ ಕಾರ್ಪೋರೇಟೀಕರಣಕ್ಕೆ, ಪಕ್ಕಾ ಕಮರ್ಷಿಯಲ್ ನೀತಿಯನ್ನು ರೂಪಿಸುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ...ಕ ಶ್ರೀಜಿಸ ಹೊರೆಯೂ ಬೀಳುತ್ತಿದೆ. ಸಂಪನ್ಮೂಲ ಸಂಗ್ರಹಕ್ಕಾಗಿ ವಿದ್ಯಾರ್ಥಿಗಳಿಗೆ, ಸಂದರ್ಶಕರಿಗೆ ಪಾರ್ಕಿಂಗ್ ...ಶುಲ್ಕ ವಿಧಿಸುವ ಮಟ್ಟಕ್ಕೂ ಹೋಗಲಾಗಿದೆ.

ಎಸ್.ಎಂ. ಕೃಷ್ಣ, ಬಿ.ಎಲ್. ಶಂಕರ್ ಎಂಬ ಕಿತಾಪತಿ ಪಾಲಿಟಿಸಿಯನ್ಸ್‌ಗಳನ್ನು ನಂಬಿ ಹಾಳಾಗುವುದನ್ನು ...ಬಿಟ್ಟು ಎಲ್ಲ ಮೆಂಬರುಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗಬೇಕಾದ ಜವಾಬ್ದಾರಿ ಚೌಟ ಮೇಲಿದೆ. ...ಚಳುವಳಿ ಹೋರಾಟಗಳಲ್ಲಿ ಸಕ್ರಿಯರಾಗಿರುವ ಚೌಟರು ಕಲಾ ಸಂಸ್ಥೆಯ ಹಳೆಯ ಹಿರಿಮೆಯನ್ನು ಎತ್ತಿ ...ಹಿಡಿಯುವಂತಾಗಲಿ ಎಂದು 'ಪತ್ರಿಕೆ' ಆಶಿಸುತ್ತಿದೆ.

ಜನಗಳು ನಗ್ತರೆ, ಆಡಿಕೊಳ್ತರೆ ಅಂತ ನಾವು ಅಂಜಿಕೋಬಾರ್ದು

ಹೊಸ ಮಡಿವಾಳರ ವರಸೆ ತೋರುತ್ತಿರುವ ಕುಮಾರಸ್ವಾಮಿಯ ಸಂಪುಟದಲ್ಲಿರುವ ಗೋಣಿಚೀಲದ ಗಿರಾಕಿಗಳು ಮಾಡುತ್ತಿರುವ ಠೇಂಕಾರವನ್ನು ನೋಡಿ ಅಕ್ರಮ ದಂಧೆಯ ಗಿರಾಕಿಗಳು ಅಲ್ಲಾಡಿ ಹೋಗಿ ದ್ದಾರಂತಲ್ಲಾ, ಈ ಪೈಕಿ ಬಸ್ ಮಾಲೀಕರ ಸಂಘದ ಅಧ್ಯಕ್ಷನಂತೆ ಕಾಣುವ ಸಾರಿಗೆ ಸಚಿವ ಚಲುವರಾಯ ಸ್ವಾಮಿ "ಅನಧಿಕೃತ ಖಾಸಗಿ ಬಸ್ ಸಂಚಾರ ತಡೆಯಲು ಉಗ್ರ ಕ್ರಮ ತೆಗೆದುಕೊಳ್ಳುತ್ತೇನೆ" ಎಂದು ಹೇಳಿದ್ದಾ ರಂತಲ್ಲಾ, ಈ ರೀತಿ ಹೇಳಿಕೆ ಕೊಡಲು ಕಾರಣ ಏನೆಂದರೆ ನ್ಯಾಷನಲ್ ಟ್ರಾವೆಲ್ಸ್ ಎಂಬ ಖತರ್‌ನಾಕ್ ಕಂಪನಿಯ ಅನಧಿಕೃತ ಬಸ್‌ಗಳು, ಬೆಂಗಳೂರಿನಿಂದ ಮೇಲುಕೋಟೆ ಚಲುವರಾಯಸ್ವಾಮಿ ದರ್ಶನಕ್ಕೆಂದು ಒಂದರ ಬದಲು ಹನ್ನೊಂದು ಹೋಗಿ ಬರುತ್ತಿದ್ದು, ಪರ್ಮಿಟ್ ಮಾತ್ರ ಒಂದೇ ಬಸ್ಸಿಗಿದೆಯೆಂದು ಯಾರೋ ಚಲುವರಾಯಸ್ವಾಮಿಗೆ ಹೇಳಿದ್ದಂತಲ್ಲಾ.



ಇದನ್ನು ತಡೆಯಲು ಮುಂದಾಗಿ ಒಂದು ಹೇಳಿಕೆ ನೀಡಿದ ಮರುಗಳಿಗೆ ಯಲ್ಲೇ ನ್ಯಾಷನಲ್ ಟ್ರಾವೆಲ್ ಗ್ಯಾರೇಜಿನಿಂದ ಯಾರೋ ಕ್ಲೀನರ್ ಒಬ್ಬನು ಸಾರಿಗೆ ಸಚಿವರಿಗೆ ಫೋನ್ ಮಾಡಿ, "ಏನ್ ಶಾರ್ ಸಾರಿಗೆದು ಸಚಿವರಾಗಿ ಇರಬೇಕು ಅಂತಿದಿರೊ, ಇಲ್ಲ ಮೇಲ್‌ಕೋಟೆಗೆ ಹೋಗ್‌ಬೇಕು ಅಂತಿದೀರೋ?" ಎಂದು ರೋಪ್ ಹಾಕಿದನಂತಲ್ಲಾ, ಇದರಿಂದ ಸಿಟ್ಟಾದ ಚಲುವರಾಯಸ್ವಾಮಿ "ಯಾಕೊ ಬೋಸುಡಿಕೆ? ತಿಗ ಕಡಿತದ?" ಎಂದು ಕೇಳಲಾಗಿ, "ಅಲ್ಲಾ ಶಾರ್, ನಿಮ್ಮದು ಕುಮಾರಸ್ವಾಮಿ ಮುಖ್ಯಮಂತ್ರಿ ಆಗೋವರಿಗೆ ನಮ್ದು ನ್ಯಾಷನಲ್ ಟ್ರಾವೆಲ್ಸ್ ಮಾಲೀಕರದು ಮನೆಲಿ ಇದ್ದುಕೊಂಡು ರಾಜಕೀಯ ಮಾಡಿದಾರೆ. ನೀವು ಈಗ ಬಂದುಬಿಟ್ಟೀ ನಮ್ದು ಕಾಂಟ್ರಾಕ್ಟ್‌ಗೆ ಚೆಕ್ ಮಾಡಿದ್ರೆ ಸುಮ್ನೆ ಬಿಡ್ತಿವಾ?" ಎಂದನಂತಲ್ಲಾ, ಆಗ ಚಲುವ ರಾಯಸ್ವಾಮಿ ಸಾವರಿಸಿಕೊಂಡು "ಛೇ, ಛೇ, ನಾನು ನಿಮ್ಮ ಬಸ್ಸುಗಳ ಸಹವಾಸಕ್ಕೆ ಬರಲ್ಲ ಕಣೋ ಸಾಬಿ. ಗದುಗಿನ ಕಡೆ ಬಸ್ ಮಾತ್ರ ಚೆಕ್ ಮಾಡ್ತಿನಿ" ಎಂದರಂತಲ್ಲಾ, ಥೂತ್ತೇರಿ!



* * * * * * * * * * *

ಹಾಗೆಯೇ ಮುಖ್ಯ ಮಂತ್ರಿ ಕುಮಾರಸ್ವಾಮಿ ಬಳ್ಳಾರಿ ಜಿಲ್ಲೆಯಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಗಣಿಗಾರಿಕೆ ಕುರಿತು "ಅಕ್ರಮ ಗಣಿಗಾರಿಕೆಯನ್ನು ತಡೆಯುತ್ತೇನೆ" ಎಂದು ಧಮಕಿ ಹಾಕಿದ್ದಾರಂತಲ್ಲಾ, ಮುಖ್ಯಮಂತ್ರಿಗಳ ಈ ಠೇಂಕಾರಕ್ಕೆ ಪ್ರತಿಕ್ರಿಯೆಯಾಗಿ ಬಳ್ಳಾರಿ ಜಿಲ್ಲೆಯ ಬಡಾ ಲಾಡ್‌ಗಳು ಬಾಯಿ ಬಡಿದುಕೊಂಡು ನಗುತ್ತಾ, "ಅದು ನಮಗಲ್ಲ, ಯಾರಾರು ಜೆಡಿಎಸ್ ಅಲ್ಲವೊ ಅಂಥವರ ಮೇಲೆ ಜರುಗುವಂತಹ ಕಾನೂನು" ಎಂದರಂತಲ್ಲಾ, ಬಳ್ಳಾರಿಯಲ್ಲಿ ಅಕ್ರಮ ಗಣಿಗಾರಿಕೆ ಮಾಡುತ್ತಿರುವ ಇತರೆ ಕಬ್ಬಿಣ ಕಳ್ಳರು ಕುಮಾರಸ್ವಾಮಿ ಕಾನೂನು ಜರುಗಿಸು ವುದಕ್ಕೆ ಮುನ್ನವೇ ಭಾರಿ ಲಗೇಜಿನೊಂದಿಗೆ ಅವರನ್ನು ಭೇಟಿ ಮಾಡಿ, ಸಾರಾ ಸಗಟು ಜೆಡಿಎಸ್ ಸೇರಿಬಿಡೋಣ ಎಂದು ಯೋಚಿಸುತ್ತಿದ್ದಾರಂತಲ್ಲಾ, ಅಕ್ರಮ ಗಣಿಗಾರಿಕೆ ಯವರ ಅಕ್ರಮ ಹಣದ ಮುಖಾಂತರ ಅನಧಿಕೃತ ಬಸ್ ಮಾಲೀಕನ ಬಸ್ ಬಳಸಿ, ಸಾಗರ ಕಿನಾರೆ, ರೆಸಾರ್ಟ್ಸ್ ಮತ್ತಿತರೆ ಪುಣ್ಯ ಕ್ಷೇತ್ರಗಳ ದರ್ಶನದ ಮಹಿಮೆಯಿಂದ ಅಧಿಕಾರ ಹಿಡಿದ ಕುಮಾರಸ್ವಾಮಿ ಮತ್ತು ಪಟಾಲಂ ತಮ್ಮ ತಮ್ಮವರ ವಿರುದ್ಧವೇ ಕ್ರಮ ಜರುಗಿಸುವ ಮಾತನಾಡುತ್ತಿರುವುದನ್ನು ನೋಡಿದ ಕರ್ನಾಟಕದ ಜನಸ್ತೋಮ ನಗಬಾರದ ಜಾಗದಿಂದ ನಗುತ್ತಿದ್ದಾರಂತಲ್ಲಾ, ಥೂತ್ತೇರಿ!!!

* * * * * * * * * * * *

ತುಂಗಭದ್ರಾ ನದಿಯಲ್ಲಿ ಕೊಚ್ಚಿಕೊಂಡು ಬಂದು ಬಳ್ಳಾರಿ ಸಮೀಪ ಮರಳ ಮೇಲೆ ಸಿಕ್ಕ ಶವದಂತೆ ಕಾಣುತ್ತಿರುವ ನೀರಾವರಿ ಸಚಿವ ಈಶ್ವರಪ್ಪ, ಈಚೆಗೆ ಹಾಸು ತಿನ್ನುವುದು, ಉಣ್ಣುವುದು ಮತ್ತು ಉಸಿರಾಡು ವುದರ ಬಗ್ಗೆ ಖಚಿತವಾದ ಸೂಚನೆ ಕೊಟ್ಟಿದ್ದಾರಂತಲ್ಲಾ, ಹುಟ್ಟಿದಾಗಿನಿಂದಲೂ ಪಿಶಾಚರಾಗಲಿ ಕುರುಬ ಅನ್ನಿಸಿಕೊಳ್ಳಬಾರದೆಂದು ಹೋರಾಡುತ್ತಲೇ ಬಂದ ಈಶ್ವರಪ್ಪ ಬಾಯಿ ಬಿಟ್ಟರೆ ಸಾಕು ದಡ್ಡ ಕುರುಬನ ಅಪರಾವತಾರದಂತೆ ಮಾತನಾಡುತ್ತಾನಂತಲ್ಲಾ, "ಕನಕನ ಗೋಪುರವೇ ಇರಲಿಲ್ಲ, ಇತ್ತು ಎಂದಾದರೆ ನಾನು ಆರೆಸ್ಸೆಸ್ಸನ್ನೇ ತ್ಯಜಿಸುತ್ತೇನೆ. ಇರಲಿಲ್ಲ ಎಂದಾದರೆ ನೀವು ಆರೆಸೆಸ್ ಸೇರುತ್ತೀರ" ಎಂದು ಕುರುಬರಿಗೇ ಸವಾಲು ಹಾಕುವ ಈತನಿಗೆ ಕಸಾಯಿಖಾನೆ ಖಾತೆ ಕೊಡುವುದು ಬಿಟ್ಟು ನೀರಾವರಿ ಖಾತೆ ಕೊಟ್ಟಿರುವ ಕುಮಾರಸ್ವಾಮಿ ಸದ್ಯದಲ್ಲೇ ತುಂಗಭದ್ರಾ ನದಿಗೆ ಹಾರುವುದೊಂದು ಬಾಕಿ ಉಳಿದಿದೆಯಂತಲ್ಲಾ, ಥೂತ್ತೇರಿ!!

* * * * * * * * * * * *

ಕರ್ನಾಟಕ ಸರ್ಕಾರದ ತೀರ್ಮಾನಗಳೆಲ್ಲವೂ ಹಿಂದಿನ ದಿನ ದೇವೇಗೌಡರ ಅಡುಗೆ ಮನೆಯಲ್ಲಿ ಚರ್ಚಿತವಾಗಿ ಆನಂತರ ಸರ್ಕಾರದ ತೀರ್ಮಾನಗಳಾಗಿ ಊರ್ಜಿತವಾಗುತ್ತವೆಂದು ಹಾಸನದ ಹೈದರು ಆಡಿಕೊಳ್ಳುತ್ತಿದ್ದಾರಂತಲ್ಲಾ, ಈಚೆಗೆ ಗೌಡರ ಮನೆಯಲ್ಲಿ ಮುದ್ದೆಯೂಟ ಸಾಂಗವಾಗಿ ನೆರವೇರುತ್ತಿರುವಾಗ, ಅನ್ನ ಸಾರಿನ ಸರದಿಯೂ ಮುಗಿದು, ಮಜ್ಜಿಗೆ ಅನ್ನದ ಸರದಿ ಬಂದಾಗ "ಅಪ್ಪಾ ಆ ಯೆಡೂರಪ್ಪ ಮಜ್ಜಿಗೆ ಮ್ಯಾಲೂ ಸುಂಕ ಹಾಕ್ಯವುನೆ" ಎಂದು ರೇವಣ್ಣ ಬಾಯಲ್ಲಿ ಅನ್ನ ಮಡಗಿಕೊಂಡೇ ಹೇಳಿದನಂತಲ್ಲಾ, ಆಗ ಕಿರುಗಣ್ಣಿನಿಂದಲೇ ಮಗನನ್ನು ನೋಡಿದ ಗೌಡರು "ಆ ವಿಷಯವನ್ನು ನೀನು ಸದನದಲ್ಲೇ ಪ್ರಸ್ತಾಪ ಮಾಡಿ ಬೆಲೆ ಕಡಿಮೆ ಮಾಡಿಸು" ಎಂದರಂತಲ್ಲಾ.

ಅದಕ್ಕೆ ರೇವಣ್ಣ "ನನಿಗೆ ಸದನದಲ್ಲಿ ಸರಿಯಾಗಿ ಮಾತಾಡಕ್ಕೆ ಬರದಿಲ್ಲ ಕಣಪ್ಪ. ಅಂಗೆ ಪೋನು ಮಾಡಿ ನೀನೇ ಹೇಳು" ಎಂದನಂತಲ್ಲಾ, ಅದಕ್ಕೆ ಗೌಡರು "ನೋಡು ರೇವಣ್ಣ, ಹತ್ತೊಂಭತ್ತು ನೂರ ಅರವತ್ತು ನಾಲ್ಕನೇ ಇಸವಿಯಲ್ಲಿ ನಾನು ವಿಧಾನಸೌಧಕ್ಕೆ ಆರಿಸಿ ಹೋದಾಗ, ನಿನ್ನ ತರಾನೇ ಇದ್ದೆ. ಆದ್ರೆ ನಂತರ ಎಲ್ಲವನ್ನು ತಿಳಕೊಂಡೆ. ನಾವು ಮಾತನಾಡೋ ವೈಖರಿಗೆ ಜನ ನಗತರೆ ಅಂತ ಸುಮ್ಮನಿರಬಾರದು. ನಾನು ಜನಗಳು ನಗ್ತರೆ, ಆಡಿಕೊಳ್ತರೆ, ಬೈತರೆ ಅಂತ ಅಂಜಿಕೊಂಡು ಸುಮ್ಮನಿದ್ರೆ, ನಿಮ್ಮನ್ನು ಈ ಮಟ್ಟಕ್ಕೆ ಬೆಳೆಸೋದಿಕ್ಕಾಗುತಿತ್ತಾ? ಆದ್ದರಿಂದ ನೀನು ಸದನದಲ್ಲೇ ಮಜ್ಜಿಗೆ ಪ್ರಸ್ತಾಪ ಮಾಡು. ವಿರೋಧಿಗಳ ಬಾಯಿ ಮುಚ್ಚುತ್ತೆ. ಮಜ್ಜಿಗೆ ಕುಡಿಯೋರೆಲ್ಲಾ ನಿನ್ನನ್ನು ನೆನೆಸಿಕೊಳ್ತಾರೆ" ಎಂದು ಉಪದೇಶ ನೀಡಿದರಂತಲ್ಲಾ, ಗೌಡರು ಹೇಳಿದ ಬುದ್ಧಿ ಮಾತನ್ನು ಉರುಹೊಡೆದು ಕೊಂಡು ಬಂದ ರೇವಣ್ಣ ಕಡೆಗೂ ವಿಧಾನಸೌಧದಲ್ಲಿ ಹೋರಾಡಿ ಮಜ್ಜಿಗೆ ರೇಟನ್ನು ಹುಳಿ ಮಜ್ಜಿಗೆ ರೇಟಿಗೆ ಇಳಿಸಿದನಂತಲ್ಲಾ, ಥೂತ್ತೇರಿ!!


* * * * * * * * * * * *

ನೋಡು ನೋಡುತ್ತಿದ್ದಂತೆ ದೇವೇಗೌಡರು ಮಾಡಿದ ರಾಜಕಾರಣದಿಂದ ಸ್ಫೂರ್ತಿಗೊಂಡ ಸಮಾಜವಾದಿ ಬಂಗಾರಪ್ಪ, ಹುಬ್ಬಳ್ಳಿಯಲ್ಲಿ ಸಮಾವೇಶ ಕರೆದು ಉರಿಬಿಸಿಲಲ್ಲಿ ನಿಂತ ಜನರ ಬುರುಡೆ ಬಿಸಿಯಾಗುವಂತೆ ಭಾಷಣ ಚಚ್ಚಿದರಂತಲ್ಲಾ, ಸದ್ಯದ ಪರಿಸ್ಥಿತಿಯಲ್ಲಿ ಯಾರನ್ನು ವಿರೋಧಿಸಬೇಕು, ಏನನ್ನು ಮಾತಾಡಬೇಕೆಂದು ತೋಚದೆ ದಿಕ್ಕುತಪ್ಪಿದ ಬಂಗಾರಪ್ಪ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿಯನ್ನು ಉದ್ದೇಶಿಸಿ ಅದೊಂದು ಷಡ್ಯಂತ್ರದ ಗುಂಪು ಎಂಬ ಅನುಮಾನ ಬರುವಂತೆ ಮಾತನಾಡಿದರಂತಲ್ಲಾ, ಆಗ ಸಭೆ ಹಿಂದಿನಿಂದ ಯಾರೋ ತಮ್ಮದು "ಕುಮಾರ್ ಬಂಗಾರಿ, ಮಧು ಬಂಗಾರಿ ಎಂಬ ಬಂಗಾರಿಗಳ ಗುಂಪಂತೂ ಅಲ್ಲವೇ ಅಲ್ಲ ಸಾರ್" ಎಂದು ನಕ್ಕರಂತಲ್ಲಾ, "ಬಂ" ಹೀಗೆ ಬಂಬಡಾ ಬಜಾಯಿಸಿದ್ದನ್ನು ನಂಬಿ ಮಾರ್ಚ್ ಪತ್ರಿಕೆಗಳು ಶಾನೆ ಕೊಂಡಾಡುತ್ತಲೇ ವರದಿ ಮಾಡಿಕೊಂಡು ಕೃತಾರ್ಥವಾದವಂತಲ್ಲಾ, ಥೂತ್ತೇರಿ!!!

-ಯೊಣತೊ

ಭಾರತವು ಒಂದು ಜೀವಂತ ವಸ್ತು ಸಂಗ್ರಹಾಲಯ. ಇಲ್ಲಿ ಜೀವಂತ ಪುರಾವೆ ಇವೆ. -ಸ್ವೆಟೊಸ್ಲಾವ್ ರೋರಿಚ್

ದೀಪದ ಕೆಳಗೆ ಕತ್ತಲೆ ಎಂಬ ಮಾತಿನಂತೆ ಕರ್ನಾಟಕದ ಭ್ರಷ್ಟ ಅಧಿಕಾರಿಗಳ ಪಾಲಿಗೆ ಸಿಂಹಸ್ವಪ್ನದಂತಿರುವ ಕರ್ನಾಟಕ ಲೋಕಾಯುಕ್ತರ ಕಚೇರಿಯಲ್ಲೇ ಭ್ರಷ್ಟಾಚಾರ ನಡೆಯುತ್ತಿದೆ ಎಂದರೆ ಜನ ಯಾರನ್ನು ನಂಬಬೇಕು.



'ಲಂಕೇಶ್'ಗೆ ದೊರೆತ ಟೇಪ್ ಸಂಭಾಷಣೆ!

ಲೋಕಾಯುಕ್ತದಲ್ಲೇ

ಸ್ಕೂಪ್

ಭ್ರಷ್ಟ ಅಧಿಕಾರಿಗಳು

ಅಧಿಕಾರಿಗಳ ಭ್ರಷ್ಟಾಚಾರದಿಂದ ಹತಾಶರಾಗಿದ್ದ ಕರ್ನಾಟಕದ ಜನತೆಗೆ ಈಗಲೂ ವ್ಯವಸ್ಥೆಯ ಬಗ್ಗೆ ಚೂರುಪಾರು ಭರವಸೆ ಏನಾದರೂ ಉಳಿದಿದ್ದರೆ ಅದಕ್ಕೆ ಲೋಕಾಯುಕ್ತರೇ ಕಾರಣ.

ನ್ಯಾಯಮೂರ್ತಿ ವೆಂಕಟಾಚಲ ಮತ್ತವರ ತಂಡ ನಿತ್ಯ ನಡೆಸುತ್ತಿರುವ ರೇಡುಗಳು, ಭ್ರಷ್ಟ ಸರ್ಕಾರಿ ಅಧಿಕಾರಿಗಳಿಂದ ವಶಪಡಿಸಿಕೊಳ್ಳುತ್ತಿರುವ ಕೋಟ್ಯಂತರ ರೂಪಾಯಿ ಮೊತ್ತದ ಆಸ್ತಿಗಳೆಲ್ಲಾ ಜನರನ್ನು ದಂಗು ಬಡಿಸಿವೆ.

ಲೋಕಾಯುಕ್ತರ ಸಾಧನೆ, ವ್ಯವಸ್ಥೆಯನ್ನು ಶುದ್ಧೀಕರಿಸಬೇಕೆಂಬ ಅವರ ಕಾಳಜಿಗೆ ಎಲ್ಲೆಡೆ ಮೆಚ್ಚುಗೆ ಕೇಳಿ ಬರುತ್ತಿದೆ. ಆದರೆ ಇವತ್ತು ಇದೇ ಲೋಕಾಯುಕ್ತ ಕಚೇರಿಯಲ್ಲೇ ಡೀಲು ಕುದುರಿಸುವ, ಕೇಸು ಮುಚ್ಚಿ ಹಾಕಿ ಭ್ರಷ್ಟರನ್ನು ಪಾರು ಮಾಡುವ, ಬೆದರಿಸಿ ಹಣ ಕೇಳುವ ಕೆಲ ಭ್ರಷ್ಟ ಕಪ್ಪು ಕುರಿಗಳನ್ನು 'ಲಂಕೇಶ್' ತನಿಖೆ ಮಾಡಿ ಪತ್ತೆ ಮಾಡಿದೆ.

ಟೆಲಿಫೋನ್ ಸಂಭಾಷಣೆ, ದಾಖಲೆಗಳ ಸಮೇತ ಪತ್ತೆಯಾಗಿರುವ ಈ ತನಿಖಾ ವರದಿಯನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ವ್ಯವಸ್ಥೆಯನ್ನು ಶುದ್ಧೀಕರಿಸಿ ಭ್ರಷ್ಟಾಚಾರ ನಿರ್ಮೂಲನೆ ಮಾಡಬೇಕೆಂದಿರುವ ನ್ಯಾ. ವೆಂಕಟಾಚಲರ ಕೈ ಬಲಪಡಿಸುವ ಉದ್ದೇಶ ನಮ್ಮದು....

* * * * * * * * *

ಇಲ್ಲಿ ಯಥಾವತ್ತಾಗಿ ನಿರೂಪಿಸಲಾದ ಧ್ವನಿ ಮುದ್ರಿತ ಟೆಲಿಫೋನ್ ಸಂಭಾಷಣೆ ಕೇವಲ ಒಂದು ತಿಂಗಳ ಹಿಂದಷ್ಟೇ ಲೋಕಾಯುಕ್ತ ಕೇಂದ್ರ ಕಚೇರಿಯಿಂದ ಮತ್ತೆ ಪೋಲೀಸ್ ಇಲಾಖೆಯ ಸ್ವಸ್ಥಾನಕ್ಕೆ ವಾಪಾಸ್ ಕಳಿಸಲ್ಪಟ್ಟ ಡಿವೈಎಸ್‌ಪಿ ರಾಜಣ್ಣನವರ ಅಮೃತವಾಣಿಯನ್ನೊಳಗೊಂಡ ಅಪೂರ್ವ ಸ್ಕೂಪ್!

ಬೆಂಗಳೂರು ಮಹಾನಗರಪಾಲಿಕೆಯ ಕಂದಾಯ ವಿಭಾಗದ ಅಧಿಕಾರಿ ಮುನಿಯಪ್ಪ ಎಂಬುವರು ತಮಗೆ ಆಗಾಗ್ಗೆ ಭ್ರಷ್ಟಾಚಾರ ದೂರುಗಳ ಬೆದರಿಕೆಯೊಡ್ಡುತ್ತ ಕಿರುಕುಳ ನೀಡುತ್ತ ಬಂದಿದ್ದ ಡಿವೈಎಸ್‌ಪಿ ರಾಜಣ್ಣನವರನ್ನು ರೆಡ್ ಹ್ಯಾಂಡ್ ಆಗಿ ಟೆಲಿಫೋನ್ ಮಾತುಕತೆಯಲ್ಲಿ ಸೆರೆಹಿಡಿದು ಅತ್ಯಂತ ಜಾಗರೂಕತೆಯಿಂದ ಆಡಿಯೋ ಟೇಪ್ ರೆಕಾರ್ಡಿಂಗ್ ಮಾಡಿದ್ದಾರೆ. ಅವರು ಲೋಕಾಭಿರಾಮವಾಗಿ ಕುದುರಿಸುತ್ತ ಬಂದಿದ್ದ ಇಂತಹ ಡೀಲುಗಳನ್ನು ಹೀಗೆ ಅವರದ್ದೇ ಧ್ವನಿ, ದಾಟಿ ಹಾಗೂ ಶೈಲಿಯಲ್ಲಿ ಫಿಕ್ಸ್ ಮಾಡಿ ಖಚಿತ ಸಾಕ್ಷ್ಯಾಧಾರ ಒದಗಿಸಿದ್ದಾರೆ!

ಅಂದ ಹಾಗೆ ಇದೇ ರಾಜಣ್ಣ ಮಹಾಶಯರೇ ಇತ್ತೀಚೆಗೆ ರೇಡ್‌ಗೊಳಗಾಗಬೇಕಿದ್ದ ಪೋಲೀಸ್ ಇನ್ಸ್‌ಪೆಕ್ಟರ್‌ರೊಬ್ಬರಿಗೆ ಪಾರಾಗಲು ಮುನ್ಸೂಚನೆ ನೀಡಿದ್ದರೆಂಬ ಗುಮಾನಿಗೊಳಗಾಗಿ ಕಳೆದ ಮಾರ್ಚ್ ತಿಂಗಳಲ್ಲಷ್ಟೇ ಮಾತೃ ಇಲಾಖೆಗೆ ವರ್ಗಾಯಿಸಲ್ಪಟ್ಟಿದ್ದಾರೆ....

ಲೋಕಾಯುಕ್ತದ ಪೋಲೀಸ್ ಅಧಿಕಾರಿ ರಾಜಣ್ಣ ಹಾಗೂ ಬೆಂಗಳೂರು ಮಹಾನಗರ ಪಾಲಿಕೆಯ ನೌಕರ ಮುನಿಯಪ್ಪನವರ ನಡುವಿನ ಸಂಭಾಷಣೆಯಲ್ಲಿ ಆಪಾದಿತ ಮುನಿಯಪ್ಪನವರ ಆಸ್ತಿ ವಿವರ ಸಂಬಂಧಿ ದಾಖಲೆಗಳು ಲಭ್ಯವಿಲ್ಲದಿದ್ದರೂ ಅವರ ಬಾಯಿ ಮಾತಿನ ಹೇಳಿಕೆಗಳನ್ನೇ ಪುರಾವೆಯಾಗಿ ಪರಿಗಣಿಸಿ ಅವರ ವಿರುದ್ಧದ 'ಪ್ರೋಸೆಸ್' ಕ್ಲೋಸು ಮಾಡುವ ಒಪ್ಪಂದವಾಗುತ್ತದೆ.

ಈ ಕ್ಲೋಸು ಮಾಡುವ ವಹಿವಾಟಿನಲ್ಲಿ ಕಷ್ಟಪಟ್ಟು "ಹಾರ್ಡ್ ಡೋನೇಷನ್" ಸಿದ್ಧಪಡಿಸಿಕೊಂಡು ಬರುವ ಮುನಿಯಪ್ಪನವರಿಗೆ ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದ ಬಳಿಯಿರುವ ಸ್ವಿಮ್ಮಿಂಗ್ ಪೂಲ್‌ನ ಕಾರ್‌ಪಾರ್ಕ್ ಹತ್ತಿರ ಸಂಧಿಸುವ ರಾಜಣ್ಣ, ಆ 'ಡೋನೇಷನ್' ಹಣವನ್ನು ಇನ್ನೂ ಮೂವರಿಗೆ (ತಮ್ಮ ಸಹೋದ್ಯೋಗಿಗಳಿಗೆ!) ಹಂಚಬೇಕಾಗಿರುವ ತಮ್ಮ ಅಸಹಾಯಕತೆಗಾಗಿ ಪರಿತಪಿಸುತ್ತಾರೆ... ತಾವು ಲೋಕಾಯುಕ್ತದಲ್ಲಿ ಇರೋವರೆಗೂ (ಅವರ ಪ್ರಕಾರವೇ ಕನಿಷ್ಠ 2 ರಿಂದ 3 ವರ್ಷ!) ವರೀ ಮಾಡ್ಕೋಬೇಡಿ ಎಂಬ ಅಭಯವಚನ ನೀಡುತ್ತಾರೆ... "protect ಮಾಡ್ತೇನೆ" ಎಂಬ ಆಶ್ವಾಸನೆಯೂ ದೊರೆಯುತ್ತದೆ.

ಮತ್ತೆ ಮರಳಿದ ಕಾನ್‌ಸ್ಟೇಬಲ್ ಕೃಷ್ಣಪ್ರಸಾದ್

ರಾಜಣ್ಣ ಕೆಸೆಟ್ಟಿನಲ್ಲಿ ಮಹಾನಗರ ಪಾಲಿಕೆ ಅಧಿಕಾರಿ ಅತ್ಯಂತ ಆತಂಕದಿಂದ ಉಲ್ಲೇಖಿಸುವ ಹೆಸರು

ಡಿವೈಎಸ್‌ಪಿ ರಾಜಣ್ಣನ ಫೋನ್ ಡೀಲ್!

"ಹಲೋ"

"ನಾನು ಮುನಿಯಪ್ಪ ಸರ್"

"ನಮಸ್ಕಾರ ಹೇಳಿ ಇವರೇ"

"ನಿನ್ನೆ ಬರ್ತೀನೀಂತ ಹೇಳಿದ್ದೆ, ನಿನ್ನೆ ಬರಕಾಗಲಿಲ್ಲ... ಪೇಪರ್ರು... ಪರ್ಮಿಷನ್ ಲೆಟರ್ ಒಂದು ಸಿಗ್ತಾಯಿಲ್ಲ ನನ್ನ ಇದರಲ್ಲಿ"

"ಯಾವುದು ಹೇಳಿ"

"ಅದೇ ನಾನು ಈ ಮನೆ-ಕಟ್ಟೋಕ್ಕೆ ಪರ್ಮಿಷನ್ ತಗೊಂಡಿರೋದು... ಅದಕ್ಕೆ ಕಮಿಷನರ್ ಆಫಿಸಲ್ಲಿ ಆ ಫೈಲ್ ಹುಡುಕೋದಕ್ಕೆ ಹೇಳಿದೀನಿ, ಆ ಕೇಸ್ ವರ್ಕರ್‌ಗೆ... ಅದೇನಾದ್ರೂ ಇವತ್ತು ಸಿಕ್ಕರೆ..."

"ಆ ನಂಬರೆಲ್ಲ ಇದರಲ್ಲಿ ಹಾಕೀದೀರಾ? ನಿಮ್ಮ ಪರ್ಮಿಷನ್ ಲೆಟರ್ ನಂಬರ್ರು ನಿಮ್ಮ ಎಸಿಆರ್‌ನಲ್ಲಿ ಬರ್ದಿದ್ರೆ....?"

"ಇಲ್ಲ ಸಾರ್ ನಾನು ಎಸಿಆರ್‌ನಲ್ಲಿ ಬರ್ದಿಲ್ಲ ನಾನು"

"ಪರ್ಮಿಷನ್ ತಗೊಂಡಿದೀರಾ ಹೋಗಲಿ...?"

"ತಗೊಂಡಿದೀನಿ ಸಾರ್."

"ಹೌದಾ?"

"ಅದೇ ಸೈಟ್ ಪರ್ಚೆಸ್ ಮಾಡಕ್ಕೆ, ಸೇಲ್ ಮಾಡಕ್ಕೆ ಪರ್ಮಿಷನ್ ತಗಂಡಿದೀನಿ"

"ಹಾಂ ಹಾಂ ಹಾಂ"

"ಬಟ್ ಕನ್‌ಸ್ಟ್ರಕ್ಷನ್ನು ಸಿಗ್ತಾಯಿಲ್ಲ ಅದು....

"ಹೌದಾ?"

"ಅದೂ ತಗಂಡಿದೀನಿ"

"ಬಟ್ ನಿಮ್ಮ ಪರ್ಸನಲ್ ಸೆಕ್ಷನ್‌ನಲ್ಲಿ ಅದು ಸಿಗುತ್ತಾ?"

"ಅಲ್ಲಿ ನೋಡ್ತೀನಿ ಸರ್, ಕಮೀಷನರ್ ಆಫೀಸ್‌ನಲ್ಲಿ ಹಳೇ ಫೈಲು ಹುಡುಕೋಕೆ ಹೇಳಿದೀನಿ... ಆ ಕೇಸ್ ವರ್ಕರ್ ಇದಾರಲ್ಲವ ಅವರ್ಗೆ... ನಮ್ಮ ಆಫೀಸಲ್ಲಿ ಫೈಲುಗಳೆಲ್ಲಾ ಚೆಲ್ಲಾಪಿಲ್ಲಿ...."

"ಇಲ್ಲಾಂದ್ರೆ ಹೋಗ್ಲಿ... ಆ ಪಾಯಿಂಟ್‌ನ ನಾನು ಬಿಟ್ಟು ಬಿಡ್ತಿನಿ... ಈಗ ಇಷ್ಟು ಖರ್ಚಾಗಿದೇಂತ ಎಸಿಆರಲ್ಲಿ ತೋರ್‍ಸಿದೀರೀಂತ ನಾನು ರಿಪೋರ್ಟ್ ಮಾಡ್ಕೋತೀನಿ"

"ಆದ್ರೆ ಮೊನ್ನೆ ತಮಗೆ ತೋರ್‍ಸಿದ್ನಲ್ಲ ಸಾರ್ ಆ ಪೇಪರ್ಸ್ ಎಲ್ಲಾ ರೆಡಿಯಿದೆ. ಸಾಯಂಕಾಲ ತಂದು ಕೊಡ್ತೀನಿ ಸಾರ್"

"ಸಾಯಂಕಾಲಾನ?.... ಎಷ್ಟೊತ್ತಿಗೆ ಬರ್ತೀರಿ?"

"ತಾವು ಎಷ್ಟೊತ್ತಿಗೆ ಅಂತೀರೋ ಅಷ್ಟೊತ್ತಿಗೆ"

"ಸರಿ.... ಒಂದು ಸೆವನ್ ಥರ್ಟೀ... ಸೆವನ್ ಥರ್ಟೀಗೆ ಒಂಚೂರು ನನ್ನ ಮೊಬೈಲ್‌ಗೆ ಫೋನ್ ಮಾಡ್ಕಂಡು ಬನ್ನಿ..."

"ಸರಿ, ಹಾಗಾದ್ರೆ ವಿಹಾರ ಕೇಂದ್ರದ ಹತ್ರ ಬರ್ತಿನಿ ಸರ್... ವಿಹಾರ ಕೇಂದ್ರಕ್ಕೆ ಬಂದ್ಬಿಟ್ಟು ಒಂದು ಕಾಲುಗಂಟೆ ಮುಂಚೆ ತಮಗೆ ಫೋನ್ ಮಾಡ್ತೀನಿ ಸಾರ್"

"ನಾನು ಬರೋದು ಅಷ್ಟೊತ್ತಿಗೇನೆ... ಅದಕ್ಕೆ ಮುಂಚೆ ಬರಲ್ಲ... ನೀವು ಫೋನ್ ಮಾಡಿದ್ಮೇಲೇ ಮನೆ ಬಿಟ್ಟು ಬರ್ತೀನೀ ನಾನು...."

"ಆಮೇಲೆ ಆ ಅಮೌಂಟೂ ಇವತ್ತು ರೆಡಿಯಿದೆ ಸಾರ್.. ಮೊನ್ನೆ ರೆಡಿಯಾಗಿರ್ಲಿಲ್ಲ... ಇವತ್ತು ಸಾಯಂಕಾಲ ಪೂರ್ತಿ ತಂದುಕೊಡ್ತೀನಿ ಸಾರ್..."

"ಸರಿ... ಸರಿ"

"ಸರ್ ಆಮೇಲೆ ಆ ರಮೇಶ್ ಸಾಹೇಬ್ರುದು ಸ್ವಲ್ಪ ಏನಾದ್ರೂ ಮಾತಾಡ್ಬಿಟ್ಟು ಸರಿಮಾಡಿ ಸಾರ್... ಮತ್ತೆ ಅವರೇನಾದ್ರೂ... ಅಂದ್ಕೊಂಡುಬಿಟ್ರೆ...."

"ಇಲ್ಲ.. ಇಲ್ಲ.. ಅಯ್ಯೋ ಅವರ್‍ನಾ? ಆ ಜವಾಬ್ದಾರಿ ನನ್ಮೇಲೆ ಬಿಟ್ಬಿಡಿ... ನಾನು ಹೇಳಿದ್ಮೇಲೆ ಆಯ್ತು"

"ಸರಿ ಸಾರ್"

"ಏನೂ ವರೀ ಮಾಡ್ಕೋಬೇಡಿ"

"OK ಸಾರ್.... ನಮಸ್ಕಾರ"

-ಕಾಲ್ ಕಟ್-

* * * * * * *

-ರಿಂಗ್-ರಿಂಗ್-ರಿಂಗ್-

"ಹಲೋ"

"ಸಾರ್ ನಮಸ್ಕಾರ, ಮುನಿಯಪ್ಪ ಸಾರ್"

"ಓ ಹೇಳಿ ಮುನಿಯಪ್ನೋರೆ...."

"ಸಾರ್ ಎಷ್ಟೊತ್ತಿಗೆ ಬರ್ಲಿ ಸಾರ್?"

"ಈಗೆಲ್ಲಿದೀರಿ ನೀವು?"

"ನಾನು ಮನೆ ಹತ್ರ ಇದೀನಿ ಸಾರ್"

"ಬಿಟಿಎಂ ಲೇಔಟಾ?"

"ಹಾಂ, ಹೌದು ಸಾರ್....."

"ಆOS ಈ ಬಸವನಗುಡಿ ಕಡೆ ಬರಕ್ಕಾಗತ್ತಾ?"

"ಆಗ್ಲಿ ಸಾರ್"

"ನಿಮ್ಗೆ ಹತ್ರ ಆಗುತ್ತಲ್ಲ?"

"ಹೌದು ಸರ್. ಬನಶಂಕರಿಗಿಂತ ಹತ್ರಾನೆ ಸರ್"

"ಅಲ್ಲೀಗಿಂತ ಹತ್ರ ಅಲ್ಲವ"

"ಹೌದು ಸಾರ್"

"ಈ ನ್ಯಾಷನಲ್ ಕಾಲೇಜ್ ಇದೆಯೆಲ್ಲವಾ?"

"ಹೌದು ಸಾರ್"

"ನ್ಯಾಷನಲ್ ಕಾಲೇಜು ಗ್ರೌಂಡ್‌ನಲ್ಲಿ ಸ್ವಿಮ್ಮಿಂಗ್ ಪೂಲ್ ಇದೆ"

"ಹೌದು ಸಾರ್"

"ಸ್ವಿಮ್ಮಿಂಗ್ ಪೂಲ್ ಮುಂದೆ ಮೇನ್ ಗೇಟ್‌ಗೇ ಬನ್ನಿ"

"ಈವಾಗ್ಲೆ ಬರ್‍ಲಾ ಸಾರ್?"

"ಈಗ ಬಂದ್ಬಿಡಿ, ನಾನು ಆ ಕಡೆ ಹೋಗ್ತಾ ಇದೀನಿ... ನಾನು ಹಂಗೆ ಮಾತಾಡಿಸ್ಕೊಂಡು ಹಂಗೇ ಹೋಗ್ತೀನಿ..."

"ಸ್ವಿಮ್ಮಿಂಗ್ ಪೂಲ್‌ಗೆ ಬರ್ಬೇಕಾ ಸಾರ್?"

"ಅದೇ ಕಾರ್ಪೋರೇಷನ್ ಸ್ವಿಮ್ಮಿಂಗ್ ಪೂಲು... ಆದರ ಮುಂದ್ಗಡೆ ಕಾರ್ ಪಾರ್ಕಿಂಗ್ ಇದೆಯೆಲ್ಲವ.... ಅಲ್ಲಿರ್ತೀನಿ"

"ಸರೀ ಸಾರ್... ಆಮ್ಯಾಲೆ ಒಂದು ವಿಚಾರ ಹೇಳ್ಬೇಕಿದೆ"

"ಹೇಳಿ, ಹೇಳಿ"

"ಟೂ ಈಯರ್ಸ್ ಬ್ಯಾಕ್ ಹಿಂದೇನೆ ಆ ಕೃಷ್ಣಪ್ರಸಾದು ಯಾವುದೋ ಒಂದು ಕಂಪ್ಲೆಂಟ್ ಇದೆಯಂತ ಹೇಳ್ಬಿಟ್ಟು, ಪ್ರಿಲಿಮಿನರಿ ಇದು ಮಾಡ್ಬಿಟು (FIR)? 'ಅವರು' ಮತ್ತು ಇವರಿಬ್ರೂನೂ ಒಂದು ಫಿಫ್ಟಿ ಕೇಳಿದ್ರು, ನಾನು ಒಂದು ಇಪ್ಪತ್ತೈದು 'ಇದು' ಮಾಡ್ದೆ... ಮತ್ತೆ ಈಗ ಆರು ತಿಂಗಳ ಹಿಂದೆ ಕೃಷ್ಣಪ್ರಸಾದು ಮತ್ತೊಂದು ಕಂಪ್ಲೇಂಟ್ ಐತೆ ಅಂತ ನನಗೆ ಫೋನ್ ಮಾಡಿದ್ರು..."

"ಯಾವಾಗss?"

ರೇಡ್ ಮಾಡಿಸಿಕೊಂಡೂ ಸುಖವಾಗಿರುವ ಸೂಪರಿಂಟೆಂಡೆಂಟ್ ನಾಗರತ್ನಯ್ಯ

ದಿ. 6.4.2000 ಅಂದರೆ ಸುಮಾರು 6 ವರ್ಷಗಳಷ್ಟು ಹಿಂದೆಯೇ ಅಂದು ಚಿತ್ರದುರ್ಗದ ಲೋಕಾಯುಕ್ತ [illegible]ಯ ಪ್ರಥಮ ದರ್ಜೆ ಗುಮಾಸ್ತನಾಗಿದ್ದುಕೊಂಡೇ ಲೋಕಾಯುಕ್ತರಿಂದಲೇ ದಾಳಿಗೊಳಗಾದ ಚರಿತ್ರಾರ್ಹ [illegible]ಳಿ ವಿ.ಎನ್. ನಾಗರತ್ನಯ್ಯ ಎಂಬ ನೌಕರರದ್ದು!!

ಕೇಸ್ ನಂಬರ್ 15, 6/2000 ರಲ್ಲಿ ಅಂದಿನ ತುಮಕೂರು ಪೋಲೀಸ್ ಇನ್ಸ್‌ಪೆಕ್ಟರ್ ಎನ್. [illegible]ನ್‌ಕುಮಾರ್‌ರಿಂದ ರೇಡ್ ಮಾಡಿಸಿಕೊಂಡಿದ್ದ ನಾಗರತ್ನಯ್ಯನವರ ಹಾಲಿ ಸ್ಥಾನಮಾನವೇನು ಗೊತ್ತಾ? [illegible]ದೀಗ ಲೋಕಾಯುಕ್ತಾ ಕೇಂದ್ರ ಕಚೇರಿಯಲ್ಲಿಯೇ ಆಫೀಸ್ ಸೂಪರಿಂಟೆಂಡೆಂಟ್ ಹುದ್ದೆಗೆ ಬಡ್ತಿ ಪಡೆದು [illegible] ಲೋಕಾಯುಕ್ತರ ಆಡಳಿತ ಸಿಬ್ಬಂದಿಯ ಮೇಲೆ ಸವಾರಿ ಮಾಡುತ್ತಿದ್ದಾರೆ!

ನಾಗರತ್ನಯ್ಯನವರ ವಿರುದ್ಧ ದಾಖಲಿಸಲ್ಪಟ್ಟ ಸೆಕ್ಷನ್ 13(1) (ಇ) ಆರ್/ಡಬ್ಲ್ಯೂ 13(2) ಆಫ್ ಪಿಸಿ ಆಕ್ಟ್ [illegible]ವರೆ ರೇಡ್ ಕೇಸ್‌ನ ಹಾಲಿ ಸ್ಥಿತಿಗತಿ ಏನಾಗಿದೆ ಗೊತ್ತೆ? ಮೊನ್ನೆಯಷ್ಟೇ ಅಂದರೆ ಮಾರ್ಚ್ 31, 2006 [illegible]ಮ ಸಲ್ಲಿಸಲಾದ ಬಾಕಿಯುಳಿದ ಪ್ರಕರಣಗಳ ವರದಿ ಪ್ರಕಾರವೇ ಆ ಕೇಸಿನ ತನಿಖೆಯ ಮಧ್ಯಕಾಲೀನ [illegible]ದಿ ಪರಿಶೀಲನೆಯಲ್ಲಿದೆ.... ಮೋಟಾರು ವಾಹನ ಇಲಾಖೆಯ ವಿವರಗಳನ್ನು ಕಾಯಲಾಗುತ್ತಿದೆಯಂತೆ....

ಅದು ಹೇಗೆ ಲೋಕಾಯುಕ್ತರ ಕಣ್ಣುತಪ್ಪಿಸಿ ಹೀಗೆ ಸ್ವಯಂ ಆಪಾದಿತರಾದ ನೌಕರರೇ ಅದೇ ಇಲಾಖೆಯಲ್ಲಿ [illegible]ಬಡ್ತಿ, ಇಂಕ್ರೀಮೆಂಟ್ ಪಡೆದು ಆಧೀಕ್ಷಕ ಹುದ್ದೆಯಲ್ಲಿ ಮಿಂಚುವುದು ಸಾಧ್ಯವಾಗಿರಬಹುದು ನೋಡಿ?!

Pending Crime Cases of Tumkur at the end of 3/2006.

Sec.13 (1) (e) R/w 13(2) of PC Act. (RAID CASE)

Crime-No Regd.date IO/Pol.Stn	Ago-Name & Address	Previous Prgs.	Present Prgs.
[illegible]00 [illegible]-No 15 [illegible]4-2000 [illegible]veen Kumar, PI [illegible]	V.N.Nagarathnaiah, FDA Karnataka Lokayukta, Chitradurga.	Interim report is under scrutiny with SP-3 Particulars from various deptt & institutions are awaited.	Particulars from Motor vehicles dept. are awaited.

ನಾಗರತ್ನಯ್ಯನ ಮೇಲಿನ ರೇಡ್ ಕೇಸ್

[illegible]ಲೀಸ್ ಕಾನ್ಸ್‌ಟೇಬಲ್ ಕೃಷ್ಣಪ್ರಸಾದ್‌ರದ್ದು. ಈತ [illegible] ತಿಂಗಳಿಗೊಮ್ಮೆ, ಮೂರು ತಿಂಗಳಿಗೊಮ್ಮೆ [illegible]ಕೆಯ ಅಧಿಕಾರಿ ಮುನಿಯಪ್ಪನವರಿಗೆ "ನಿಮ್ಮ [illegible] ಕಂಪ್ಲೇಂಟ್ ಇದೆ" ಎಂದು ಬೆದರಿಸುವ ಹವ್ಯಾಸ [illegible]ಸಿಕೊಂಡಿರುವ ಧೀರ!

ಈ ಕಾನ್ಸ್‌ಟೇಬಲ್ ಕೃಷ್ಣಪ್ರಸಾದ್‌ರನ್ನು ಅವರ [illegible]ನ ಗುಮಾನಿಯ ಕಾರಣದಿಂದಲೇ ಹಿಂದೊಮ್ಮೆ [illegible]ಯಿಸಲಾಗಿತ್ತು..... ಆದರೆ ಅಲ್ಪಾವಧಿಯಲ್ಲೇ [illegible]ನ್ನು ಮತ್ತೆ ಲೋಕಾಯುಕ್ತ ಕೇಂದ್ರ ಕಚೇರಿಗೇ [illegible] ಕರೆಸಿಕೊಳ್ಳಲಾಯಿತು..!

ಈ ಕೆಸೆಟ್ಟಿನ ಸಂಭಾಷಣೆಯ ಪ್ರಕಾರವೇ ಈ [illegible]ದ್ ಲೋಕಾಯುಕ್ತರ ಭ್ರಷ್ಟಾಚಾರ ನಿಷೇಧ [illegible]ದಲ್ಲಿ ಮೀರ್ ಸಾದಿಕ್ ಪಾತ್ರ ನಿರ್ವಹಿಸುತ್ತಿರುವ ಪ್ರಚಂಡ ಆಸಾಮಿ....

ಹಾಗೆಯೇ ರಾಜಣ್ಣವರೊಂದಿಗಿನ ದೂರವಾಣಿ ಸಂಭಾಷಣೆಯಲ್ಲಿ ಅಧಿಕಾರಿ ಮುನಿಯಪ್ಪ "ರಮೇಶ್ ಸಾಹೇಬ್ರು ಏನು ಅಂದ್ಕೋತಾರೋ" ಎಂಬ ಆತಂಕ ಪ್ರಕಟಿಸುತ್ತಾರೆ... "ಅವರ್ನ ನಾನಿದ್ದೀನಲ್ಲ ನೋಡ್ಕೋತೀನಿ ಬಿಡಿ" ಎಂದು ಭರವಸೆ ನೀಡುತ್ತಾರೆ ಡಿವೈಎಸ್‌ಪಿ ರಾಜಣ್ಣ....

ಸದರಿ "ರಮೇಶ್ ಸಾಹೇಬ್ರು" ಲೋಕಾಯುಕ್ತ ಜಸ್ಟೀಸ್ ವೆಂಕಟಾಚಲರವರ ಸುಪ್ರಸಿದ್ಧ ದಾಳಿಗಳಲ್ಲೆಲ್ಲ ಅವರ ಬಲಗೈಯಾಗಿ ತನಿಖೆಯಲ್ಲಿ ತೊಡಗಿಸಿಕೊಳ್ಳುವ (ಟಿವಿಯಲ್ಲಿ ಕಾಣಿಸಿಕೊಳ್ಳುವ!) ಎಸ್.ಪಿ. ರಮೇಶ್ ರವರಾ? ಅಥವಾ ಅದೇ ಹೆಸರಿನ ಇನ್ನಾರಾದರೂ ಅಧಿಕಾರಿ ಆಗಿರಬಹುದಾ?

-ಥರ್ಡ್ ಐ

"ಆರು ತಿಂಗಳ ಹಿಂದೆ"

"ಸರಿ"

"ಆಮ್ಯಾಲೆ ತಿರುಗಿ ಇನ್ನೊಂದ್ಸಲ, ಈಗ ಮೂರು [illegible] ಹಿಂದೆ ನಿಮ್ಮ ಆಫೀಸಲ್ಲಿ ಸಿಕ್ಕಿದಾಗ ತಿರುಗಿ [illegible] ಹೇಳಿದ್ರು... ಬನ್ನಿ ಮಾತಾಡೋಣ ಅಂತ [illegible].... ನನಗೆ ಅವರು ಈ ರೀತಿ ಒಂದೆರಡು [illegible]ರು ಸಲ.... ಈ ಕಂಪ್ಲೇಂಟು ಅವರಿಗೆ ಸಂಬಂ[illegible]... ಹೀಗೆ ಎರಡು ಮೂರ ಸಲ ಕೃಷ್ಣಪ್ರಸಾದು ಹೆದರಿಸ್ಕಂಡುss...."

"ನೋಡಿ... ನಾನು ಹೇಳಿದ್ನಲ್ಲವ... ಈಗ ಟೂ-ಥ್ರೀ [illegible]ರ್ಸ ನಾನು ಇರ್‍ತೀನಿ. ಅಲ್ಲಿ ನನ್ನ ಫೋನ್ ನಂಬರ್ರು, [illegible] ನಂಬರ್ರು, ಮೊಬೈಲ್ ನಂಬರ್ರು ಇದೆಯಲ್ಲವ?"

"ಇದೆ ಸಾರ್"

"ಏನನಾ ಆ ತರ ಬಂದ್ರೆ ನಾನು ಪ್ರೊಟೆಕ್ಟ್ [illegible]ತೀನಿ"

"ಸರಿ ಸರ್..."

"ನಾನು ಇರೋ ತನಕಾ ನೀವೇನೂ ಅದರ ಬಗ್ಗೆ [illegible] ಮಾಡ್ಬೇಡಿ"

"ಸರಿ ಸರ್"

"ಆಯ್ತು"

"ಆಮ್ಯಾಲೆ ಈ 'ಹಾರ್ಡ್ ದೊಡೇಷನ್ನು' ಬಾಳಾ [illegible] ಪಟ್ಟು ಇದು ಮಾಡಿ ಕೊಡ್ತಾ ಇದೀನಿ"

[illegible] ಬಿಡಿ... ನಾನು ಇಷ್ಟು ಮೂರು ಮೂರು [illegible] ಮಾಡಬೇಕಿದೆ..."

[illegible]

ಬಂದ್ಬಿಡಿ....

-ಕಾಲ್ ಕಟ್-

* * * * *

-ರಿಂಗ್-ರಿಂಗ್-ರಿಂಗ್-ರಿಂಗ್

"ಹಲೋ (ಹೆಣ್ಣು ದನಿ)"

"ಹಲೋ ರಾಜಣ್ಣನವರಿದಾರಾ?"

"ನೀವು ಯಾರು?"

ಡಿಸ್‌ಕನೆಕ್ಟ್.....

ಮತ್ತೆ-ರಿಂಗ್-ರಿಂಗ್-ರಿಂಗ್.....

"ಹಲೋ" (ಗಂಡು ದನಿ)

"ಸರ್ ನಮಸ್ಕಾರ...ನಾನು ಮುನಿಯಪ್ಪ ಸಾರ್"

"ಹಾಂ ಹೇಳಿ"

"ಸರ್ ನನ್ನ ಪ್ರೊಸೆಸ್ಸು ಕ್ಲೋಸ್ ಆಯ್ತಾ ಸಾರ್?"

"ಹೋ ಆಯ್ತು ರೆಡಿ ಮಾಡಿದೀನಿ... ಇವತ್ತು ಶನಿವಾರ ಅಲ್ಲವಾ ನಾಳೆ ಬರ್‍ದು ಬಿಟ್ಟು ಕ್ಲೋಸ್ ಮಾಡಿಬಿಡ್ತೀನಿ"

"ಸಾರ್ ಎಸ್‌ಪಿ ರಾಜಣ್ಣವರ್‍ದು ಕ್ಲೋಸ್ ಆಯ್ತಾ ಸಾರ್?"

"ಯಾರು?"

"ಆ ಇವರ್‍ದು ಪ್ರಾಸೇಶ್ ಅವರ್‍ದು?"

"ಈಗ ಅವರೊಬ್ಬರದ್ದೇ ಅಲ್ಲ ನಾಲ್ಕೈದು ಜನದ್ದು ಇರೋದು... ಎಲ್ಲಾ ಮಾಡ್ತೀನಿ.... ನಾನಿದ್ದೀನಿಲ್ಲಿ ಮೇಲ್ಗಡೆಯೆಲ್ಲ ಮಾತಾಡಿದ್ದಾಗಿದೆ... ಸೋಮವಾರ ಎಲ್ಲ ಕೊಟ್ಟುಬಿಡ್ತೀವಿ"

"ಆಯ್ತು ಸಾರ್... ಬೇರೆ ಯಾರಾದ್ರೂ ಇದ್ರೆ?"

"ಅಂದ್ರೆ?"

"ನಮ್ಮ ಡಿಪಾರ್ಟ್‌ಮೆಂಟ್ ಆಫೀಸರ್‍ದು ಯಾರ್‍ದಾದ್ರೂ ಪ್ರಾಬ್ಲಮ್ಸ್ ಇದ್ದಾಗ ದಯವಿಟ್ಟು ನನಗೆ [illegible]"

"ಆಯ್ತು ಆಯ್ತು ಫೋನ್ ನಂಬರ್ [illegible]"

ಭೂಮಿ-ಸಮರ


ಕೃಷ್ಣಪ್ಪ V/s ನಾರಾಯಣಗೌಡ

ಲೋಕಾಯುಕ್ತ ಜಸ್ಟೀಸ್ ವೆಂಕಟಾಚಲರವರ ಅಧಿಕಾರಾವಧಿಯ ಅತ್ಯಂತ ರೋಮಾಂಚಕಾರಿ ರೇಡ್‌ಗಳಲ್ಲೊಂದಾದ ಇತ್ತೀಚಿನ ಐವರು ಪೋಲೀಸ್ ಅಧಿಕಾರಿಗಳ ಮೇಲಿನ ದಾಳಿಯ ಹೀರೋ-ದೊಡ್ಡಬಳ್ಳಾಪುರದ ಡಿವೈಎಸ್‌ಪಿ ಕೃಷ್ಣಪ್ಪನವರ ಸುತ್ತ ಹೆಣೆದುಕೊಂಡಿರುವ ಉಪಕತೆಯೊಂದು ಮೂಲಕತೆಯಷ್ಟೇ ಕುತೂಹಲದಾಯಕವಾಗಿದೆ....


ಇದೀಗ ಲೋಕಾಯುಕ್ತರ ಬಲೆಗೆ ಬಿದ್ದು ಬೇಲ್ ಪಡೆದುಕೊಂಡಿರುವ ಕೃಷ್ಣಪ್ಪನಿಗೂ ಹಾಗೂ ಬೆಂಗಳೂರು ಮಹಾನಗರದ ಜಾಯಿಂಟ್ ಪೋಲೀಸ್ ಕಮಿಷನರ್ ಐಪಿಎಸ್ ನಾರಾಯಣಗೌಡರಿಗೂ ಬೆಂಗಳೂರು ನಾರ್ತ್ ತಾಲ್ಲೂಕಿನ ಕೋಗಿಲು ಗ್ರಾಮದ ಸರ್ವೆ ನಂ. 53 ರ 8 ಎಕರೆ 6 ಗುಂಟೆ ಪರಿವರ್ತಿತ ಜಮೀನಿನಲ್ಲಿ ಸಮಾನ ಹಿತಾಸಕ್ತಿ ಇದ್ದದ್ದೇ ಕೃಷ್ಣಪ್ಪನ ಶ್ರೀಮಂತ ಬದುಕಿನ ಅಕಾಲಿಕ ಅಂತ್ಯಕ್ಕೆ ಕಾರಣವಾಯಿತೆ?

ಸುಮಾರು 15 ರಿಂದ 20 ಕೋಟಿ ರೂಪಾಯಿನಷ್ಟು ಮಾರುಕಟ್ಟೆ ಬೆಲೆಯ ಈ ಅಮೂಲ್ಯ ಆಸ್ತಿಗಾಗಿ KSPS ಅಧಿಕಾರಿ ಕೃಷ್ಣಪ್ಪ ಹಾಗೂ IPS ಅಧಿಕಾರಿ ನಾರಾಯಣಗೌಡರ ನಡುವೆ ಜಟಾಪಟ ನಡೆದಿತ್ತೆಂದು ಅನುಮಾನಿಸಲು ಲೋಕಾಯುಕ್ತದ ದಾಖಲೆಗಳಲ್ಲಿನ ಸ್ವಾರಸ್ಯಕರ ಅಂಶಗಳೇ ಆಧಾರವಾಗಿವೆ.

ದಿ. 20 ಆಗಸ್ಟ್ 2005 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಎಸ್.ಪಿ. ಯವರಿಗೆ ಸಲ್ಲಿಸಲ್ಪಟ್ಟ ಮನವಿ ಪತ್ರದಲ್ಲಿ ಸಂಪಂಗಿರಾಮನಗರ ನಿವಾಸಿ ಕೆ. ವೇದಾಚಲಂ ಎಂಬುವವರು ಸದರಿ ಆಸ್ತಿಯನ್ನು ತಾನೇ 29.8.1996 ರಷ್ಟು ಹಿಂದೆಯೇ ಖರೀದಿಸಿದ್ದೇನೆ ಎಂದೂ, ಆದರ ಕಬ್ಜಾ ಪಡೆಯುವಲ್ಲಿ ಹಿಮಾಚಲಪತಿ ಹಾಗೂ ರಂಗಸ್ವಾಮಿ ಎಂಬುವವರು ಗೂಂಡಾಗಿರಿ ಮೂಲಕ ಅಡ್ಡಿಯಾಗುತ್ತಿದ್ದಾರೆಂದು ಆರೋಪಿಸಿದ್ದರು!



[illegible] ಕೋಗಿಲು [illegible] ಪ್ರಕರಣವನ್ನು [illegible] ವರ್ಗಾಯಿಸುವಂತೆ ಆದೇಶಿಸಿರುತ್ತಾರೆ.



Dated August 20, 2005

To,

The Superintendent of Police,
Bangalore Rural District,
Bangalore.

005464

Sub: complaint of abuse of authority & illegal activities.

I wish to bring it to your kind notice that the property bearing Survey No.53 of Kogilu Village, Bangalore North Taluk, admeasuring 8 acres and 6 guntas, originally belonged to M/s.IVY Traders India Pvt. Ltd. as the above property was offered for sale, with a bona fide intention of purchasing the same, on 29-08-1996 I have entered in to an Agreement of Sale with the above owner of the property. Under this agreement, the physical possession of the property was handed over to me

Ref by Narayan Gowda IPS

'ನಾರಾಯಣಗೌಡರ ಶಿಫಾರಸ್ಸು' ಎಂದು ದಾಖಲಿಸಲಾಗಿರುವ ಪತ್ರದ ಕಾಪಿ

ಸದರಿ ಆಸ್ತಿ ವಿವಾದದ ಪ್ರಕರಣದಲ್ಲಿ ದೊಡ್ಡಬಳ್ಳಾಪುರದ ಡಿವೈಎಸ್‌ಪಿ ಕೃಷ್ಣಪ್ಪ ತನ್ನ ವಿರುದ್ಧ ಪಕ್ಷಪಾತ ತೋರುತ್ತಿರುವುದರಿಂದ ಅದರ ವಿಚಾರಣೆಯನ್ನು ದೊಡ್ಡಬಳ್ಳಾಪುರದ ಚಿಕ್ಕಜಾಲ ಪೋಲೀಸ್ ಠಾಣೆ ವ್ಯಾಪ್ತಿಯಿಂದ ಬೇರೆ ಯಾವುದಾದರೂ ಠಾಣೆಗೆ ವರ್ಗಾಯಿಸುವಂತೆಯೂ ಕೋರಿರುತ್ತಾರೆ ಈ ವೇದಾಚಲಂ....

ವೇದಾಚಲಂರಿಂದ ಸ್ವೀಕರಿಸಲಾದ ಮನವಿ ಪತ್ರದ ಮೇಲ್ಭಾಗದ ಬಲತುದಿಯಲ್ಲಿ ಬೆಂಗಳೂರು ಜಿಲ್ಲಾ ಎಸ್ಪಿ ಕೆ. ಶ್ರೀನಿವಾಸ್ ಎಂಬ IPS ಅಧಿಕಾರಿ ತಮ್ಮ ಸ್ವಹಸ್ತಾಕ್ಷರದಲ್ಲಿಯೇ "ನಾರಾಯಣ ಗೌಡ IPS ರವರಿಂದ ರೆಫರ್ ಮಾಡಲ್ಪಟ್ಟದ್ದು" ಎಂದು ಗುರುತು ಮಾಡಿರುತ್ತಾರೆ.

[illegible]

ಪೋಲೀಸ್ ಡಿಜಿಪಿಯವರು ಕೂಡಲೇ ಸ್ಪಂದಿಸಿ 31.8.2005 ರಂದೇ ಕೋಗಿಲು ಗ್ರಾಮದ ಜಮೀನು ಪ್ರಕರಣವನ್ನು ಯಲಹಂಕ ಠಾಣೆಗೆ ವರ್ಗಾಯಿಸುವ ಆಜ್ಞೆ ಹೊರಡಿಸುತ್ತಾರೆ...

ಮುಂದೆ 12.1.2006 ಕ್ಕೆ ಕೋಗಿಲು ಆಸ್ತಿ ಪ್ರಕರಣದ ವರ್ಗಾವಣೆಯ ಆದೇಶವನ್ನು ಜಿಲ್ಲಾ ಎಸ್‌ಪಿಯವರು ಅನುಷ್ಠಾನಗೊಳಿಸುತ್ತಾರೆ....

ಅಂದರೆ ಕೋಗಿಲು ಗ್ರಾಮದ ಅಮೂಲ್ಯ ಆಸ್ತಿ ಕಬ್ಜಾ ಪ್ರಕರಣ ಸಸ್ಪೆಂಡ್ ಖ್ಯಾತಿಯ ಡಿವೈಎಸ್‌ಪಿ ಕೃಷ್ಣಪ್ಪನವರ ಚಿಕ್ಕಜಾಲ ಠಾಣೆ ವ್ಯಾಪ್ತಿಯಿಂದ ಜಾಯಿಂಟ್ ಕಮಿಷನರ್ ನಾರಾಯಣಗೌಡರ ಕಾರ್ಯವ್ಯಾಪ್ತಿಗೆ ತೀರ ಸಮೀಪವಿರುವ ಯಲಹಂಕ ಠಾಣೆಗೆ ವರ್ಗಾ ಆಗಿಬಿಟ್ಟಿತು....

ಸ್ವತಃ ಮುಖ್ಯಮಂತ್ರಿ ಕುಮಾರಸ್ವಾಮಿಯೇ "ಪೋಲೀಸ್ ಠಾಣೆಗಳು ರಿಯಲ್ ಎಸ್ಟೇಟ್ ಏಜೆನ್ಸಿಗಳಾಗಿಬಿಟ್ಟಿವೆ" ಎಂದು ತಮ್ಮ ಉದ್ಘಾಟನಾ ಹೇಳಿಕೆಯಲ್ಲಿಯೇ ರಾಗವೆಳೆದಾಗ ಸಾರ್ವಜನಿಕರ ಅನುಮಾನದ ಸೂಜಿಗಲ್ಲು ತಿರುಗಿದ್ದೆ ಜಾಯಿಂಟ್ ಕಮೀಷನರ್ ನಾರಾಯಣಗೌಡರು ಮತ್ತವರ ಮಿತ್ರ ಮಂಡಳಿಯತ್ತ ಎಂಬುದನ್ನಿಲ್ಲಿ ನೆನಪಿಸಬಹುದು.

ಭ್ರಷ್ಟ ಅಧಿಕಾರಿಗಳಿಗೆ ಸಿಂಹಸ್ವಪ್ನರೆನಿಸಿ ಇದೀ ರಾಷ್ಟ್ರದಲ್ಲೇ ಅಪ್ರತಿಮವೆನ್ನಬಹುದಾದ ಕಾರ್ಯಾಚರಣೆ ನಡೆಸುತ್ತ ಬಂದ ನ್ಯಾ. ವೆಂಕಟಾಚಲರವರ ದಿಟ್ಟ ಸಂಕಲ್ಪ, ನೈತಿಕ ಕೆಚ್ಚು ಹಾಗೂ ಅಗಾಧ ಜನಪ್ರಿಯತೆಯ ಅಸ್ತಿಭಾರವನ್ನೇ ಅಲ್ಲಾಡಿಸಬಲ್ಲಂತಹ ಹಲವು ಕಪ್ಪು ಕುರಿಗಳು ಅದು ಹೇಗೆ ಅವರ ಕಟ್ಟೆಚ್ಚರದ ಭದ್ರಕೋಟೆಯನ್ನೇ ಭೇದಿಸಿ ಲೋಕಾಯುಕ್ತದೊಳಕ್ಕೆ ನುಸುಳಿವೆ ಎಂಬುದನ್ನು [illegible]

[illegible]

ಜಾತಿ ಶಿಕಾರಿ-ನಾನಾ ದಾರಿ

(4 ನೇ ಪುಟದಿಂದ)

ಈಗ ಕಲ್ಗುಡಿಯವರ ಸರದಿ ಬಂದಿದೆ ಎಂದು ಕಾಣುತ್ತವೆ!


ಉಪ ಕುಲಪತಿ ಹುದ್ದೆಯ ಲಾಬಿ

ಇದೇ ಪ್ರಕರಣದಲ್ಲಿ ಡಾ. ಎಸ್. ಚಂದ್ರಶೇಖರ್ ರವರ ಹೆಸರು ಸೇರಿಸಿರುವುದರ ಉದ್ದೇಶ ಅರ್ಥ ಮಾಡಿಕೊಳ್ಳಲು ಯಾರೇನು ಹೆಚ್ಚು ಸರ್ಕಸ್ ಮಾಡ ಬೇಕಿಲ್ಲ. ಚಂದ್ರಶೇಖರ್ ದಲಿತ ವಿರೋಧಿ ಎಂದು ಬಿಂಬಿಸಿ, ಅಪಪ್ರಚಾರ ಮಾಡಿ ಅವರ ಉಪಕುಲಪತಿ ಹುದ್ದೆಯ ಅಭ್ಯರ್ಥಿತನಕ್ಕೆ ಧಕ್ಕೆ ತರುವ ದುರುದ್ದೇಶ ಅದು. ಇದರ ಹಿಂದೆ ಯಾರಿರಬಹುದೆಂಬ ಬಗ್ಗೆ ನೂರೆಂಟು ತರ್ಕಗಳಿವೆ. ಆದರೆ ವಿವಿಯ ವಿದ್ಯಾರ್ಥಿಗಳ ಸಂಶೋಧನಾ ಗುಣಮಟ್ಟದ ಬಗ್ಗೆ ಚಂದ್ರಶೇಖರ್‌ಗಿರುವ ಕಾಳಜಿಗೆ ಜಾತಿ ತಾರತಮ್ಯದ ಆರೋಪ ಹೊರಿಸುವುದಾದಲ್ಲಿ ಈ ವಿಷವೃತ್ತಕ್ಕೆ ಕಡಿವಾಣ ಹಾಕುವವರ್‍ಯಾರು?

ಬೆಂಗಳೂರು ವಿವಿ ಏನು ಪರಿಶುದ್ಧ ಸರಸ್ವತಿ ಮಂದಿರವೇನಲ್ಲ. ಇಲ್ಲಿ ಹಣ ಕೊಟ್ಟು ಪಿಎಚ್‌ಡಿ ಬರೆಸುವವರು, ಬರೆದುಕೊಡುವವರೆಲ್ಲಾ ಇದ್ದಾರೆ. ಪಿಎಚ್‌ಡಿ ಮಾಡುತ್ತೇನೆಂದು ಸಂಬಳ ಸಹಿತ ರಜೆ ಪಡೆದು ಅತ್ತ ರಜೆಯನ್ನು ಅನುಭವಿಸಿ ಇತ್ತ ಪುಗಸಟ್ಟೆ ಸಂಬಳವನ್ನು ತಿಂದು ಕೊನೆಗೆ ಯಾವ ಥೀಸಿಸನ್ನೂ ಬರೆಯದೆ ಕಾಲ ಹಾಕಿರುವ ಭಂಡರೂ ಇದ್ದಾರೆ. ಈ ಪಿಎಚ್‌ಡಿ ಎಂಬ ದಂಧೆಯ ಬಗ್ಗೆಯೇ ಸಂಶೋಧನೆ ನಡೆಸಿರುವ ಸೆಬಾಸ್ಟಿಯನ್ ಎಂಬಾತ ಪಿಎಚ್‌ಡಿಗೆ ರಿಜಿಸ್ಟರ್ ಮಾಡಿಸುವವರ ಪೈಕಿ ಶೇ.50 ರಷ್ಟು ಮಂದಿ ಡ್ರಾಪ್ ಔಟ್ ಆಗುತ್ತಿದ್ದಾರೆಂಬ ವರದಿಯೊಂದನ್ನು ಅಂಕಿ ಅಂಶ ಸಹಿತ EPW ಪತ್ರಿಕೆಯಲ್ಲಿ ಬರೆದಿದ್ದರು. ಬೆಂಗಳೂರು ವಿವಿ ಸಹ ಇದಕ್ಕೇನೂ ಹೊರತಾಗಿಲ್ಲ ಎಂಬುದು ಸತ್ಯ.

ದಲಿತ ವಿದ್ಯಾರ್ಥಿಗಳ ಬಿಕ್ಕಟ್ಟು

ಬೆಂಗಳೂರು ವಿವಿಯ ಪಿಜಿ ಹಾಸ್ಟೆಲಿನಲ್ಲಿ ಹಾಗೂ ಪಿಎಚ್‌ಡಿ ಹಾಸ್ಟಲಿನಲ್ಲಿ ಕೆಲ ಹೊರಗಿನವರೂ ಇದ್ದಾರೆ. ಇದು ನಿಜ. ಇನ್ನೂ ಕೆಲವರು ವಿದ್ಯಾರ್ಥಿ ಜೀವನ ಮುಗಿದರೂ, ಉದ್ಯೋಗಸ್ಥರಾಗಿದ್ದರೂ ಅಲ್ಲೇ ಉಳಿದಿದ್ದಾರೆಂಬುದೂ ವಾಸ್ತವ ಸಂಗತಿ.



ಪ್ರತಿಭಟನೆಯಲ್ಲಿ ದಲಿತ ವಿದ್ಯಾರ್ಥಿಗಳು

ಕಾನೂನಿನ ದೃಷ್ಟಿಯಿಂದ ನೋಡಿದರೆ ಅಂತಹವರನ್ನು ಕೂಡಲೇ ಗುರುತಿಸಿ ಹೊರ ಹಾಕಬೇಕು. ಆದರೆ ಗ್ರಾಮೀಣ ಪ್ರದೇಶಗಳಿಂದ ಬಂದಿರುವ ಎಲ್ಲಾ ವಿದ್ಯಾರ್ಥಿಗಳಿಗೂ ತಮ್ಮ ಕೋರ್ಸ್ ಮುಗಿದೇಟಿಗೆ ಕೆಲಸ ಸಿಗುವುದಿಲ್ಲ. ಸಿಕ್ಕ ಸಣ್ಣ ಸಂಬಳದ ಕೆಲಸಗಳಿಂದ ಬೆಂಗಳೂರೆಂಬ ದುಬಾರಿ ನಗರದಲ್ಲಿ ಅವರು ಸ್ವಾವಲಂಬಗಳಾಗಿ ಬದುಕುಳಿಯುವುದು ಕಷ್ಟಸಾಧ್ಯ. ಈಗಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಅಗತ್ಯವಿರುವಷ್ಟು ರೂಂಗಳೂ ವಿವಿಯ ಹಾಸ್ಟೆಲ್‌ಗಳಲಿಲ್ಲ. ಇದೊಂದು ಸಂಕೀರ್ಣ, ಮಾನವೀಯ ಕಾಳಜಿಯಿಂದ ನೋಡಬೇಕಾದ ಸಮಸ್ಯೆಯಾಗಿದೆ. ಆದರೆ ಈ ದಲಿತ ವಿದ್ಯಾರ್ಥಿ ಸಮುದಾಯದೊಳಗೇ ಇರುವ, ಪಟ್ಟಭದ್ರರ ಕೈಗೊಂಬೆಗಳಂತೆ ವರ್ತಿಸುತ್ತಿರುವ ಕೆಲವೇ ಕೆಲವು ವಿದ್ಯಾರ್ಥಿಗಳು ಎಸ್. ಚಂದ್ರಶೇಖರ್‌ರಂತಹ ವರನ್ನು ಜಾತಿ ನಿಂದನೆಯ ಕೇಸ್‌ನೊಳಗೆ ಸಿಕ್ಕಿಹಾಕಿಸುವ ಭಂಡತನ ಮಾಡಿರುವುದು ಒಂದು ಅಪಾಯಕಾರಿ ಬೆಳವಣಿಗೆಯಾಗಿದೆ. ಇದು ದಲಿತೇತರ ವರ್ಗಕ್ಕೆ ಸೇರಿದ, ಆದರೆ ಸಮಾನತೆಗಾಗಿ ತುಡಿಯುತ್ತಿರುವವರ ಕಾಳಜಿಗಳಿಂದ ದಲಿತರನ್ನೇ ದೂರ ಮಾಡುತ್ತದೆ. ಇದು ಎಲ್ಲರಿಗೂ ಆಗುವ ನಷ್ಟವೇ ವಿನಃ ಬೇರೇನೂ ಅಲ್ಲ. ಡಾ. ಕಲ್ಗುಡಿ ಹಾಗೂ ಡಾ. ಎಸ್. ಚಂದ್ರಶೇಖರ್ ರವರ ವಿರುದ್ಧದ ಪೋಲೀಸರ ತನಿಖೆ ಹೇಗೇ ನಡೆಯಲಿ ಆದರೆ ವಿವಿ ಈಗ ಡಾ. ಸಿದ್ಧಲಿಂಗಯ್ಯ ಮತ್ತು ಇನ್ನಿಬ್ಬರ ಸಮಿತಿಯೊಂದನ್ನು ಇದರ ತನಿಖೆಗಾಗಿ ನಿಯೋಜಿಸಿದೆ. ಕನಿಷ್ಠ ಅವರಾದರೂ ಈ ಎಲ್ಲಾ ಆಯಾಮಾಗಳ ಬಗ್ಗೆ ನಿಷ್ಪಕ್ಷಪಾತವಾಗಿ ಪರಿಶೀಲಿಸಿ ಈ 'ಜಾತಿ ಶಿಕಾರಿ'ಗೆ ಕೊನೆ ಹಾಕಬೇಕಿದೆ. ಪಿಎಚ್‌ಡಿ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವ ಬಗ್ಗೆಯೂ ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ. ■

ಎಸ್. ಚಂದ್ರಶೇಖರ್ ವಿರುದ್ಧ ಪಿತೂರಿ

ಬೆಂಗಳೂರು ವಿ.ವಿ.ಯ ಕಲಾನಿಖಾಯದ ಡೀನ್ ಹಾಗೂ ಇತಿಹಾಸ ಶಾಸ್ತ್ರಜ್ಞ ಡಾ.ಎಸ್. ಚಂದ್ರಶೇಖರ್ ಪಿಎಚ್‌ಡಿ ರಿಜಿಸ್ಟ್ರೇಷನ್ ಕೌನ್ಸಿಲ್‌ನ ಸದಸ್ಯರಾಗಿದ್ದಾರೆ. ಆದರೆ ಈ ವಿವಾದದಲ್ಲಿ ಅವರ ಪಾತ್ರ ಏನೂ ಇಲ್ಲ. ಅವರು ಕಲ್ಗುಡಿಯವರ ಜೊತೆ ಮೈಸೂರಿಗೆ ಹೋಗಿರಲಿಲ್ಲ. ಅಥವಾ ಯಾವುದೇ ಬಹಿರಂಗ ಹೇಳಿಕೆಯನ್ನೂ ಕೊಟ್ಟಿಲ್ಲ.

ಆದರೂ ದಲಿತ ವಿದ್ಯಾರ್ಥಿ ರಾಜಪ್ಪ ಪೋಲೀಸರಿಗೆ ಕೊಟ್ಟಿರುವ ಜಾತಿ ನಿಂದನೆಯ ದೂರಿನಲ್ಲಿ ಚಂದ್ರಶೇಖರ್ ರವರ ಹೆಸರನ್ನು ಸೇರಿಸಲಾಗಿದೆ. ಯಾವ ಆಯಾಮದಿಂದಲೂ ಇದು ಸಮರ್ಥನೀಯವಲ್ಲ. ಅಷ್ಟೇ ಅಲ್ಲ ಇದು ದುರುದ್ದೇಶದಿಂದ ಮಾಡಿರುವ ಕೆಲಸ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಈಗ ಖಾಲಿ ಇರುವ ಬೆಂಗಳೂರು ವಿ.ವಿ. ಉಪಕುಲಪತಿ ಸ್ಥಾನಕ್ಕೆ ಎಸ್.ಚಂದ್ರಶೇಖರ್ ಸಹ ಆಕಾಂಕ್ಷಿಯಾಗಿದ್ದಾರೆ.

ಅವರನ್ನು ಈ ಸ್ಪರ್ಧೆಯಿಂದ ಹೊರ ಕಳುಹಿಸಲು ದಲಿತ ವಿರೋಧಿ ಎಂಬ ಹಣೆಪಟ್ಟಿ ಹಚ್ಚಿ ಬಲಿ ಹಾಕುವ ಉದ್ದೇಶ ಈ ದೂರಿನ ಹಿಂದೆ ಇದ್ದಂತಿದೆ.

ಇದು ಅಸ್ಪೃಶ್ಯತಾ ನಿಂದನೆ ಕಾಯ್ದೆಯ ಹಸಿ ಹಸಿ ದುರುಪಯೋಗವಲ್ಲದೆ ಮತ್ತೇನೂ ಅಲ್ಲ. ಅತೀ ಬೇಸರದ ವಿಚಾರ ಏನೆಂದರೆ ಎಸ್. ಚಂದ್ರಶೇಖರ್‌ರವರನ್ನು ಚೆನ್ನಾಗಿ ಬಲ್ಲ, ಅವರ ತಿಳುವಳಿಕೆ, ಸಾಮಾಜಿಕ ಕಳಕಳಿ, ಬರವಣಿಗೆಗಳನೆಲ್ಲಾ ಬಲ್ಲ ಅದೇ ವಿ.ವಿಯ ಇನ್ನಿತರ ಸೋಕಾಲ್ಡ್ ಪ್ರಗತಿಪರರು (ದಲಿತರನ್ನು ಒಳಗೊಂಡಂತೆ) ಅವರ ಪರವಾಗಿ ಸಣ್ಣ ದನಿಯನ್ನೂ ಎತ್ತದೆ ನೋಡುತ್ತಿದ್ದಾರೆ. ಇವರೆಲ್ಲರ ನಿಷ್ಕ್ರಿಯತೆ ಕ್ರೂರವೂ-ಹೇಡಿತನವೂ ಆಗಿದೆ.

ಉಡಾಫೆ ಪತ್ರಕರ್ತ ನರಸಿಂಹಮೂರ್ತಿ

ಈತ ಪ್ರಜಾವಾಣಿಯ ಮೈಸೂರು ಜಿಲ್ಲಾ ವರದಿಗಾರ. ಡಾ. ಕಲ್ಗುಡಿ, ರಾಮಚಂದ್ರೇಗೌಡ ಮತ್ತಿತರರು ಮೈಸೂರಿನಲ್ಲಿ ಖಾಸಗಿ ಮಾತುಕತೆಯ ವೇಳೆ ಆಡಿದ್ದರೆನ್ನಲಾದ ಮಾತುಗಳನ್ನು ಯಥಾವತ್ ವರದಿ ರೂಪದಲ್ಲಿ ಬರೆದು ಧನ್ಯನಾಗಿರುವ ಬೇಜವಾಬ್ದಾರಿ ಪತ್ರಕರ್ತ.

'ಕೆಲ ದಲಿತ ವಿದ್ಯಾರ್ಥಿಗಳು ಕೇವಲ ಊಟ-ವಸತಿ ಸೌಲಭ್ಯಕ್ಕಾಗಿ ಪಿಎಚ್‌ಡಿ ಮಾಡುತ್ತಿದ್ದಾರೆ' ಎಂಬ ಮಾತನ್ನು ಕಲ್ಗುಡಿ ಮತ್ತಿತರರು ಖಾಸಗಿಯಾಗೇ ಆಡಿರಲಿ ಇಲ್ಲಾ ಬಹಿರಂಗವಾಗೇ ಹೇಳಿರಲಿ... ಅದೊಂದು ಕ್ರೂರ ಮನಸ್ಸಿನ ಅನಿಸಿಕೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಅವತ್ತಿನ ಹರಟೆ ಕೇವಲ ದಲಿತ ವಿದ್ಯಾರ್ಥಿಗಳ ಬಗ್ಗೆ ಮಾತ್ರ ಇರಲಿಲ್ಲ, ಇಡೀ ಉನ್ನತ ಶಿಕ್ಷಣ ಪದ್ಧತಿ, ಕಳಪೆ ಸಂಶೋಧನೆಗಳ ಭರಾಟೆ, ಪಿಎಚ್‌ಡಿಗಳ ಮಾರಾಟ ದಂಧೆ ಹೀಗೆ ಎಲ್ಲದರ ಬಗ್ಗೆಯೂ ಖಾಸಗಿ ಚರ್ಚೆ ನಡೆದಿದೆ.

ಪಕ್ಕದಲ್ಲೇ ಕುಳಿತು ಇದನ್ನೆಲ್ಲಾ ಕೇಳಿಸಿಕೊಂಡವನೇ ಈ ಪತ್ರಕರ್ತ ಬಾಲಕ ನರಸಿಂಹಮೂರ್ತಿ. ಅವತ್ತಿನ ಸದುದ್ದೇಶದ ಮಾತುಕತೆಯನ್ನೇ ಒಂದು 'ಸೆನ್ಸೇಷನಲ್ ನ್ಯೂಸ್' ಮಾಡುವ ಆತುರದಲ್ಲಿ ಅದರ ಪರಿಣಾಮಗಳನ್ನು ಯೋಚಿಸದೆ ಅದಕ್ಕೊಂದು ಜಾತಿ ಚೌಕಟ್ಟು ಹಾಕಿ ಹಸಿಹಸಿಯಾಗಿ ಈತ ಬರೆದೂಬಿಟ್ಟ.

ಅದಾದ ಎರಡೇ ದಿನಕ್ಕೆ ಬೆಂಗಳೂರು ವಿ.ವಿ.ಯಲ್ಲಿ ಗಲಾಟೆ ಶುರುವಾಯಿತು. ತೆರೆಮರೆಯಲ್ಲಿ ಯಾರು ಎತ್ತಿಕಟ್ಟಿದರೊ ಏನೋ ಈ ಜಾತಿ ನಿಂದನೆಗೆ ಸಂಬಂಧವೇ ಇರದಿದ್ದ ಇತಿಹಾಸ ಶಾಸ್ತ್ರಜ್ಞ ಎಸ್. ಚಂದ್ರಶೇಖರರವರನ್ನೂ ಉದ್ದೇಶಪೂರ್ವಕವಾಗಿ ಇದರಲ್ಲಿ ಸಿಕ್ಕಿಸಲಾಗಿದೆ.

ಕಲ್ಗುಡಿ ಹಾಗೂ ಚಂದ್ರಶೇಖರ ಇಬ್ಬರೂ ಈಗ ಪೋಲೀಸ್ ಬಂಧನದಿಂದ ಪಾರಾಗಲು ಜಾಮೀನಿಗಾಗಿ [illegible] ದೂರದೃಷ್ಟಿ, ಹೊಣೆಗಾರಿಕೆ ಎರಡೂ ಇರದಿದ್ದ ಪತ್ರಿಕಾಧರ್ಮದ ಚೌಕಟ್ಟು ಮೀರಿ ವರ್ತಿಸಿದ [illegible] ಪತ್ರಕರ್ತ [illegible] ಎಂಬುದಕ್ಕೆ ಇವತ್ತು ಉದಾಹರಣೆಯಾಗಿದ್ದಾನೆ.

ಜಲಮಂಡಳಿ: ಜನರಿಗೆ ಎಳ್ಳುನೀರು ಕಾರ್ಮಿಕರ ಬುಡಕ್ಕೆ ಬಿಸಿನೀರು!

ಬಂತಪ್ಪ ಬೇಸಿಗೆ. ಹುಬ್ಬಳ್ಳಿ-ಧಾರವಾಡ ಜನ ನೀರಿಗಾಗಿ ಪರಿತಪಿಸುವುದು ಶುರುವಾಗಿದೆ. ಬೇಸಿಗೆಯೇನು, ಮಳೆಗಾಲದಲ್ಲೇ ಚೊಲೋತ್ಕನಂಗ ನೀರು ಸಿಗುವುದೇ ಕಷ್ಟವಾಗಿದೆ ಅವಳಿ ನಗರಗಳಿಗೆ.



ಮಣಿವಣ್ಣನ್

ಪಿಚ್‌ನೇರ್ ಎಂಬ ಜರ್ಮನ್ ಕಂಪನಿಯಾಗಲೇ ಫೀಲ್ಡಿಗಿಳಿದು ನೀರು ಪೂರೈಕೆ ಟ್ರಯಲ್ಸ್ ನಡೆಸಿದೆ; ಬಡವರ ಪಾಲಿಗೆ ಗುಟುಕು ನೀರು ಸಿಗದಂತಹ ಗುಪ್ತ ಯೋಜನೆ ತಯಾರಿಸಿ ಇಡೀ ಅವಳಿನಗರಕ್ಕೆ ತಾನೇ 'ಜಲಾಧೀಶ್ವರ'ನಾಗಲು ಹೊಂಚು ಹಾಕುತ್ತಿದೆ.

ಈ ಮಧ್ಯೆ ಜಲಮಂಡಳಿ ಎಂಬುದು ಖಾಸಗಿ ಕಂಟ್ರಾಕ್ಟರ್‌ಗಳ ಚೆಲ್ಲಾಟದ ಕೇಂದ್ರವಾಗಿ ಹೋಗಿದೆ. ಟ್ಯಾಂಕರ್‌ಗಳ ಮೂಲಕ ನೀರು ಪೂರೈಕೆ ಎಂಬುದು ದುಡ್ಡು ಎತ್ತುವ ದಂಧೆಯಾಗಿದೆಯೇ ಹೊರತು ಜನರ ಬಾಯಾರಿಕೆ ತಣಿಸುವ ಕೆಲಸವಾಗಲಿಲ್ಲ.

ಜಲಮಂಡಳಿ: ಜಲಕಂಟಕರ ಕೂಡಾವಳಿ

ಜಲಮಂಡಳಿಯ ಅಧಿಕಾರಿ ಜಯರಾಮ್ ಪ್ರಾಮಾಣಿಕವಾಗಿ ಒಂದಿಷ್ಟು ಕೆಲಸ ಮಾಡುತ್ತಿದ್ದಾರೆ. ಆದರೆ ಜಲಮಂಡಳಿಯಲ್ಲಿ ಬೀಡು ಬಿಟ್ಟಿರುವ ಹಲವಾರು ಜಲಕಂಟಕ ಅಧಿಕಾರಿಗಳು ನೀರು ಪೂರೈಕೆಯ ಕಂಟ್ರಾಕ್ಟರ್‌ಗಳ ಜೊತೆ ಸೇರಿ ಹಗಲುದರೋಡೆ ಮಾಡುತ್ತಲೇ ಇದ್ದಾರೆ. ನೀರು ಸಿಗದ ಬಡಾವಣೆಗಳ ಜನ ಜಲಮಂಡಳಿಗೆ ದೂರು ನೀಡಲು ಹೋದರೆ ಭ್ರಷ್ಟಾ ನಂ. 1 ಪ್ರಭಣ್ಣವರ ಎಂಬ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜನಿಯರ್ ಜನರ ಮೈಮೇಲೆಯೇ ಏರಿ ಬರುತ್ತಾನೆ. ಅದೇ ಕಳ್ಳ ಖಾಸಗಿ ಕಂಟ್ರಾಕ್ಟರ್‌ಗಳು ಬಂದರೆ ತಬ್ಬಿ ಮುದ್ದಾಡುತ್ತಾನೆ. ಇವನಿಗೊಬ್ಬ ಭಟ್ಟಂಗಿ ನೌಕರ; ಹೆಸರು ಹನುಮಂತಪ್ಪ ಕರಿಲಿಂಗಣ್ಣವರ್. ಹೆಸರಿಗೆ ತಕ್ಕಂತೆ ಕರಿ ಕೆಲಸಗಳೇ ಇವನ ಜೀವಾಳ. ಇವನ ಸಂಬಂಧಿಕರಾದ ಪ್ರಕಾಶ್ ಮತ್ತು ಕೋಟಿ ಎನ್ನುವವರು 20 ದಿನಗೂಲಿ ನೌಕರರನ್ನು ಜಲಮಂಡಳಿಗೆ ಕಾಂಟ್ರಾಕ್ಟ್ ಆಧಾರದಲ್ಲಿ ಕೆಲಸಕ್ಕೆ ಸೇರಿಸಿ ಅಡ್ಡಾದಿಡ್ಡಿ ಕಮೀಷನ್ ಹೊಡೆಯುತ್ತಿದ್ದಾರೆ.



ಜಯರಾಮ್, ಅವಣ್ಣವರ್

ಜಲಮಂಡಳಿಯಲ್ಲಿ 300 ಜನ ಖಾಯಂ ಕೆಲ[ಸ]ಗಾರರಿದ್ದರೆ, ಸುಮಾರು 250 ಜನ ಗುತ್ತಿಗೆ ಕೆಲಸದಲ್ಲಿ[ದ್ದಾ]ರೆ. ಕೆಲವು ಜಲಮಂಡಳಿ ಅಧಿಕಾರಿಗಳು ಗುತ್ತಿಗೆ ನೌಕರರನ್ನು ನೇಮಿಸುಕೊಳ್ಳುವಾಗ ತಮ್ಮ ಸಂಬಂಧಿಕರಿಗೆಲ್ಲ ದಂಧೆ ಸೃಷ್ಟಿಸುತ್ತಾರೆ. ಈಶ್ವರ ಈಟಿ ಎಂಬ ನೌಕರನ ಅಳಿಯ ಅಕ್ಷ್ರಾಜ [illegible] ಬನ್ನೋಡೆ ಎಂಬ ಚಾರ್‌ಸೋಬೀಸ್ ಚಾಲೀಸ್ (ನಲವತ್ತು) ಗುತ್ತಿಗೆ ನೌಕರರನ್ನು ಒದಗಿಸಿದ್ದಾನೆ. ಎ.ಎಚ್. ಪವಾರ್ ಎಂಬ ಖಾಸಗಿ ಕಂಟ್ರಾಕ್ಟರ್ 60 ದಿನಗೂಲಿಗಳನ್ನು ಒದಗಿಸಿದ್ದಾನೆ. ಮುಲ್ಲಾ [illegible] ಎಂಬ ಕಾರ್ಪೋರೇಷನ್ ನೌಕರ 50 ದಿನಗೂಲಿಗಳಿಗೆ ಬಾಸ್! ದಿನಗೂಲಿಗಳಿಗೆ ಸ[ರಿ]ಯಾದ ಸಂಬಳವೂ ಸಿಗುತ್ತಿಲ್ಲ; ಜನರಿಗೆ ನೀರೂ ಸಹ ಸಿಗುತ್ತಿಲ್ಲ. ಜಲಮಂಡಳಿ ಅಧಿಕಾ[ರಿ] ಜಯರಾಮ್, ಪಾಲಿಕೆ ಕಮೀಷನರ್ ಮಣಿವಣ್ಣನ್ ಮಾತ್ರ ಎಲ್ಲ ಗೊತ್ತಿದ್ದೂ ಅಸಹಾಯಕರಂತೆ ಕಾಲ ಹಾಕುತ್ತಿದ್ದಾರೆ.

ನೀರು ಪೂರೈಸುವ ಟ್ಯಾಂಕರ್‌ಗಳೆಲ್ಲ ಪಾಲಿಕೆಯ ನೌಕರರವೇ ಆಗಿವೆ. ಪಾಲಿಕೆ ತಿಂಗಳಿಗೆ ಟ್ರ್ಯಾಕ್ಟರ್ ಟ್ಯಾಂಕರ್‌ಗೆ 20 ಸಾವಿರ, ದೊಡ್ಡ ಟ್ಯಾಂಕರ್‌ಗೆ 30 ಸಾವಿರ ನೀಡುತ್ತಾ ಹಣ ಪೋಲು ಮಾಡುತ್ತಿದೆ. ಟ್ಯಾಂಕರ್‌ಗಳನ್ನು ಪಾಲಿಕೆಗೆ ಬಾಡಿಗೆಗೆ ಬಿಡುವುದು ಸರ್ಕಾರಿ ದುಡ್ಡು ದೋಚುವ ಕಳ್ಳ ದಾರಿಯೇ. ಜೂನಿಯರ್ ಇಂಜಿನಿಯರ್ ಮಲ್ಲಿಕಾರ್ಜುನ ಹಳೆಮನಿ, ನೌಕರರಾದ ಕೆ.ಎ. ಶಿವಳ್ಳಿ, ಅರ್ಜುನ ಅವಣ್ಣವರ, ಗುರುಸಿದ್ಧಪ್ಪ, ರೈಲ್ವೆ ನೌಕರ ಯಲ್ಲಪ್ಪ ಅವಣ್ಣವರ್ ಗಳೆಲ್ಲ ತಮ್ಮ ಸಂಬಂಧಿಕರ ಹೆಸರಲ್ಲಿ ಪಾಲಿಕೆಗೆ 12 ಗಾಡಿಗಳನ್ನು ಬಾಡಿಗೆಗೆ ಬಿಟ್ಟಿದ್ದಾರೆ.

ಜಲಮಂಡಳಿಯ ಕಾರ್ಯನಿರ್ವಹಣೆಗಾಗಿ ಸುಮಾರು ಆರು ಖಾಸಗಿ ಟ್ರ್ಯಾಕ್ಸ್‌ಗಳಿಗೆ ಪ್ರತಿ ತಿಂಗಳು ತಲಾ 15 ಸಾವಿರ ರೂಪಾಯಿ ಸಂದಾಯವಾಗುತ್ತಿದೆ. ಪಾಲಿಕೆ, ಜಲಮಂಡಳಿಗಳು ಹೀಗೆ ಲಕ್ಷಗಟ್ಟಲೆ ಹಣ ಪೋಲು ಮಾಡುತ್ತಾ ಜನರ ಬಾಯಿಗೆ ಎಳ್ಳುನೀರು ಬಿಡುತ್ತಾ, ದಿನಗೂಲಿ ಕಾರ್ಮಿಕರ ಬುಡಕ್ಕೇ ಬಿಸಿನೀರು ಬಿಡುತ್ತಿವೆ. ●

ಬೇಕಾ ಪಿಚ್‌ನೇರು ನೀರು?

2001 ರಲ್ಲಿ ಪಾಲಿಕೆ ಅವಳಿನಗರಗಳಿಗೆ ನೀರು ಪೂರೈಸುವ ತನ್ನ ಕೆಲಸವನ್ನು ಜಲಮಂಡಳಿಯ ಬೆನ್ನಿಗೆ ಹಾಕಿ ಕೈತೊಳೆದುಕೊಂಡಿತು. ಅಲ್ಲಿವರೆಗೆ ನೀರು ಪೂರೈಕೆ ಕೆಲಸದಲ್ಲಿ ತೊಡಗಿಕೊಂಡಿದ್ದ ಪಾಲಿಕೆಯ 300 ನೌಕರರು ಅಭದ್ರತೆಯಲ್ಲಿ ಜಲಮಂಡಳಿ ಸೇರಿದರು.

ಬೇಜವಾಬ್ದಾರಿ ಪಾಲಿಕೆ, ಜಲಮಂಡಳಿಗಳೀಗ ಅವಳಿನಗರದ ಎಂಟು ವಾರ್ಡ್‌ಗಳ ನೀರು ಪೂರೈಕೆ ಹೊಣೆಯನ್ನು ಜರ್ಮನ್ ಕಂಪನಿ ಪಿಚ್‌ನೇರು ಮಡಿಲಿಗೆ ಹಾಕಿಬಿಟ್ಟಿವೆ. ಈಗ ಟ್ರಯಲ್ಸ್‌ನಲ್ಲಿರುವ ಈ ಡೇಂಜರಸ್ ಕಂಪನಿಯಿಂದ ಬರಲಿರುವ ದಿನಗಳಲ್ಲಿ ಬಡವರಿಗೆ ನೀರು ಸಿಗುವುದೇ ಕಷ್ಟವಾಗಲಿದೆ. ಕಳೆದ ತಿಂಗಳು ಇದರ ವಿರುದ್ಧ ಪ್ರತಿಭಟನೆಗಳಾಗಿವೆ. ಪಾಲಿಕೆ ಆಯುಕ್ತ ಮಣಿವಣ್ಣನ್ ಇದು ತಾತ್ಕಾಲಿಕ ಯೋಜನೆ ಎಂದು ತಿಪ್ಪೆ ಸಾರಿಸಿದ್ದಾರೆ. ಅನಿಲ್ ಪಾಟೀಲ್‌ನೆಂಬ ಪುಡಾರಿ ಪಾಲಿಟಿಸಿಯನ್ ಸಹ ಪಿಚ್‌ನೇರು ನೀರು ಚೊಲೋ ಐತಿ ಎಂದು ಮಾತಾಡಿದ್ದಾನೆ.

ಅವಳಿ ನಗರಗಳಲ್ಲಿ ಹೊಸ ಹೊಸ ಬಡಾವಣೆಗಳಾಗಿವೆ, ಹಲವಾರು ಗ್ರಾಮಗಳು ಪಾಲಿಕೆಯ ವ್ಯಾಪ್ತಿಗೆ ಬಂದಿವೆ. ನಗರಾಭಿವೃದ್ಧಿ ಮಂಡಳಿ ಮೂಲ ಸೌಕರ್ಯಗಳನ್ನು ಒದಗಿಸದೇ ಹಣ ನುಂಗುತ್ತಲೇ ಇದೆ.

ನಮ್ಮ ಮಲಪ್ರಭೆಯ ಮೇಲೆ ಅಧಿಕಾರ ಚಲಾಯಿಸಲು ಇದ್ಯಾವ ಸೀಮೆ ಪಿಚ್‌ನೇರು?

Zero Hour

ಉತ್ತರಿಸಲು ಟ್ರೈ ಮಾಡಿ:

1. ದಳ(ಎಸ್)ನ ಶಾಸಕರ ಸಂಖ್ಯೆ
   (ಎ)59 (ಬಿ) ಚಾಲೀಸ್ ಚೋರ್ (ಸಿ) 36 (ಡಿ)ಹೋಗ್ಲಿ ಬಿಡ್ರಿ, ಸ್ಪೀಕರ್‌ಗೇ ಇನ್ನೂ ಕನ್‌ಫ್ಯೂಷನ್ ಇದೆ.
2. ಯಾರು ಯಾರನ್ನು ಕುರಿತು ಈ ಮಾತು ಹೇಳಿದರು?
   "ಆತ ಒಂದಾದರೂ ಪಂಪನ ಪದ್ಯ ಹೇಳಲಿ ನೋಡೋಣ"
3. ಗುಂಪಿಗೆ ಸೇರದ ಪದ ತೆಗೆದು ಕಾರಣ ತಿಳಿಸಿ.
   ಮೋದಿ - ಮುತಾಲಿಕ್ - ತೊಗಾಡಿಯಾ - ಕೇರೆ ಹಾವು
4. ಜನರ ಕೈಗೆ ಗೋಮೂತ್ರವಿತ್ತು ತೀರ್ಥಯಾತ್ರೆಗೆ ಕಳುಹಿಸುವ ಸಾಹಸಿ ಯೋಜನೆ ರೂಪಿಸಿದ 'ಹೆಣ'ಕಾಸು ಸಚಿವ ಯಾರು?
5. ಬೆಂಗಳೂರಲ್ಲಿ ಕರಾವಳಿ ದರ್ಶಿನಿಗಳೆಂದರೆ.....
   (ಎ) ಶುಚಿ-ರುಚಿ ತಿಂಡಿ ಲಭ್ಯ (ಬಿ) ಬಿಸ್ಲೇರಿ ಬಾಟಲಿಯಲ್ಲಿ ಗಡುಸು ನೀರು
   (ಸಿ) ಫುಟ್‌ಪಾತ್ ಒತ್ತುವರಿ ಖಚಿತ (ಡಿ) (ಬಿ) ಮತ್ತು (ಸಿ) ಎರಡೂ ಉತ್ತರ ಸರಿ.

ಉತ್ತರಗಳು : [illegible]


[illegible] ಎಲ್ಲ ವಿಷಯಗಳೊಂದಿಗೆ ಮಾನವ ದೇಹದ ಸೂಕ್ಷ್ಮ [illegible] ಹೊಂದಿರುತ್ತದೆ - ಆಯಿಲ್ಯಾಂ ತಿರುನಾಳ್ (ಕೇರಳ)

...ವಾಗಡ ಎಂಬ ಅತಿ ಹಿಂದುಳಿದ ತಾಲ್ಲೂಕು ...ವಲ್ಲಿ ಲಾಭದಾಯಕ ಉದ್ದಿಮೆಯೆಂಬುದೇ ... ಇದ್ದರೆ ಅದು ಬಡರೋಗಿಗಳ ರಕ್ತಹೀರುವ ...ಗ್ ಹೋಮ್ ಉದ್ಯಮ ಮಾತ್ರ. ಸದಾ ...ರುವ ಬರಗಾಲ. ನಕ್ಸಲೀಯ ಚಳವಳಿಯ ...ೀಗುಗಳು, ರೆಡ್ಡಿ-ನಾಯ್ಡುಗಳ ಕಾರುಬಾರುಗಳ ... ಇಲ್ಲಿ ಸಾಯಾಗಿರುವವರು, ದುಡ್ಡು ಮಾಡುವ ...ನೆ ವೈದ್ಯರ ವೇಷದಲ್ಲಿರುವ ಸುಲಿಗೆಕೋರರು. ... ನರ್ಸಿಂಗ್ ಹೋಮುಗಳಲ್ಲಿ ನಡೆಯುವಷ್ಟು ... ದಂಧೆಯಾಟು ಬಹುಶಃ ಇದೀ ಜಿಲ್ಲೆಯ ಬೇರಾವ ...ಕಿನಲ್ಲೂ ನಡೆಯಲಾರದೇನೋ.

...ಲ್ಲಿ ಹೆಸರಿಗೆ ಮಾತ್ರ ವೈದ್ಯರಾಗಿದ್ದುಕೊಂಡು ...ಯ ಮಾಡುವವರು, ನಟೋರಿಯಸ್ ಹಿನ್ನೆಲೆಯ ..., ಕ್ಯಾಪಿಟೇಷನ್ ಕುಳಗಳು, ... ಆಂಧ್ರ ಪ್ರದೇಶದ ರಾಯಲ...ಾದ ಫ್ಯಾಕ್ಷನಿಸ್ಟುಗಳೊಂದಿಗೆ ...ತ್ರ ಮೈತ್ರಿ ಕುದುರಿಸಿಕೊಂಡಿ...ರು, ನೂರಾರು ಎಕರೆ ಭೂಮಿ ...ನ ಹೊಂದಿರುವವರು, ಹೀಗೆ ... ನಮೂನೆಯ ಡಾಕ್ಟರುಗಳು ...ರೆ. ಇವರೆಲ್ಲಾ ಒಂದಲ್ಲಾ ಒಂದು ...ಯ ಪಕ್ಷದೊಂದಿಗೆ ಗುರುತಿಸಿ...ದ್ದಾರೆ. ಕೆಲವರು ನೇರವಾಗಿ ...ಡಕ್ಕಿಳಿದರೆ ಮತ್ತೆ ಕೆಲವರು ...ರೆಯಲ್ಲೇ ಕಿಂಗ್‌ಮೇಕರ್‌ಗಳಾಗಿ ... ರಾಜಕೀಯ ಹಿಡಿತವಿಟ್ಟುಕೊಂಡಿ... ಇವರ ಗತ್ತು ಗೈರತ್ತು, ದವಲತ್ತು ...ಾ ಬಿಕರಿಯಾಗುವುದು ಬಡ ...ಗಳಿಂದ ಸುಲಿಗೆ ಮಾಡಿದ ಹಣ ... ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಟ್ಯಾಬ್ಲೆಟ್ಟುಗಳನ್ನು ಕೊಟ್ಟು ರೋಗವಾಸಿ ಮಾಡುವವರೂ ಇದ್ದಾರೆ.

ವೈದ್ಯಕೀಯ ನಿರ್ಲಕ್ಷ್ಯದ ಸಾವಿನ ಪ್ರಕರಣಗಳಿಗಂತೂ ಇಲ್ಲಿ ಲೆಕ್ಕವೇ ಇಲ್ಲ. ಇಲ್ಲಿ ಸಿಸೇರಿಯನ್ ಆಪರೇಷನ್ ಮಾಡಿಸಿಕೊಂಡವರಿಗೆ ಹೊಲಿಗೆ ಬಿಚ್ಚುವಾಗ ಕೀವು ಸೋರುವುದು ಸಾಮಾನ್ಯ. ಪಾವಗಡ ತಾಲ್ಲೂಕಿನಲ್ಲಿ ವೈದ್ಯಕೀಯ ನಿರ್ಲಕ್ಷ್ಯದಿಂದ ಆದ ಸಾವು-ನೋವಿನ ಪ್ರಕರಣಗಳ ತನಿಖೆ ನಡೆದಲ್ಲಿ ಸಮಸ್ಯೆಯ ಅಸಲಿ ರೂಪ ತಿಳಿಯುತ್ತದೆ. ಬಹಳಷ್ಟು ಪ್ರಕರಣಗಳಲ್ಲಿ ರೋಗಿಯ ಕಡೆಯವರು ಪೋಲೀಸ್ ಸ್ಟೇಷನ್ನುಗಳಿಗೆ ಹೋಗಲಿಕ್ಕೆ ಬಿಡುವುದಿಲ್ಲ. ರಾಜಿ ಪಂಚಾಯ್ತಿಗಳಲ್ಲಿ ಅಷ್ಟೋ ಇಷ್ಟೋ ಹಣ ಕಟ್ಟಿ ಕೈ ತೊಳೆದುಕೊಳ್ಳುತ್ತಾರೆ. ಜನರ ಜೀವಗಳಿಗಿಲ್ಲಿ ಬೆಲೆಯೇ ಇರುವುದಿಲ್ಲ.



ಪಾವಗಡ ಮೆಡಿಕಲ್ ಸೆಂಟರ್

ಪಾವಗಡವನ್ನು ಹೀರುತ್ತಿರುವ ವೈದ್ಯರು

ತುಮಕೂರು

ಜಯಂತಿಯವರ ಯಜಮಾನರು ಓದಿರುವುದು ಇಂಜಿನಿಯರಿಂಗು. ಈತನಿಗೆ ವೈದ್ಯಕೀಯ ವೃತ್ತಿ ಮಾಡುವ ಖಯಾಲಿ. ರೋಗಿಗಳಿಗೆ ಪುಕ್ಕಟೆ ಸಲಹೆ ಕೊಡುವುದು, ಇಂಜೆಕ್ಷನ್ ಕೊಡುವುದು ಈತನ ಕೆಲಸ. ಈತನ ಚಿಕಿತ್ಸೆಯ ದೆಸೆಯಿಂದಾಗಿ ಜಾಲೋಡು ಎಂಬ ಗ್ರಾಮದ ಮಗುವೊಂದು ಅಸುನೀಗಿ ದೊಡ್ಡ ರಾದ್ಧಾಂತ ಮಾಡಿಕೊಂಡಿದ್ದ. ಈಯಮ್ಮ ಜಯಂತಿ ಬರಿ ಹೆರಿಗೆ ಮಾತ್ರವಲ್ಲ, ಬಂಜೆತನವಿರುವವರಿಗೆ ಮಕ್ಕಳಾಗುವ ಟ್ರೀಟ್‌ಮೆಂಟ್ ಕೊಡುತ್ತೇನೆಂದು ಹೇಳಿ ಹೊಸ ನಮೂನೆಯಲ್ಲಿ ಸುಲಿಗೆ ಮಾಡುತ್ತಾಳೆ.

ಈತ ಕ್ಯಾಪಿಟೇಶನ್ ಕುಳ

ವೆಂಕಟೇಶ್ವರ ನರ್ಸಿಂಗ್ ಹೋಮ್‌ನ ಡಾ. ಜಿ. ವೆಂಕಟರಾಮಯ್ಯ ಜನತಾದಳದ ಮುಖಂಡ. ಕೆಲವು ವರ್ಷಗಳ ಹಿಂದೆ ಹೊಸಕೋಟೆಯಿಂದ Yezdi ಬೈಕಿನಲ್ಲಿ ಪಾವಗಡಕ್ಕೆ ಬಂದು ಹೋಗುತ್ತಿದ್ದ. ಅದಾವ ಕಾಣದ ಕೈಗಳು ಈತನಿಗೆ ಸಿರಿತನವನ್ನು ಧಾರೆಯೆರೆದವೋ ಏನೋ. ಪ್ರಸ್ತುತ ಈತ ಕಡಿಮೆಯೆಂದರೂ ಹದಿನೈದು-ಇಪ್ಪತ್ತು ಕೋಟಿ ರೂಪಾಯಿಗಳ ಒಡೆಯನೆಂದು ಹೇಳಲಾಗುತ್ತದೆ. ತಾಲ್ಲೂಕಿನ ನಂಬರ್ 1 ಕ್ಯಾಪಿಟೇಷನ್ ಕುಳವಾಗಿ ಅವತರಿಸಿರುವ ಈತ ನರ್ಸಿಂಗ್, ಟಿಸಿಎಚ್, ಸೈನ್ಸ್, ಆರ್ಟ್ಸ್ ಕಾಲೇಜುಗಳ ಮಾಲೀಕ.

ತಾಲ್ಲೂಕು ಕೇಂದ್ರದಲ್ಲಿ ಶ್ರೀನಿವಾಸ ನಗರ ಲೇಔಟ್ ಅಂತಾ ಮಾಡಿ ಬರೋಬ್ಬರಿ 200 ನಿವೇಶನಗಳನ್ನು ಮಾಡಿದ್ದಾನೆಂದು ಹೇಳಲಾಗುತ್ತಿದೆ. ಜಿಲ್ಲಾ ಕೇಂದ್ರ ತುಮಕೂರಿನಲ್ಲೂ ಕೋಟಿಗಟ್ಟಲೇ ಬೆಲೆ ಬಾಳುವ ನಿವೇಶನಗಳನ್ನು ಹೊಂದಿದ್ದಾನೆ. ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳೂ ಈತನ ಬಂಗಲೆಗೆ ರೇಡು ಮಾಡಿದ್ದರು. ಈತನ ನರ್ಸಿಂಗ್ ಹೋಮ್‌ಗೆ ವಾರಕ್ಕೊಮ್ಮೆ ಸ್ಪೆಷಲಿಸ್ಟುಗಳು ಬಂದು ಹೋಗುತ್ತಾರೆ. ಕೈತುಂಬಾ ಕಮಾಯಿ ವ್ಯವಹಾರಗಳನ್ನಿಟ್ಟುಕೊಂಡಿರುವ ವೆಂಕಟರಾಮಯ್ಯನಿಗೆ ನರ್ಸಿಂಗ್ ಹೋಮ್‌ನ್ನು ಮ್ಯಾನೇಜ್ ಮಾಡುವುದು ಕಷ್ಟವೇನಲ್ಲ. ಈತನಿಗಿರುವ ಹೆಸರಿನಷ್ಟು ಜನರಿಗೆ ಈತನಿಂದ ಉಪಯೋಗವಾಗಿಲ್ಲವೆಂಬುದೇ ವಿಪರ್ಯಾಸಕರ.

ಡಾ. ಚಕ್ಕರ ರೆಡ್ಡಿ ಹಾಲಿ ಜಿಲ್ಲಾ ಪಂಚಾಯ್ತಿ ಸದಸ್ಯನಾಗಿರುವಾತ. ತಾಲ್ಲೂಕಿನ ರಾಜಕೀಯ, ಪೋಲೀಸ್ ಸ್ಟೇಷನ್ನುಗಳ ವ್ಯವಹಾರಗಳನ್ನೆಲ್ಲಾ ಬಿಗಿಮುಷ್ಟಿಯಲ್ಲಿಟ್ಟುಕೊಂಡಿರುವ ಮಾಜಿ ವೆಂಕಟಸ್ವಾಮಿಯ ವಿರುದ್ಧ ಗೆದ್ದ ನಂತರ ಈತನ ಜನಪ್ರಿಯತೆಯ ಗ್ರಾಫ್ ಒಂದಷ್ಟು ಏರಿದೆ. ದಶಕದ ಹಿಂದೆಯೇ ಈತನ ಮೇಲೆ ಫೈರಿಂಗ್ ಅಟೆಂಪ್ಟ್ ಆಗಿ ಸುದ್ದಿಗೆ ಗ್ರಾಸವಾಗಿದ್ದ. ಇನ್ನು ಶಾಂತಿ ಕ್ಲಿನಿಕ್‌ನ ಪಿ. ನಾರಾಯಣಪ್ಪ ಅಸ್ತಮಾ ಸ್ಪೆಷಲಿಸ್ಟ್. ಈತ ಅಸ್ತಮಾ ರೋಗಕ್ಕೆ [illegible]ದಿಂದ ಔಷಧಿಗಳನ್ನು ತರಿಸಿಕೊಳ್ಳುತ್ತೇನೆಂದು [illegible]

ಹೋಗುತ್ತಾರೆ. ಆದರೂ ಗುಣಮುಖರಾದವರ ಸಂಖ್ಯೆ ತುಂಬಾ ಕಡಿಮೆ. ಇವರ ಜೊತೆಗೆ [illegible] ನರ್ಸಿಂಗ್ ಹೋಮ್ ನಡೆಸುತ್ತಿರುವ ಡಾ. [illegible] ರಕ್ತಹೀರುವ [illegible] ಕುಖ್ಯಾತಿ ಇದೆ. ಈತನಿಗೆ [illegible] ಸರ್ವಸ್ವ. ಈತ ಪಾವಗಡ-ತುಮಕೂರಿನ ನರ್ಸಿಂಗ್ ಹೋಮುಗಳ ಲಿಂಕು ಇಟ್ಟುಕೊಂಡು ಪೇಷಂಟುಗಳನ್ನು ಕಳುಹಿಸಿ ಪರ್ಸೆಂಟೇಜ್ ಪಡೆಯುವ ಕಲೆಯನ್ನು ಸಿದ್ಧಿಸಿಕೊಂಡಿದ್ದಾನೆ. ಪಾವಗಡದ ವೈದ್ಯಕೀಯ ಲೋಕದ ವ್ಯವಹಾರಗಳೊಳಕ್ಕೆ ಇಣುಕಿದಷ್ಟು ಎಂಥೆಂಥದೋ ಸಂಗತಿಗಳು ಗರಿಬಿಚ್ಚಿಕೊಳ್ಳುತ್ತವೆ. ಹಾಗೆಂದು ಪಾವಗಡದ ವೈದ್ಯರೆಲ್ಲ ಖಳರೆಂದೇನೂ ಅಲ್ಲ, [illegible] ನರ್ಸಿಂಗ್ ಹೋಮ್‌ನ ಎಂ.ಎಚ್. ನಾರಾಯಣಪ್ಪ, ಆದರ್ಶ ನರ್ಸಿಂಗ್ ಹೋಮ್‌ನ ಸೂರ್ಯನಾರಾಯಣ ರೆಡ್ಡಿ, ರಾಮಕೃಷ್ಣಾಶ್ರಮದ ವೈದ್ಯರುಗಳು ಜನಾನುರಾಗಿಗಳಾಗಿಯೇ ಇದ್ದಾರೆ.

ಹದಗೆಟ್ಟ ಸರ್ಕಾರಿ ಆಸ್ಪತ್ರೆಗಳು

ಈ ಖಾಸಗಿ ಡಾಕ್ಟರುಗಳ ಕರ್ಮಕಾಂಡ ಕೇಳಿ ಸರ್ಕಾರಿ ವೈದ್ಯರುಗಳತ್ತ ಹೊರಳಿದರೆ ಅಲ್ಲೂ ನಿರಾಶದಾಯಕ ವಾತಾವರಣವಿದೆ. ತಾಲ್ಲೂಕಿನಲ್ಲಿ ಒಟ್ಟು 8 ಪ್ರಾಥಮಿಕ ಆರೋಗ್ಯ ಘಟಕಗಳಿವೆ. ಬಹುತೇಕ ಕಡೆ ವೈದ್ಯರಿಲ್ಲ. ಹೊಸಕೋಟೆಯಲ್ಲಿ 35 ಲಕ್ಷ ರೂಪಾಯಿ ವೆಚ್ಚದಲ್ಲಿ ಆಸ್ಪತ್ರೆ ಕಟ್ಟಿಸಿದ್ದರೂ ಅದಕ್ಕಿನ್ನೂ ಉದ್ಘಾಟನೆಯ ಭಾಗ್ಯ ದೊರೆತಿಲ್ಲ. ಇಲ್ಲಿ ಡಾ. ರೇವತಿ ಎಂಬಾಕೆಗೆ ರಾಜಕೀಯ ಮಾಡಲಿಕ್ಕೇ ಸಮಯ ಸಾಲುವುದಿಲ್ಲ. ಡಾ. ವೆಂಕಟೇಶ್ ಮನೆಯನ್ನೇ ನರ್ಸಿಂಗ್ ಹೋಮನ್ನಾಗಿ ಮಾಡಿಕೊಂಡಿದ್ದಾರೆ.

ಮಂಗಳವಾಡದಲ್ಲಿ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿರುವ ಆಸ್ಪತ್ರೆ ಕಟ್ಟಡ ಕಳಪೆ ಕಾಮಗಾರಿಯಿಂದಾಗಿ ಉದ್ಘಾಟನೆಗೆ ಮೊದಲೇ ಬಿದ್ದುಹೋಗುವ ದುಃಸ್ಥಿತಿ ತಲುಪಿದೆ. ತಾಲ್ಲೂಕು ಆಸ್ಪತ್ರೆಯನ್ನು 30 ರಿಂದ 50 ಹಾಸಿಗೆಗಳಿಗೆ ಮೇಲ್ದರ್ಜೆಗೆ ಏರಿಸಿದ್ದರೂ ಪೂರಕ ಸವಲತ್ತುಗಳನ್ನು ನೀಡಿಲ್ಲ. ಅಲ್ಲೊಂದು 'ಇಲ್ಲ'ಗಳ ಪಟ್ಟಿಯೇ ಇದೆ. ಆರ್ಥೋಪಿಡಿಷಿಯನ್, ಲೇಡಿ ಡಾಕ್ಟ್ರು, ಪೀಡಿಯಾಟ್ರಿಷಿಯನ್, ಐ ಸ್ಪೆಷಲಿಸ್ಟು, ಸರ್ಜನ್ನೂ ಯಾರೂ ಇಲ್ಲ. ಈ ಸರ್ಕಾರಿ ಆಸ್ಪತ್ರೆಗೆ ಜನಪರ ಕಾಳಜಿಯುಳ್ಳ, ರೋಗಿಗಳನ್ನು ಚೆನ್ನಾಗಿ ನೋಡಿಕೊಳ್ಳುವ ಡಾಕ್ಟರನೊಬ್ಬ ಬಂದರೆ ಅವನಿಗೆ ಮೂರು ಮತ್ತೊಂದು ದಿನವೂ ಉಳಿಗಾಲವಿಲ್ಲ. ನರ್ಸಿಂಗ್ ಹೋಮ್ ದಂಧೆ ನಡೆಸುವ ಕೆಲ ಡಾಕ್ಟರುಗಳು ಒಂದಾಗಿ ಇನ್ನಿಲ್ಲದ ಒತ್ತಡ ತಂದು ದಿನ ಬೆಳಗಾಗುವುದರೊಳಗೆ ವರ್ಗಾವಣೆ ಮಾಡಿಸಿಬಿಡುತ್ತಾರೆ. ಹಾಗಾಗಿ ಪಾವಗಡ ತಾಲ್ಲೂಕು ಆಸ್ಪತ್ರೆಗೆ ಒಳ್ಳೆಯ ಡಾಕ್ಟರು ಬರುವುದೂ, ಜನ ಅಂತವರಿಂದ ಚಿಕಿತ್ಸೆ ಪಡೆಯುವುದೂ ಕನಸಿನ ಮಾತಾಗಿದೆ.

...ರ್ಮಲ್ ಡೆಲಿವರಿಗಳೇ ಆಗುವುದಿಲ್ಲ

...ಾವಗಡ ಮೆಡಿಕಲ್ ಸೆಂಟರ್‌ನ ಡಾ. ...ಂವಮಾರ್, ಮೀನಾ ನರ್ಸಿಂಗ್ ...ಮ್‌ನ ಡಾ. ಮೀನಾಕುಮಾರಿ, ...ಕೃಷ್ಣಾ ನರ್ಸಿಂಗ್ ಹೋಮ್‌ನ ಡಾ. ...ಂತಿ ರೋಗಿಗಳಿಂದ ಹಣ ...ಸುವುದರಲ್ಲಿ ಮುಂಚೂಣಿಯಲ್ಲಿ ... ನರ್ಸಿಂಗ್ ಹೋಮ್‌ಗಳ ಮುಂದೆ ... ಮತ್ತು ಪ್ರಸೂತಿ ರೋಗತಜ್ಞರು ... ದೊಡ್ಡದೊಡ್ಡ ಬೋರ್ಡುಗಳನ್ನು ಹಾಕಿಕೊಂಡು ವ್ಯಾಪಾರಕ್ಕೆ ಕುಂತುಬಿಟ್ಟದ್ದಾರೆ. ...ಣಿಯರು ತಪಾಸಣೆಗೆಂದು ಒಮ್ಮೆ ಇವರ ...ಗ್ ಹೋಮ್‌ಗಳನ್ನು ಹೊಕ್ಕರೆ ಹೊರಬರಲು ...ದ ಹರಸಾಹಸಗಳನ್ನು ಮಾಡಬೇಕು. ಬ್ಲಡ್‌ಟೆಸ್ಟು, ...ರಿನ್ ಟೆಸ್ಟು, ಮಗುವಿನ ಕಂಡೀಷನ್ ತಿಳಿಯಲಿ...ದು ಸ್ಕ್ಯಾನಿಂಗ್, ಸುಸೂತ್ರ ಹೆರಿಗೆಗೆ ಅಗತ್ಯವೆಂದು ಕಂತೆಗಟ್ಟಲೇ ಟ್ಯಾಬ್ಲೆಟ್ಟುಗಳು, ಟಾನಿಕ್ಕುಗಳು, ...ದರ ಫಾಲೋ ಆಪ್‌ಗೆಂದು ಮಂತ್ಲಿ ಚೆಕ್‌ಅಪ್ ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ...ಣಿಯಾದವರು ಹೆರಿಗೆಗೆಂದು ದಾಖಲಾದರೆ ...ವಾಗಿ ಹೆರಿಗೆಯಾಗುವ ಹಾಗಿದ್ದರೂ ಪೋಷಕರ ... ಒತ್ತಡ ತಂದು 'ತಕ್ಷಣ ಸಿಸೇರಿಯನ್ ಆಪರೇಷನ್ ...ಬೇಕು. ಇಲ್ಲವಾದರೆ ಮಗು ಉಳಿಯುವುದಿಲ್ಲ ...ಾ ತಾಯಿ ಜೀವಕ್ಕೆ ಅಪಾಯವಿದೆ' ಎಂದು ...ದ, ಒತ್ತಡದ ವಾತಾವರಣ ನಿರ್ಮಿಸುತ್ತಾರೆ. ...ಸೇರಿಯನ್ ಆಪರೇಷನ್ನಿಗೆ 9 ರಿಂದ 10 ಸಾವಿರ ... ಪಡೆಯುತ್ತಾರೆ. ಶೇ. 50 ರಷ್ಟು ಅನಗತ್ಯ ...ಯನ್ ಆಪರೇಷನ್‌ಗಳು ನಡೆಯುತ್ತಿವೆ ಎಂಬುದು ...ರಿಯ ವೈದ್ಯರ ಅಭಿಪ್ರಾಯ.

ಬಾಟ್ಲೀ ಹಾಕುವ ರೋಗ

...ವಿಧ ಪ್ರಕರಣಗಳ ಕತೆ ಒಂದೆಡೆಯಾದರೆ ...ರಣ ಕಾಯಿಲೆಯ ರೋಗಿಗಳು ನರ್ಸಿಂಗ್ ...ಮುಗಳಿಗೆ ಅಡ್ಮಿಟ್ಟಾದರೂ ರೋಗಿಯಾಗಿ ದಾಖ...ವನ ಕಾಯಿಲೆ ಎಂಥದು? ಯಾವ ಚಿಕಿತ್ಸೆ ...ಬೇಕು? ಎಷ್ಟು ಡ್ರಗ್ಸ್ ಕೊಡಬೇಕು? ಎಂಬಂಥ ... ವಿವೇಕವನ್ನೂ ಬಳಸದೇ ಹಣದಾಸೆಗಾಗಿ ... ಅಡ್ಮಿಟ್ಟಾದ ತಕ್ಷಣ ಡ್ರಿಪ್ಸ್‌ಗಳನ್ನು ಹಾಕುತ್ತಾರೆ. ...ದೋ ಮೂವತ್ತೋ ರೂಪಾಯಿ ಬೆಲೆ ಬಾಳುವ ... ಬಾಟಲಿಗಳಿಗೆ ನೂರೈವತ್ತರಿಂದ ಇನ್ನೂರು ...ಯ ವಸೂಲಿ ಮಾಡುತ್ತಾರೆ. ಪೇಷಂಟುಗಳನ್ನು ...ಕೊಂಡು ಬಂದವರ ಕೈಗೊಂದು ಡ್ರಗ್ಗಿನ ಲಿಸ್ಟು ... ಕಂತೆಗಟ್ಟಲೇ ಡ್ರಗ್ಗುಗಳನ್ನು ತರಿಸಿಕೊಂಡು ... [illegible] ಕೊಟ್ಟು [illegible]

ಎಂ.ಡಿ. ಸರ್ಟಿಫಿಕೇಟಿಗೇ

ದಿ ಪಾವಗಡ ಮೆಡಿಕಲ್ ಸೆಂಟರ್‌ನ ಡಾ. ಶಿವಕುಮಾರ್, ಡಾ. ಚಲಪತಿ ಎಂಬ ಆರ್.ಎಂ.ಪಿ. ಡಾಕ್ಟರರ ಮಗ. ಇವನು ಎಂಬಿಬಿಎಸ್ ಜೊತೆಗೊಂದು ಎಂ.ಡಿ. ಸರ್ಟಿಫಿಕೇಟು ತಗುಲಿ ಹಾಕಿಕೊಂಡು ಬಂದವನೇ ಭರ್ಜರಿ ವ್ಯಾಪಾರ ಕುದುರಿಸಿಕೊಂಡ. ಆವಯ್ಯ ಎಂ.ಡಿ. ಓದಿದ್ದಾನಂತೆ. ಸರ್ಜನ್ ಅಂತೆ. ಆಯಪ್ಪ ವಾಸಿ ಮಾಡದಿರುವ ಕಾಯಿಲೆಯೇ ಇಲ್ಲವಂತೆ! ಹೆರಿಗೆ ಮಾಡೋದ್ರಲ್ಲಿ ಸ್ಪೆಷಲ್ ಅಂತೆ.... ಹೀಗೆ ಏನೇನೋ ಅಂತೆ-ಕಂತೆ ಗಳೆಲ್ಲಾ ಸೇರಿಕೊಂಡು ಜನ ಮರುಳೋ, ಜಾತ್ರೆ ಮರುಳೋ ಎಂಬಂತೆ ಜನ ದುಡ್ಡನ್ನು ತಂದು ಇವನ ಜೋಳಿಗೆಗೆ ಸುರಿದರು. ಇದೇ ಶಿವಕುಮಾರ್ ಎರಡು ವರ್ಷಗಳ ಹಿಂದೆ ನಲಿಗಾನಹಳ್ಳಿಯ ಗರ್ಭಿಣಿಯೋರ್ವರ ಶಸ್ತ್ರಚಿಕಿತ್ಸೆಯ ನಂತರ ಕತ್ತರಿಯನ್ನು ಹೊಟ್ಟೆಯೊಳಗೆ ಬಿಟ್ಟು ನಂತರ ಲಕ್ಷಾಂತರ ದಂಡ ಕಟ್ಟಿ ಕೊಟ್ಟ. ಆಗಿನ ಶಾಸಕ ವೆಂಕಟರಮಣಪ್ಪನೇ ಈ ಪ್ರಕರಣದ ರಾಜಿಸೂತ್ರಧಾರನಾಗಿದ್ದನೆಂದರೆ ಪ್ರಕರಣ ಇನ್ನೆಷ್ಟು ಗಂಭೀರವಾಗಿತ್ತೆಂಬುದನ್ನು ನೀವೇ ಊಹಿಸಿ.

ಇವರು ಲೇಡಿ ಡಾಕ್ಟರುಗಳು

ಡಾ. ಮೀನಾ ಕುಮಾರಿ, ಡಾ. ಜಯಂತಿ ಎಂಬಿಬ್ಬರು ಮಹಿಳಾ ಡಾಕ್ಟರುಗಳು ಎಂಬ ಕಾರಣಕ್ಕೆ ಇವರ ಬಳಿ ಹೆಚ್ಚಿನ ಸಂಖ್ಯೆಯಲ್ಲಿ ಗರ್ಭಿಣಿಯರು ತಪಾಸಣೆಗೆ, ಹೆರಿಗೆಗೆ ಹೋಗುತ್ತಾರೆ. ಇವರು ಇದನ್ನೇ ಬಂಡವಾಳ ಮಾಡಿಕೊಂಡು ಸುಲಿಗೆಗೆ ನಿಂತು ಬಿಟ್ಟಿದ್ದಾರೆ. ಈ ಮೀನಾ ಕುಮಾರಿ, ಜಯಂತಿ ಇಬ್ಬರೂ ಎಕ್ಸ್‌ಪರ್ಟುಗಳ ಸಹಾಯವಿಲ್ಲದೆ ಆಪರೇಷನ್‌ಗಳನ್ನು ಮಾಡಲಾರರು. ಈ ಡಾಕ್ಟರುಗಳಿಬ್ಬರ ಸಹಾಯಕ್ಕೆ ಅವರ ಪತಿದೇವರುಗಳು ನಿಂತು ಬಿಟ್ಟಿದ್ದಾರೆ. ಮೀನಾ ಕುಮಾರಿಯವರ ಯಜಮಾನರು ನರ್ಸಿಂಗ್ ಹೋಮ್‌ನಲ್ಲೇ ಇರುವ ಮೆಡಿಕಲ್ ಶಾಪು ನೋಡಿಕೊಳ್ಳುತ್ತಾರೆ. ನರ್ಸಿಂಗ್ ಹೋಮ್‌ಗೆ ಬರುವ ರೋಗಿಗಳು ಔಷಧಿಗಳನ್ನೆಲ್ಲಾ ಇಲ್ಲೇ ಖರೀದಿ [illegible]




ರೋಗಿಗಳ ರಕ್ತಹೀರುವ ನರ್ಸಿಂಗ್ ಹೋಂಗಳು

ಚಿಕಂಗುನ್ನಿಯಾ ಎಂಬ ಕಾಯಿಲೆ

ಕಳೆದ ಎರಡು ತಿಂಗಳಿಂದ ತಾಲ್ಲೂಕಿನಾದ್ಯಂತ ಜನರನ್ನು ಆವರಿಸಿರುವ ಚಿಕಂಗುನ್ನಿಯಾ ಅವರನ್ನು ಜರ್ಝರಿತನ್ನಾಗಿಸಿದೆ. ಈಗ ರಾಜ್ಯ ವ್ಯಾಪಿಯಾಗುತ್ತಿರುವ ಈ ಜ್ವರದ ನಿಯಂತ್ರಣಕ್ಕೆ ನಮ್ಮ ಹೊಣೆಗೇಡಿ ಸರ್ಕಾರ ಕೈಗೊಂಡಿರುವ ಕ್ರಮಗಳು ಏನೇನೂ ಸಾಲುತ್ತಿಲ್ಲ. ಪಾವಗಡದಲ್ಲಿ ಮೊದಲೇ ಜನರ ರಕ್ತ ಹೀರುತ್ತಿದ್ದ ಖಾಸಗಿ-ಸರ್ಕಾರಿ ವೈದ್ಯರುಗಳಿಬ್ಬರಿಗೂ ಚಿಕಂಗುನ್ನಿಯಾ ಜಾಕ್‌ಪಾಟ್ ಆಫರ್‌ನಂತೆ ಬಂದಿದೆ. ಪ್ರತಿರೋಗಿಯ ಚಿಕಿತ್ಸೆಗೆ ಒಂದೂವರೆಯಿಂದ ಎರಡು ಸಾವಿರ ರೂಪಾಯಿ ಖರ್ಚಾಗುತ್ತದೆ. ಎಷ್ಟೋ ಕುಟುಂಬಗಳಲ್ಲಿ ಇಡೀ ಮನೆಯ ಸದಸ್ಯರಿಗೆ ಈ ರೋಗ ಬಂದು ಸಾವಿರಾರು ರೂಪಾಯಿ ಸಾಲ ಮಾಡಿಕೊಂಡಿದ್ದಾರೆ. ತಾಲ್ಲೂಕಿನ ಪ್ರಮುಖ ವಾಣಿಜ್ಯ ಬೆಳೆ ಶೇಂಗಾ ಬೆಳೆಯ ನಷ್ಟದಿಂದ ಕಂಗಾಲಾಗಿದ್ದ ಜನ ಈಗ ಚಿಕಂಗುನ್ನಿಯಾ ಎಂಬ ರೋಗದ ಸಹವಾಸದಿಂದ ಸಾವಿರಾರು ರೂಪಾಯಿ ಸಾಲ ಮಾಡಿಕೊಂಡು ಬರ್ಬಾದಾಗಿದ್ದಾರೆ. ನರ್ಸಿಂಗ್ ಹೋಮುಗಳ ಡಾಕ್ಟರು, ಸರ್ಕಾರಿ ಡಾಕ್ಟರು, ಅರ್ಧಂಬರ್ಧ ವೈದ್ಯಕೀಯ ವೃತ್ತಿ ಕಲಿತವರು, ಎಲ್ಲರೂ ಕಂತೆಗಟ್ಟಲೇ ಹಣ ಪೇರಿಸಿಟ್ಟುಕೊಳ್ಳುತ್ತಿದ್ದಾರೆ. ಮೆಡಿಕಲ್ [illegible]

—[illegible]

ಕಂಬ ಕಾಣೆಯಾದರೂ ಕೋಮುಹಿಂಸೆ!



ಸರ್ಕಾರಿ ಹಾಡಿಯ ನಾಗಬನದಲ್ಲಿದ್ದ ಜಟಕ ದೇವರ ಕಂಬಗಳು ರಾತ್ರೋರಾತ್ರಿ, ಕಾಣೆಯಾದ ಹಿನ್ನೆಲೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ನಗರ ಕನಿಷ್ಠ ಒಂದು ವಾರ ಕಾಲ ಕೋಮುಹಿಂಸೆಗೆ ಸಾಕ್ಷಿಯಾಯಿತು. ಸಾವು-ನೋವಿಗೆ ಮತ್ತು ಆಸ್ತಿ-ಪಾಸ್ತಿ ನಷ್ಟಕ್ಕೆ ಕಾರಣವಾಗಿ ಇದೀಗ ಶಾಂತಿ ಮರುಕಳಿಸುತ್ತಿರುವ ಬೆನ್ನಿಗೆ ರಾಷ್ಟ್ರೀಯ ಹಿಂದೂ ಸೇನೆಯ ಖಳನಾಯಕ, ಕೊಳಕು ಬಾಯಿಯ ಪ್ರಮೋದ ಮುತಾಲಿಕ್ 'ಭಟ್ಕಳ ಚಲೋ' ಎಂಬ ಕೋಮು ಪ್ರಚೋದನಾಕಾರಿ ಕಾರ್ಯಕ್ರಮ ಘೋಷಿಸಿದ್ದಾನೆ.

ಹಿನ್ನೆಲೆ

ಭಟ್ಕಳದ ಮಕ್ದೂಮ್ ಕಾಲನಿಯ ಬಂದರು ರಸ್ತೆಯಲ್ಲಿರುವ ಸರ್ಕಾರಿ ಹಾಡಿಯೊಂದರಲ್ಲಿ ನಾಗಬನವಿದೆ. ಭಟ್ಕಳ ಪುರಸಭೆಯ ಸರ್ವೆ ನಂಬರ್ 418 ರಲ್ಲಿದೆ ಈ ನಾಗಬನ. ಎಡಿಬಿ ನಿರ್ಮಿಸಿದ ಕುಡಿಯುವ ನೀರಿನ ಯೋಜನೆಯ ಕಟ್ಟಡ ಇಲ್ಲಿದ್ದು ಪುರಸಭೆಯು ಕಟ್ಟಡ ಸುತ್ತ ತಂತಿ ಬೇಲಿ ನಿರ್ಮಿಸುವ ಕೆಲಸ ಆರಂಭಿಸಿತ್ತು.

ನಾಗಬನದ ಜಟಕ ದೇವರ ಕಂಬವಿರುವ ಸ್ಥಳವನ್ನು ಒಳಪಡಿಸಿ ತಂತಿ ಬೇಲಿ ಹಾಕುವ ಪುರಸಭೆಯ ಕೆಲಸವನ್ನು ಕೆಲವು ಹಿಂದೂತ್ವವಾದಿಗಳು ವಿರೋಧಿಸಿದರು. ಈ ಜನರು ತಮ್ಮ ಆಕ್ಷೇಪವನ್ನು ದಾಖಲಿಸಿ ಮುಂದಿನ ಮಾತುಕತೆಯವರೆಗೆ ಕಾದು ಕುಳಿತಿದ್ದರೆ ಸಮಸ್ಯೆಯಾಗುತ್ತಿರಲಿಲ್ಲ, ತಂತಿ ಬೇಲಿ ಹಾಕುವುದನ್ನು ವಿರೋಧಿಸಿದ ಮಂದಿ ಸರ್ಕಾರಿ ಹಾಡಿಯಲ್ಲಿದ್ದ ನಾಗಬನದ ಸುತ್ತ ಹೊಸದಾಗಿ ಕಂಪೌಂಡ್ ನಿರ್ಮಿಸಲು ಅಡಿಪಾಯ ಹಾಕುವ ಕಾರ್ಯಕ್ಕೆ ಕೈ ಹಾಕಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಪುರಸಭೆಯ ಮುಖ್ಯಾಧಿಕಾರಿ ಹಾಗೂ ಉಪಾಧ್ಯಕ್ಷ ಇನಾಯತುಲ್ಲಾ ಶಾಬಂದ್ರಿ ಸ್ಥಳಕ್ಕೆ ಭೇಟಿ ನೀಡಿ ಅಡಿಪಾಯ ನಿರ್ಮಿಸುವ ಕೆಲಸವನ್ನು ನಿಲ್ಲಿಸಿದರು ಮಾತ್ರವಲ್ಲ, ಸಹಾಯಕ ಕಮಿಷನರ್ ಹಾಗೂ ತಹಶೀಲ್ದಾರ್‌ರವರನ್ನು ಕರೆಸಿ ಮಾತುಕತೆ ನಡೆಸಿದರು. ಈ ಮಾತುಕತೆಯಲ್ಲಿ ಏಪ್ರಿಲ್ 31 ಕ್ಕೆ ಸಭೆ ಕರೆಸಿ ವಿವಾದವನ್ನು ಮಾತುಕತೆಯ ಮೂಲಕ ಸೌಹಾರ್ದಯುತವಾಗಿಯೇ ಬಗೆಹರಿಸುವುದಾಗಿ ತೀರ್ಮಾನಿಸಲಾಗಿತ್ತು.

> ಸರ್ಕಾರಿ ಹಾಡಿಯ ನಾಗಬನದಲ್ಲಿದ್ದ ಜಟಕ ದೇವರ ಕಂಬಗಳು ರಾತ್ರೋರಾತ್ರಿ ಕಾಣೆಯಾದ ಹಿನ್ನೆಲೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ನಗರ ಕನಿಷ್ಠ ಒಂದು ವಾರ ಕಾಲ ಕೋಮು ಹಿಂಸೆಗೆ ಸಾಕ್ಷಿಯಾಯಿತು. ಇಷ್ಟೆಲ್ಲ ಸಾವು-ನೋವಿನ ಬೆನ್ನಲ್ಲೇ ರಾಷ್ಟ್ರೀಯ ಹಿಂದೂ ಸೇನೆಯ ಖಳನಾಯಕ, ಕೊಳಕು ಬಾಯಿಯ ಪ್ರಮೋದ ಮುತಾಲಿಕ್ 'ಭಟ್ಕಳ ಚಲೋ' ಎಂಬ ಕೋಮು ಪ್ರಚೋದನಕಾರಿ ಕಾರ್ಯಕ್ರಮ ಘೋಷಿಸಿದ್ದಾನೆ.

ನಾಗಬನದ ವಿವಾದ ಸೌಹಾರ್ದ ಯುತವಾಗಿ ಬಗೆಹರಿಯುವುದು ಕೋಮುವಾದಿಗಳಿಗೆ ಬೇಕಾಗಿರಲಿಲ್ಲ. ಏ. 31 ರಂದು ನಡೆಯಲಿದ್ದ ಸೌಹಾರ್ದಯುತ ಮಾತುಕತೆಗೆ ಮೊದಲೇ ಕೋಮು ಗಲಭೆ ಸ್ಫೋಟಿಸುವುದು ಅವರ ಉದ್ದೇಶವಾಗಿತ್ತು. ಇಂತಹ ಅಪಾಯಕಾರಿ ಸಂಚಿನ ಭಾಗವಾಗಿಯೇ ಏ. 28 ರ ರಾತ್ರಿ ನಾಗಬನದಲ್ಲಿದ್ದ ಜಟಕ ದೇವರ ಕಂಬವೊಂದು ನಿಗೂಢವಾಗಿ ಕಣ್ಮರೆ ಯಾಯಿತು.



ಕಂಬ ಕಾಣದಾದುದು ಪ್ರಚಾರಕ್ಕೆ ಬರಲು ಹೆಚ್ಚು ಸಮಯ ಹಿಡಿಯಲಿಲ್ಲ, ಕ್ಷಣಾರ್ಧದಲ್ಲಿ ಭಟ್ಕಳ ನಗರದಾದ್ಯಂತ ಸುದ್ದಿ ಹಬ್ಬಿತು. ಸಂಘ ಪರಿವಾರದ ಗೂಂಡಾಗಳು ರಸ್ತೆ ಮಧ್ಯೆಯೇ ಜಮಾಯಿಸಿದರು. ನಂತರ ನಡೆದ ಕುಕೃತ್ಯಗಳೇ ಇದೀ ಜನಜೀವನ ಮಾರಕವಾಗಿ ಪರಿಣಮಿಸಿದ್ದು.

ಹಿಂಸೆಗೆ ಚಾಲನೆ

ಭಟ್ಕಳ ಹಿಂಸೆಗೆ ಚಾಲನೆ ನೀಡಿದ ಕು... ಭಜರಂಗದಳಕ್ಕೆ ಸಲ್ಲುತ್ತದೆ. ಏ. 28 ರ ರಾತ್ರಿ ... ದೇವರ ಕಂಬ ಕಾಣೆಯಾಯಿತೆನ್ನುವುದಕ್ಕೆ 29 ರ ಬೆ... ಪೂರ್ವ ನಿಯೋಜಿತವೆಂಬಂತೆ ಜಮಾಯಿಸಿದ... ಜನರೂ ಭಜರಂಗ ದಳದವರೇ ಆಗಿದ್ದರು. ಭಟ್ಕ... ಸಂಶುದ್ದೀನ್ ಸರ್ಕಲ್ ಸುತ್ತಮುತ್ತ ಒಟ್ಟಾದ ಭಜರಂಗಿಗ... ಪೋಲೀಸ್‌ರೊಂದಿಗೆ ತೀವ್ರವಾದ ಮಾತಿನ ಚಕಮ... ಗಿಳಿದರು. ತಮ್ಮ ಹೊಲಸು ಬಾಯಿಯಲ್ಲಿ ಮು... ದ್ವೇಷವನ್ನು ಎಷ್ಟು ಸಾಧ್ಯವೋ ಅಷ್ಟು ... ಲಾರಂಭಿಸಿದರು. ಪೋಲೀಸರಿಗೆ ಬಿಸಿ ವಿರುತ್ತಿದ್ದಂತೆಯ... ಪರಿಸ್ಥಿತಿ ಉದ್ವಿಗ್ನತೆಯತ್ತ ಸಾಗಿತು.

ಬಂದರು ರಸ್ತೆಯಲ್ಲಿ ಹಾದು ಹೋಗುತ್ತಿದ್ದ ಆಟೋ ರಿಕ್ಷಾವನ್ನು ಗುಂಪೊಂದು ತಡೆದು ನಿಲ್ಲಿಸಿತು. ರಿ... ಚಾಲಕ ಜಟ್ಟಪ್ಪ ನಾಯ್ಕ ಎಂಬುವವರನ್ನು ಕೆಳಗಿ... ಥಳಿಸಿದ ಜನರು ಆಟೋವನ್ನು ಕೆಳಗುರುಳ... ಹಾನಿಗೊಳಿಸಿದರು.

ಇತ್ತ ಸಂಶುದ್ದೀನ್ ಸರ್ಕಲ್‌ನಲ್ಲಿ ಗುಂಪು ಸೇರಿ... ಜನರು ಸಿಕ್ಕಸಿಕ್ಕಿದ ವಾಹನ ಮತ್ತು ಅಂಗಡಿಗಳ ಮೇಲೆ... ಸೋಡಾ ಬಾಟಲಿ, ಕಲ್ಲು ಇತ್ಯಾದಿಗಳನ್ನೆಸೆ... ನಾಶಪಡಿಸಲಾರಂಭಿಸಿದರು.

ಈ ಎರಡು ಘಟನೆಗಳ ಬೆನ್ನಿಗೆ ಊರಿ... ನಿರ್ಜನವಾಗಲಾರಂಭಿಸಿತು. ಜನ ದಿ... ಪಾಲಾಗಿ ಓಡತೊಡಗಿದರು. ಅಂಗಡಿ ಮು... ಟ್ಟುಗಳು ಬಂದ್ ಆದವು. ... ಮನೆಯೊಳಗೆ ಸೇರಿ ಬಾಗಿಲು ಭದ್ರಪಡಿ... ತೊಡಗಿದರು.

ಈ ಸಂದರ್ಭದಲ್ಲಿ ಭಜರಂಗಿಗ... ಆರ್ಭಟ ಎಷ್ಟಿತ್ತೆಂದರೆ ಅವರು ಸ್ಥಳೀಯ... ಅಂಜುಮಾನ್ ಶಾಲೆಗೆ ಸೇರಿದ ವಿದ್ಯಾರ್ಥಿಗ... ವಾಹನವನ್ನೂ ಬಿಡಲಿಲ್ಲ, ಅದಕ್ಕೂ ಕಲ್ಲೆಸೆದ... ಹಾನಿಗೊಳಿಸಿದರು. ಇದರಿಂದಾಗಿ ವಿದ್ಯಾರ್ಥಿ... ಸಮೂಹವೇ ಭಯ ಭೀತಿಗೊಳಗಾಯಿತು. ವಾಹ... ಗಳಿಲ್ಲದ ಕಾರಣ ದ್ವಿತೀಯ ಪಿಯುಸಿ ಪರೀಕ್ಷೆ ಬರೆಯ... ಬೇಕಾಗಿದ್ದ ವಿದ್ಯಾರ್ಥಿಗಳು ಪಟ್ಟ ಪಡಿಪಾಟಲ... ಅಷ್ಟಿಷ್ಟಲ್ಲ.

ಕೋಲಾರ : ಹಾಲು ಉತ್ಪಾದಕರ ಬೆನ್ನಿಗಿಕ್ಕಿದ ಗುಳುಂ ಗೋವಿಂದ!

ಕೋಲಾರದ ಹಾಲು ಉತ್ಪಾದಕ ರೈತರು ಭವಿಷ್ಯದ ದೃಷ್ಟಿಯಿಂದ ಒಂದೆಡೆ ಹೋರಾಟಕ್ಕೆ ಅಣಿಯಾಗುತ್ತಿದ್ದರೆ, ಮತ್ತೊಂದೆಡೆ ಜೆಡಿಎಸ್‌ನ ಬ್ಯಾಲಹಳ್ಳಿ ಗೋವಿಂದಗೌಡ ಮತ್ತವನ ಪಟಾಲಂ ಖಾಸಗಿ ಡೇರಿಗಳ ಅಧಿಕಾರಿ ವರ್ಗದ ಜೊತೆ ಅಂತಿಮ ಚರ್ಚೆ ನಡೆಸಿ ಮುಖದಲ್ಲಿ ಮಂದಹಾಸ ಮೂಡಿಸಿಕೊಂಡಿರುವ ಸುದ್ದಿ ಬಂದಿದೆ.

ಕೃಷಿಕರ ನಾಮವನ್ನು ಜಪಿಸುತ್ತಲೇ ಬೆಳಕಿಗೆ ಬರಲು ಯತ್ನಿಸುತ್ತಿರುವ ಬ್ಯಾಲಹಳ್ಳಿ ಗೋವಿಂದಗೌಡ ಕೋಲಾರದಲ್ಲಿನ ಕೆಲವು ಭ್ರಷ್ಟ ಸರ್ಕಾರಿ ಅಧಿಕಾರಿಗಳ ಜೊತೆ ಉಂಡಿದ್ದೂ, ನಿಷ್ಠಾವಂತರಿಂದ ಉಗಿಸಿಕೊಂಡಿದ್ದೂ ಆಗಿದೆ. ಈಗ ಒಂದು ಹೆಜ್ಜೆ ಮುಂದೆ ಹೋಗಿರುವ 'ಗುಳುಂ' ಗೋವಿಂದಗೌಡ ಬಂಡವಾಳ ಶಾಹಿಗಳ ಜೊತೆ ಸೇರಿಕೊಂಡು ಕಸರತ್ತು ನಡೆಸಿದ್ದಾನೆ. ಎಂಜಲು ಕಾಸಿಗಾಗಿ ಉತ್ತಮ ಉದ್ದೇಶದ ಒಂದು ಚಳವಳಿಯ ಕುತ್ತಿಗೆಯನ್ನು ಹಿಸುಕಲು ಹೊರಟಿರುವ 'ಗುಳುಂ' ಗೋವಿಂದಗೌಡನ ಹಿಕ್ಮತ್ತನ್ನು ತಿಳಿದುಕೊಂಡು ಹೋರಾಟಗಾರರ ಒಂದು ದಣ ಛೀಕರಿಸುತ್ತಿದೆ. ಆದರೂ, ಲಜ್ಜೆಯಿಲ್ಲದ ಗೋವಿಂದಗೌಡ ಇದೇ ಕಾಯಕವನ್ನು ಮುಂದುವರೆಸಿದ್ದಾನೆ.




ರುದ್ರಸ್ವಾಮಿ

ಕೋಲಾರ ಜಿಲ್ಲೆಯ ಅನುಕೂಲವಂತ ರೈತರಿಗೆ ರೇಷ್ಮೆ ವ್ಯಾಪಾರ ಮತ್ತು ಮಧ್ಯಮ ವರ್ಗದ ಕೃಷಿಕರ ಪಾಲಿಗೆ ಹಾಲು ವ್ಯಾಪಾರ ಜೀವನಾಧಾರವಾಗಿದೆ. ಕೆಲವು ವರ್ಷಗಳ ಹಿಂದೆ ಕೇಂದ್ರ, ಸರ್ಕಾರ ಜಾರಿಗೆ ತಂದ ನೀತಿಯಿಂದಾಗಿ ಖಾಸಗಿ ಹಾಲು ಡೈರಿಗಳು ಜಿಲ್ಲೆಗೆ ದಾಳಿ ಇಟ್ಟವು. ಹಾಲು ಉತ್ಪಾದಕರ ಹಿತಾಸಕ್ತಿ ಕಾಪಾಡುವ ಸಲುವಾಗಿ ಅಸ್ತಿತ್ವಕ್ಕೆ ಬಂದ ಸಹಕಾರಿ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘ (ಕೋಮುಲ್) ಬರೀ ಹಗರಣಗಳಲ್ಲಿ ಮುಳುಗಿದ ಪರಿಣಾಮವಾಗಿ ಖಾಸಗಿ ಡೈರಿಗಳು ಜಿಲ್ಲೆಯಲ್ಲಿ ಮಾರುಕಟ್ಟೆಯನ್ನು ವಿಸ್ತರಿಸಿಕೊಂಡು ಬೇರೂರಿದವು. ಇದೆಲ್ಲದರ ಫಲಿತಾಂಶವಾಗಿ ಕೋಮುಲ್ ನಷ್ಟದ ಹಾದಿಯೆಡೆಗೆ ಸಾಗಿದೆ.

ಕೋಮುಲ್‌ನ ಆಡಳಿತ ಮಂಡಳಿಯಲ್ಲಿನ ಕೀಳು ಮಟ್ಟದ ರಾಜಕೀಯ, ಪುರಾತನ ಕಾಲದ ತಗಡು ನಿಯಮಗಳಿಂದ ಬೇಸತ್ತ ಜಿಲ್ಲೆಯ ಹಾಲು ಉತ್ಪಾದಕ ರೈತರು ಖಾಸಗಿ ಡೈರಿಗಳೆಡೆಗೆ ಆಕರ್ಷಿತ ರಾಗುವ ಅಪಾಯ ಬಂದೊದಗಿರುವುದು ಖರೆ. ಬಡರೈತರ ಅಸಹಾಯಕತೆಯನ್ನೂ ಹಾಗೂ ಗ್ರಾಮೀಣ ಪ್ರದೇಶದಲ್ಲಿನ ರಾಜಕೀಯ ವೈರುಧ್ಯಗಳನ್ನು ಏಕಕಾಲಕ್ಕೆ ಬಂಡವಾಳವಾಗಿಸಿಕೊಂಡು ತಮ್ಮ ಅಸ್ತಿತ್ವವನ್ನು ಬಲಪಡಿಸಿಕೊಳ್ಳುವ ಖಾಸಗಿ ಡೈರಿಗಳ ಮಾಲೀಕರ ಪ್ರಯತ್ನ ಜಿಲ್ಲೆಯಾದ್ಯಂತ ಎಗ್ಗಿಲ್ಲದೆ ಸಾಗುತ್ತಿದೆ. ಹೆಚ್ಚಿನ ದರ ಹಾಗೂ ಸಾಲ ನೀಡುವ ಆಮಿಷಗಳಿಂದ ಹಾಲು ಉತ್ಪಾದಕರನ್ನು ತಮ್ಮೆಡೆಗೆ ಸೆಳೆಯುತ್ತಿರುವ ಖಾಸಗಿ ಡೇರಿಗಳಿಂದಾಗಿ ಹಾಲು ಉತ್ಪಾದಕ ಸಹಕಾರಿ ಸಂಘಗಳು ಬೋರಲು ಬೀಳುವ ದಿನಗಳು ಸಮೀಪಿಸುತ್ತಿವೆ. ಆನಂತರ ಬರಲಿರುವ ದುರ್ದಿನಗಳಿಂದ ಕೃಷಿಕರು ತಪ್ಪಿಸಿಕೊಳ್ಳಲು ಚಳವಳಿ ಅಗತ್ಯವಿದೆ.

ಇದಿಷ್ಟೇ ವಿಷಯವನ್ನು ಮುಂದಿಟ್ಟುಕೊಂಡ ಗೋವಿಂದಗೌಡ ಖಾಸಗಿ ಡೈರಿಗಳ ವಿರುದ್ಧ ಹೋರಾಟ ನಡೆಸುವುದಾಗಿ ಒಂದು ತಿಂಗಳ ಹಿಂದೆ ಪತ್ರಿಕಾ ಗೋಷ್ಠಿ ನಡೆಸಿದ. ಹಾಲು ಉತ್ಪಾದಕರ ಸಂಕಷ್ಟದ ತೀವ್ರತೆಯನ್ನು ಅರ್ಥ ಮಾಡಿಕೊಂಡಿರುವ ಇಲ್ಲಿನ ಪತ್ರಕರ್ತರು



ಗೋವಿಂದೇಗೌಡ

ಪ್ರಾಮಾಣಿಕವಾಗಿ ಸ್ಪಂದಿಸಿ ಹೆಚ್ಚಿನ ಪ್ರಚಾರ ಒದಗಿಸಿದರಲ್ಲದೆ, ಗೋವಿಂದಗೌಡನನ್ನು ಪಕ್ಕಕ್ಕೆ ಕರೆದು ಈ ಹೋರಾಟದಲ್ಲಿಯಾದರೂ ಪರಿಶುದ್ಧನಾಗಿರು ಎಂದು ಕಿವಿ ಮಾತೂ ಹೇಳಿದರು. ಜಿಲ್ಲೆಯಿಂದ ಕಂಬಿ ಕೀಳಲು ಖಾಸಗಿ ಡೇರಿಗಳಿಗೆ ಹದಿನೈದು ದಿನಗಳ ಡೆಡ್‌ಲೈನ್ ವಿಧಿಸಿದ 'ಗುಳುಂ' ಗೋವಿಂದ, ಇಪ್ಪತ್ತು ದಿನಗಳಾದ ನಂತರ ಸಹಕಾರಿ ಸಂಘ-ಸಂಸ್ಥೆಗಳ ಗಣ್ಯರು ಭಾಗವಹಿಸಿ ಸಲಹೆ ನೀಡುವಂತೆ ಚರ್ಚಾ ಸಭೆಯನ್ನು ಏರ್ಪಡಿಸಿದ. ಮಾ. 20 ರಂದು ಜಿಲ್ಲಾ ಸಹಕಾರಿ ಯೂನಿಯನ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಚರ್ಚಾ ಸಭೆಯಲ್ಲಿ ಹಾಜರಿದ್ದ ಅನೇಕ ಸಹಕಾರಿ ಮುಖಂಡರು 'ಗುಳುಂ' ಗೋವಿಂದನ ವಿರುದ್ಧ ಅಕ್ಷರಶಃ ತಿರುಗಿಬಿದ್ದಿದ್ದರು.

ಹಾಲು ಉತ್ಪಾದಕರ ಹಿತಾಸಕ್ತಿಯನ್ನು ಕಾಪಾಡು... ವುದಾಗಿ ಜಿಲ್ಲಾ ರೈತ ಹಿತರಕ್ಷಣಾ ವೇದಿಕೆಯ ಕಾಯ... ದರ್ಶಿ ಹೆಸರಿನಲ್ಲಿ ಬೀದಿಗೆ ಬಂದಿದ್ದ 'ಗುಳುಂ' ಗೋವಿಂದಗೌಡನ ಮೈಯಿಂದ ಖಾಸಗಿ ಡೈರಿಗ... ಮಾಲೀಕರಿಂದ ಬೇಡಿ ಪಡೆದಿರುವ ಭಿಕ್ಷೆಯ ವಾಸ... ಬಡಿಯುತ್ತಿತ್ತು. ಜಿಲ್ಲೆಯಿಂದ ಹೊರಡಬೇಕೆಂದ... ಸುದ್ದಿಗೋಷ್ಠಿಯಲ್ಲಿ ಖಾಸಗಿ ಡೈರಿಗಳ ವಿರುದ್ಧ ಫರ್ಜಿ... 'ಗುಳುಂ' ಗೋವಿಂದ ಚರ್ಚೆಯುದ್ದಕ್ಕೂ ನಾಜೂ... ವರ್ತಿಸಿದ್ದು ಇದಕ್ಕೆ ಪುಷ್ಟಿ ನೀಡಿತ್ತು, 'ಗುಳುಂ' ಗೋವಿಂ... ಇತ್ತೀಚೆಗೆ ನಡೆಸುತ್ತಿರುವ ಆಟಾಟೋಪಗಳಿಂದ ಬೇಸ... ವೇದಿಕೆಯ ಚಟುವಟಿಕೆಗಳಿಂದ ದೂರಾಗಿರು... ವೇದಿಕೆಯ ಅಧ್ಯಕ್ಷ ಮೂರಾಂಡಹಳ್ಳಿ ಗೋಪಾಲ... ಸಭೆಗೆ ಗೈರು ಹಾಜರಾಗಿದ್ದುದು ಅನುಮಾನವನ್ನು ಖಚಿಪಡಿಸಿತ್ತು. ಹಾಲು ಉತ್ಪಾದಕರ ಏಳಿಗೆಗಾ... ಅವಿರತವಾಗಿ ಶ್ರಮಿಸುತ್ತಿರುವ ಜಿಲ್ಲಾ ಹಾಲು ಉತ್ಪಾದ... ರೈತ ಸಂಘದ ಉರಿಗಿಲಿ ರುದ್ರಸ್ವಾಮಿ ಹಾಗೂ ಅಬ್ಬ... ಶಂಕರ್ ಸಹ 'ಗುಳುಂ' ಗೋವಿಂದನ ದುರುದ್ದೇಶವನ್ನು ಗ್ರಹಿಸಿದ್ದರು. ಬೆಳ್ಳಂಬರಿ ನಾಗರಾಜ್ ಅಂತೂ ಕೃಷಿಕ... ಹೆಸರೇಳಿಕೊಂಡು ಹೋರಾಟವನ್ನು ಅರ್ಧಕ್ಕೆ ಕೈಬಿಟ್ಟ... ಕಲ್ಲೇಟು ಬೀಳುತ್ತವೆ ಎಂದು ನೇರವಾಗಿಯೇ ಎಚ್ಚರಿಸಿದರು.

ಚರ್ಚಾಸಭೆಯ ತಿರುಳನ್ನು ಅರ್ಥ ಮಾಡಿಕೊಂ... 'ಗುಳುಂ' ಗೋವಿಂದ, ಹೈನೋದ್ಯಮದ ಚಳವಳಿಯನ್ನು ತೀವ್ರ ಸ್ವರೂಪಕ್ಕೆ ಕೊಂಡೊಯ್ಯಲು ಜಿಲ್ಲೆಯ ಜನಪ್ರತಿನಿಧಿಗಳ ಮಾರ್ಗದರ್ಶನ ಅವಶ್ಯವಾಗಿದೆ. ಈ ಸಂಬಂಧವಾಗಿ ಸಮಿತಿಯೊಂದನ್ನು ರಚಿಸಿ ಮುಂದಿನ ಕಾರ್ಯಾಚರಣೆಯನ್ನು ರೂಪಿಸುವುದು ಸೂಕ್ತ ಎಂಬ ಸಲಹೆಯನ್ನು ತನ್ನ ಚೇಲಾಗಳಿಂದ ಹೇಳಿ... ಕೈತೊಳೆದುಕೊಂಡು ಮುಂದಿನ ಮಿಕದ ಬೇಟೆಗಾಗಿ ಎದ್ದುಹೋದ. ನಂತರ ಈ ವಿಷಯದಲ್ಲಿ ಗೋವಿಂದ... ಗೌಡ ಮಾಡಿರುವ ಅಪರಾ-ತಪರಾಗಳ ಬಗೆಗೆ ... ತುಂಬ ಚರ್ಚೆಯಾಗಿದೆ. ಜಿಲ್ಲೆಯ ಮಾರುಕಟ್ಟೆಯಲ್ಲಿ ವಹಿವಾಟು ನಡೆಸುತ್ತಿರುವ ನಾಲ್ಕೈದು ಖಾಸಗಿ ಡೈರಿಗಳಿಂದ ಲಕ್ಷಗಳನ್ನು ಪೀಕುವ ಉದ್ದೇಶದಿಂ...

ಭಟ್ಕಳದಲ್ಲಿ ನಡೆದ ಘಟನೆಯನ್ನು ವಿಸ್ತಾರ ...ಸಲೋ ಎಂಬಂತೆ ಐಟ್ಕಪ್ಪ ಹಾಗೂ ಧರ್ಮ ...ವನ ನೇತೃತ್ವದಲ್ಲಿದ್ದ ಗುಂಪೊಂದು ಮುರ್ಡೇಶ್ವರದ ...ಸ್ಥಾನದ ಬಳಿ ಶೇಖ್ ಯಾಸೀನ್ ಎಂಬುವರ ... ಮಾರಣಾಂತಿಕ ಹಲ್ಲೆ ನಡೆಸಿತು.

...ರಾಷ್ಟ್ರೀಯ ಹಿಂದೂ ಸೇನೆಯು ಉಡುಪಿ ಜಿಲ್ಲಾ ...ಗೂ ಕರೆಕೊಟ್ಟಿತು. ಆದರೂ ಹಿಂಸೆ ...ವೆಗೆ ವ್ಯಾಪಿಸದೆ ಕೋಮುವಾದಿಗಳ ...ಕ್ರಿಯನ್ನು ಹುಸಿಗೊಳಿಸಿತು.



...ಭಟ್ಕಳದ ಹಿಂಸಾಚಾರ ಮುರ್ಡೇಶ್ವರಕ್ಕೆ ...ರಗೊಳ್ಳುತ್ತಿದ್ದಂತೆಯೇ ನಿಷೇದಾಜ್ಞೆ ...ಲಾಯಿತು. ಈ ನಿಷೇದಾಜ್ಞೆಯ ...ಯೇ ಹಿಂಸೆ ಮುಂದುವರಿಯಿತು. ...ನ ಅಂಗಡಿಯನ್ನು ಮುಚ್ಚಿ ಓಡಲು ...ವಾಗುತ್ತಿದ್ದ ಮಂಡಳ್ಳಿಯ ಶ್ರೀಧರ ...ಸ್ತ ನಾಯ್ಕ ಎಂಬವರನ್ನು ಹಿಂಭಾಗದಿಂದ ಬಂದ ...ರ್ಮಿಗಳ ತಂಡವೊಂದು ಚಾಕುವಿನಿಂದ ತಿವಿದು ...ದು ಹಾಕಿತು.

...ನ ರ್ಝ್ಯುನುಲ್ ಆದಿದೀನ್ ಎಂಬುವರ ಸಹಿತ ...ರ ಮನೆಗಳಿಗೆ ಬೆಂಕಿ ಕೊಟ್ಟು ನಾಶ ...ಲಾಯಿತು. ಈಶ್ವರ ನಾಯ್ಕ, ವಿಠ್ಠಲ ನಾಯ್ಕ, ...ದ್ ನಗರದ ಮುನೀರ್, ಶ್ರೀಮತಿ ಕುಬ್ನಾ ಹಾಗೂ ...ು ಮಗಳು ಗಂಭೀರವಾಗಿ ಗಾಯಗೊಂಡಿದ್ದಾರೆ.



...ಇವರಲ್ಲಿ ಮುನೀರ್ ಅವರ ಸ್ಥಿತಿ ...ಜನಕವಾಗಿದೆ. ತೀವ್ರವಾಗಿ ಗಾಯ ...ಡ ಮುನೀರ್‌ರವರನ್ನು ಹಿಂದೂ ...ಧವರೇ ಕುಂದಾಪುರ ಆಸ್ಪತ್ರೆಗೆ ಸಾಗಿಸಿ ...ಲಿಸಿದರು.

...ಭಟ್ಕಳ ಹಿಂಸಾಚಾರದಲ್ಲಿ ಗಾಯಗೊಂಡ ...ೀರ್ ಕುಂದಾಪುರದಲ್ಲಿ ದಾಖಲಾಗಿರು ...ನ್ನು ತಿಳಿದುಕೊಂಡ ಭಜರಂಗಿ ಪಡೆ ...ಯಲ್ಲಿ ವೈದ್ಯರನ್ನು ಚಿಕಿತ್ಸೆ ನೀಡಿದ್ದಕ್ಕೆ ...ಸಿತು. ಬಳಿಕ ಕುಂದಾಪುರ ಆಸ್ಪತ್ರೆಯಲ್ಲಿ ... ಪಡೆಯುವುದು ಅಪಾಯವೆಂದು ...ಗಂಡ ವೈದ್ಯರು ಮುನೀರ್‌ರವರನ್ನು ...ಗಳೂರು ಆಸ್ಪತ್ರೆಗೆ ಸಾಗಿಸುವಂತೆ ಸೂಚಿಸಿದರು. ...ಕುಂದಾಪುರದಿಂದ ಆಂಬುಲೆನ್ಸ್ ಮೂಲಕ ...ಗಳೂರಿಗೆ ಸಾಗಿಸುತ್ತಿದ್ದಾಗ ರಾಷ್ಟ್ರೀಯ ಹೆದ್ದಾರಿ 17 ರಲ್ಲಿ ಕೋಳೂರು ಬಳಿ ವಾಹನವನ್ನು ತಡೆದು ಮತ್ತೆ ಗಾಯಾಳುವಿನ ಮೇಲೆ ಆಕ್ರಮಣ ನಡೆಸಲು ಯತ್ನಿಸಿದರು. ಆದರೆ ವಾಹನ ಚಾಲಕನ ಚಾಕಚಕ್ಯತೆಯ ಕಾರಣ ಹೆಚ್ಚಿನ ಅನಾಹುತ ತಪ್ಪಿತು.

ಗಾಯಾಳು ಮುನೀರ್‌ರವರನ್ನು ಭಟ್ಕಳದಿಂದ ಕುಂದಾಪುರದವರೆಗೆ ಸಾಗಿಸಿ ಆಸ್ಪತ್ರೆಗೆ ದಾಖಲಿಸಿದವರೂ ಹಿಂದೂಗಳೇ. ಕೋಳೂರಿನಲ್ಲಿ ವಾಹನವನ್ನು ತಡೆದು ಪುನಃ ಹಲ್ಲೆ ನಡೆಸಲು ಯತ್ನಿಸಿದ್ದೂ ಹಿಂದೂಗಳೇ. ಕೋಮುವಾದಿ ಮತ್ತು ಮಾನವತಾವಾದಿ ಹಿಂದೂಗಳೊಳಗಿನ ವ್ಯತ್ಯಾಸಕ್ಕೆ ಈ ಘಟನೆ ಸಾಕ್ಷಿಯಾಗಿದೆ.

ಶಾಂತಿ ಸಭೆ

ಈ ಎಲ್ಲಾ ಘಟನೆಗಳ ನಡುವೆ ಭಟ್ಕಳದಲ್ಲಿ ಪೋಲೀಸ್ ಅಧಿಕಾರಿಗಳು ಶಾಂತಿ ಸಭೆಯೊಂದನ್ನು ಕರೆದರು. ಈ ಸಭೆಯಲ್ಲಿ ಸಂಘ ಪರಿವಾರದ ನಾಯಕರಾರೂ ಭಾಗವಹಿಸದೆ ತಮಗೆ ಶಾಂತಿ-ಸೌಹಾರ್ದ ಬೇಕಾಗಿಲ್ಲ; ಕೋಮು ಹಿಂಸೆಯೇ ಬೇಕೆನ್ನುವುದನ್ನು ಸ್ಪಷ್ಟಪಡಿಸಿದರು.


ಇದೇ ದಿನ ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ. ವಿ.ಎಸ್. ಆಚಾರ್ಯರು ಸಂಘ ಪರಿವಾರದ ನಾಯಕರೊಂದಿಗೆ ಮಾತ್ರ ಚರ್ಚಿಸಿ, ಶಾಂತಿ ಸಭೆಯಲ್ಲೂ ಪಾಲ್ಗೊಳ್ಳದೆ ಮರಳಿದರು. ಆ ಮೂಲಕ ತಾವು ಹಿಂದೂತ್ವವಾದಿಗಳಿಗೆ ಮಾತ್ರ ಸಚಿವರು, ಸರ್ವರಿಗಲ್ಲ ಎನ್ನುವುದನ್ನು ಬಹಿರಂಗಪಡಿಸಿದರು.

ಉಡುಪಿಯಲ್ಲೂ ಹಲ್ಲೆ

ಭಟ್ಕಳದಲ್ಲಿ ಕೋಮು ಹಿಂಸೆ ಉದ್ಭವಿಸುವ ಮೊದಲೇ ಭಟ್ಕಳ ಬಂದರನ್ನು ಬಿಟ್ಟು ಮೀನುಗಾರಿಕೆಗಾಗಿ ಕಡಲು ಸೇರಿದ್ದರು ಅನೇಕ ಮಂದಿ ಮುಸ್ಲಿಮರು. ಈ ಅಮಾಯಕ ಜನರು ಏ. 31 ರಂದು ಉಡುಪಿ ತಾಲ್ಲೂಕಿನ ಮಲ್ಪೆ ಬಂದರಿಗೆ ಬಂದಾಗ ಅವರ ಮೇಲೆಯೂ ಉಡುಪಿಯ ಭಜರಂಗಿಗಳು ಗಂಭೀರವಾಗಿ ಹಲ್ಲೆಗೈದರು.

ಹೆಸರು ಕೇಳಿಯೇ ಮಲ್ಪೆಯಲ್ಲಿ ಹಲ್ಲೆ ನಡೆಸಲಾಯಿತು. ತಪ್ಪೇ ಮಾಡಿದ ಭಟ್ಕಳ-ತೆಂಗಿನ ಗುಂಡಿಯ ಮುಹಮ್ಮದ್ ರಫೀಕ್, ಶಿರೂರಿನ ಅಬ್ದುಲ್ ಹಮೀದ್ ಹಾಗೂ ಮುರ್ಡೇಶ್ವರದ ಹಸನ್ ಗಾಯಗೊಂಡು ಮಂಗಳೂರು ಆಸ್ಪತ್ರೆ ಸೇರಬೇಕಾಗಿ ಬಂತು.

ನೀರಿನ ಮೇಲೂ ದ್ವೇಷ?



ಭಟ್ಕಳ ಪಟ್ಟಣಕ್ಕೆ ನೀರು ಸರಬರಾಜು ಮಾಡುವ ಕಡವಿನಕಟ್ಟಾ ಪಂಪ್ ಹೌಸ್‌ನಿಂದ ಬರುವ ನೀರಿನ ಕೊಳವೆ ಮಾರ್ಗವನ್ನು ಕೂಡಾ ಕಡವಿನಕಟ್ಟಾ ಬಳಿ ದುಷ್ಕರ್ಮಿಗಳು ಹಾನಿಗೊಳಿಸಿದ್ದರು.

ನ್ಯಾಯಾಲಯದ ಹಿಂಭಾಗದ ಹೌಸಿಂಗ್ ಬೋರ್ಡ್ ಕಾಲನಿಯ ಸಮೀಪವೂ ದುಷ್ಕರ್ಮಿಗಳು ವಿದ್ಯುತ್ ಸರಬರಾಜು ಸ್ಥಗಿತಗೊಳಿಸಿ ದ್ವೇಷದ ಕೆನ್ನಾಲಿಗೆ ಹೇಗೆಲ್ಲಾ ವ್ಯಾಪಿಸುತ್ತದೆ ಎನ್ನುವುದನ್ನು ಜಗಜ್ಜಾಹೀರು ಪಡಿಸಿದರು.

ಒಂದು ಹಂತದಲ್ಲಿ ಹಿಂಸಾಚಾರ ನಿಧಾನವಾಗಿ ಕಡಿಮೆಯಾಗಲಾರಂಭಿಸಿತು. ಆದರೆ ಅಷ್ಟು ಬೇಗ ಶಾಂತಿ ನೆಲೆಸುವುದನ್ನು ಕೆಲವರು ನಿರೀಕ್ಷಿಸಿರಲಿಲ್ಲ. ಪ್ರತಿಸಂಚು ಹೂಡಿದ ಆ ಜನ ಮಾರ್ಚ್ 2 ರಂದು ಖಲೀಫಾ ಮೊಹಲ್ಲಾದ ಚಟ್ನ ಮುಹಮ್ಮದ್ ಜಲೀಲ್ ಎಂಬವರ ಮೇಲೆ ಚೂರಿಯಿಂದ ತಿವಿದು ಗಾಯಗೊಳಿಸಿದರು.

ಇದು ನಡೆದದ್ದು ಜಲೀಲ್ ಮೀನು ಖರೀದಿಸುತ್ತಿದ್ದಾಗ. ಈ ಹೊತ್ತಿನಲ್ಲಿ ಜಲೀಲ್‌ರೊಂದಿಗೆ ಅವರ ಮಗಳೂ ಇದ್ದಳು. ಐದಾರು ಜನರ ತಂಡ ಜಲೀಲ್‌ರ ತಲೆಗೆ ಕತ್ತಿಯಿಂದ ಕಡಿದು ನಿರಂತರವಾಗಿ ಥಳಿಸುತ್ತಾ ಕೊಲ್ಲಲು ಪ್ರಯತ್ನಿಸಿತು. ಅಷ್ಟರಲ್ಲಿ ಸ್ಥಳಕ್ಕೆ ಪೋಲೀಸರು ಬಂದ ಕಾರಣ ದುಷ್ಕರ್ಮಿಗಳು ಓಟಕಿತ್ತರು. ಜಲೀಲ್ ಇದೀಗ ಮಣಿಪಾಲದ ಕೆಎಂಸಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬಂಧನ

ಹಿಂಸಾಚಾರ ಕಡಿಮೆಯಾಗುತ್ತಿದ್ದಂತೆಯೇ ಪೋಲೀಸರು ಹಲವರನ್ನು ಬಂಧಿಸಿದ್ದಾರೆ. ಅನೇಕರನ್ನು ಮುಚ್ಚಳಿಕೆ ಬರೆಸಿಕೊಂಡು ಬಿಡುಗಡೆಗೊಳಿಸಲಾಗಿದೆ. ಹತ್ತಾರು ಅಮಾಯಕರ ಮನೆಗಳಿಗೆ ಅಕ್ರಮವಾಗಿ ನುಗ್ಗಿ ಬೆದರಿಸುವ ಕೆಲಸ ಮಾಡಿದ್ದಾರೆ. ದಾಂಧಲೆ ನಡೆಸಿದ್ದಾರೆ ಮುಸ್ಲಿಂ ಮಹಿಳೆಯರ ಜತೆಗೂ ಅನುಚಿತವಾಗಿ ವರ್ತಿಸಿದ್ದಾರೆ. ಇದನ್ನು ಖಂಡಿಸಿ ಮುಸ್ಲಿಂ ಮಹಿಳೆಯರು ಠಾಣೆಯ ಮುಂಭಾಗದಲ್ಲಿ ಗುಂಪುಗೂಡಿ ಪ್ರತಿಭಟನೆ ಕೂಡಾ ನಡೆಸಿದ್ದಾರೆ.

ಭಟ್ಕಳ ಚಲೋ

ಹಿಂಸೆ ಸ್ಥಗಿತಗೊಂಡು ಶಾಂತಿ-ಸೌಹಾರ್ದ ನೆಲೆಗೊಳ್ಳುತ್ತಲೇ ರಾಷ್ಟ್ರೀಯ ಹಿಂದೂ ಸೇನೆ ಎಂಬ ಕೋಮುವಾದಿ ಸಂಘಟನೆಯ ಮೂರ್ಖ ನಾಯಕ ಮುತಾಲಿಕ್ 'ಭಟ್ಕಳ್ ಚಲೋ' ಎಂಬ ಕೋಮು ಪ್ರಚೋದನಕಾರಿ ಕಾರ್ಯಕ್ರಮ ನಡೆಸುವುದಾಗಿ ಘೋಷಿಸಿದ್ದಾನೆ.

ಏ. 10 ರಂದು 25 ಸಾವಿರ ಜನ ಸೇರಿಸುವುದಾಗಿ ಬೋಂಗು ಬಿಟ್ಟಿರುವ ಪ್ರಮೋದ್ ಮುತಾಲಿಕ್ ಮತ್ತೆ ಕೋಮು ಗಲಭೆಯಾಗಲು ಪೂರ್ವ ಸಿದ್ಧತೆಯಲ್ಲಿ ತೊಡಗಿದ್ದಾನೆ.

ಅಮಾಯಕರು ಸಾವು-ನೋವಿನಲ್ಲೂ, ಆಸ್ತಿ-ಪಾಸ್ತಿಗೆ ಹಾನಿಯಾಗಿ ನಷ್ಟವುಂಟಾದ ಸಂಕಟದಲ್ಲಿರುವಾಗಲೂ ಕೋಮು ದ್ವೇಷದ ಹಿನ್ನೆಲೆಯಲ್ಲಿ ಲಾಭ ನೋಡುತ್ತಿರುವ ಪ್ರಮೋದ್ ಮುತಾಲಿಕನನ್ನು ಉತ್ತರ ಕನ್ನಡ ಜಿಲ್ಲಾಡಳಿತ ಸಹಿಸುತ್ತಿರುವುದಾದರೂ ಹೇಗೆ?

ಏಪ್ರಿಲ್ 10 ರ 'ಭಟ್ಕಳ ಚಲೋ' ನಡೆಸಲು ರಾಜ್ಯದ ಜೆಡಿಎಸ್-ಬಿಜೆಪಿ ಸಮ್ಮಿಶ್ರ ಸರ್ಕಾರ ಅನುಮತಿ ನೀಡಿದ್ದೇ ಆದರೆ ಭಟ್ಕಳ ಮತ್ತೊಮ್ಮೆ ಹೊತ್ತಿ ಉರಿಯುವುದು ಖಂಡಿತ. ಹಾಗಾಗದಿರಬೇಕಾದರೆ ಮೂರ್ಖ ಮುತಾಲಿಕ್ ಮತ್ತೊಮ್ಮೆ ಜೈಲು ಸೇರಲೇಬೇಕು.

-ಶ್ರೀರಾಮ ದಿವಾಣ

...ಗಿದ್ದ 'ಗುಳುಂ' ಗೋವಿಂದ ಮತ್ತವನ ಪಟಾಲಂಗೆ ...ರು ಛೀ ಅಂದಿದ್ದರೆ, ಬೃಹದಾಕಾರವಾಗಿ ಬೆಳೆಯ...ದಾದ ಈ ಚಳವಳಿಯನ್ನು ಹತ್ತಿಕ್ಕಲು ಒಂದಷ್ಟು ...ರಿ ಕೊಟ್ಟು ಸಾಗ ಹಾಕಿದ್ದಾರೆ ಎಂಬ ವರ್ತಮಾನಗಳೂ ಹೊರ ಬಂದಿವೆ.



ಕೆಲವು ವರ್ಷಗಳ ಹಿಂದೆ, ಸರ್ಕಾರ ರೂಪಿಸಿದ್ದ ನೀತಿಯಿಂದಾಗಿ ರೇಷ್ಮೆ ಮಾರುಕಟ್ಟೆ ದರ ಕುಸಿದು ಬೆಳೆಗಾರ ಸಂಕಷ್ಟಕ್ಕೆ ಸಿಲುಕಿದ್ದಾಗ ಮೂರಾಂಡ ಹಳ್ಳಿ ಗೋಪಾಲ್, ರುದ್ರಸ್ವಾಮಿ, ಮಳ್ಳೂರು ...ನೇತೃತ್ವದಲ್ಲಿ ಇದೇ ಗೋವಿಂದಗೌಡ ಉಪವಾಸ ...ಹದಲ್ಲಿ ಭಾಗವಹಿಸಿದ್ದ. ಸರ್ಕಾರವೇ ಇವರಿದ್ದ ...ಬಂದು ಕೃಷಿಕರ ಬೇಡಿಕೆ ಈಡೇರಿಸಿತ್ತು, ಆ ...ಲ್ಲಿ ಯಾವುದೇ ಚುನಾಯಿತ ಪ್ರತಿನಿಧಿಗಳ ಸಲಹೆ ... ಯಾಚಿಸಿರಲಿಲ್ಲ, ಆದರೆ, ಇಂದು ಜಿಲ್ಲಾ ಮಟ್ಟ... ಹಾಲು ಉತ್ಪಾದಕರಿಗೆ ತಲೆಬೇನೆಯಾಗಿರುವ ... ದೈರಿಗಳ ವಿರುದ್ಧ ಕಾರ್ಯಾಚರಣೆ ನಡೆಸಲು ...ನಿಧಿಗಳ ಅಣತಿಯ ಅಗತ್ಯವೇಕೆ ಎಂದು 'ಗುಳುಂ' ...ಂದನನ್ನು ಪ್ರಶ್ನಿಸಿದರೆ ಗುರ್ ಅಂತ ...ಾಯುತ್ತಾನೆ.

...ಾಸಗಿ ಡೈರಿಗಳನ್ನು ಜಿಲ್ಲೆಯಿಂದ ಪಲಾಯನ ...ಸುವುದಾಗಿ ಹಾಲು ಉತ್ಪಾದನೆ ಹೆಸರನ್ನು ...ಟ್ಟುಕೊಂಡ 'ಗುಳುಂ' ಗೋವಿಂದಗೌಡ ...ೀಯನ್ನು ತಿಂದು ತಾನೇ ಪರಾರಿಯಾಗಿದ್ದಾನೆ. ... ಗೋವಿಂದನಕರನ್ನು ಕಾಪಾಡುವುದಾಗಿ ಹೇಳಿದ ...ಾಗಿ ಒಂದು ವೇದಿಕೆಯ ಅಡಿಯಲ್ಲಿ ಬಂದಿರುವ ... ನಾಯಕರಾದರೂ ಈ ಚಳವಳಿಯನ್ನು ಮುಂದು [illegible]

-ವರದಿಗಾರ


ಪರ್ಸೆಂಟೇಜ್ ದೇವಾನಂದನ ಭವ್ಯ ಬಂಗಲೆ

ಚಿಕ್ಕಮಗಳೂರು

ಚಿಕ್ಕಮಗಳೂರು ಜಿಲ್ಲಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಎಫ್.ಡಿ.ಎ ದೇವಾನಂದ ಎಂಬಾತ ಪೊಗದಸ್ತಾಗಿ ಮೇಯುತ್ತಿದ್ದಾನೆ. ಕಳೆದ ಹದಿನೈದು ವರ್ಷಗಳಿಂದ ಇಲ್ಲೇ ಅಂಡೂರಿ ಕುಳಿತಿರುವ ದೇವಾನಂದ ಇಲಾಖೆಯ ವಿವಿಧ ಸ್ಕೀಮುಗಳಲ್ಲಿ ಪರ್ಸೆಂಟೇಜಿಗಾಗಿ ಎಷ್ಟುದ್ದ ಬೇಕಾದರೂ ನಾಲಿಗೆ ಚಾಚುತ್ತಾನೆ. ಹೀಗೆ ನಾಲಿಗೆ ಚಾಚಿ ಕೂಡಿಟ್ಟ ಹಣದಿಂದ ಚಿಕ್ಕಮಗಳೂರಿನ ಜಯನಗರ ಬಡಾವಣೆಯಲ್ಲಿ ಇಪ್ಪತ್ತೈದರಿಂದ ಮೂವತ್ತು ಲಕ್ಷ ಬೆಲೆಬಾಳುವ ಅರಮನೆಯಂತಾ ಬಂಗಲೆಯನ್ನು ಕಟ್ಟಿದ್ದಾನೆ. ಇದೇ ಭಾನುವಾರ 9ರಂದು ಈ ಭವ್ಯ ಬಂಗಲೆಯ ಗೃಹ ಪ್ರವೇಶ ಕಾರ್ಯಕ್ರಮ ಕೂಡಾ ನಡೆಯಲಿದೆ. ಈ ಸಂತೋಷ- ಸಂಭ್ರಮದಲ್ಲಿ ದೇವಾನಂದನ ಸಿಹಿಯೂಟದ ರುಚಿ ನೋಡಲು ಈತನಿಗೆ ಪರ್ಸೆಂಟೇಜ್ ಕಕ್ಕಿದವರೂ ಬರಲಿದ್ದಾರೆಂಬುದೇ ವಿಶೇಷ.



ಜಿಲ್ಲಾ ನೌಕರರ ಸಂಘದ ಉಪಾಧ್ಯಕ್ಷನೂ ಆಗಿರುವ ದೇವಾನಂದ ಇದನ್ನೆಲ್ಲ ಬಂಡವಾಳ ಮಾಡಿಕೊಂಡು ತನ್ನ ನುಂಗುವ ಕಾಯಕ ಮುಂದುವರೆಸಿದ್ದಾನೆ. ಇಲಾಖೆಯ ಅಧಿಕಾರಿಗಳನ್ನು, ನೌಕರರನ್ನು ತನ್ನ ಚಾಣಾಕ್ಷತೆಯಿಂದ ನಿಭಾಯಿಸುತ್ತಾನೆ. ಜಿಲ್ಲೆಯಾದ್ಯಂತ ಸಾವಿರಾರು ಸ್ತ್ರೀಶಕ್ತಿ ಸಂಘಗಳ ಕಾರ್ಯಕರ್ತರಿಗೆ ತರಬೇತಿಗಾಗಿ ಬಿಡುಗಡೆಯಾಗಿರುವ ಹಣದಲ್ಲಿ ಪರ್ಸೆಂಟೇಜ್ ಪಡೆಯುತ್ತಾನೆ. ಜಿಲ್ಲೆಯ ಏಳು ತಾಲ್ಲೂಕುಗಳ ಅಂಗನವಾಡಿಗಳಿಗೆ ಸರಬರಾಜು ಆಗುವ ಫುಡ್ ಟೆಂಡರ್ ತನಗೆ ಪರ್ಸೆಂಟೇಜ್ ಕೊಡುವವರಿಗೆ ದಕ್ಕುವಂತೆ ನೋಡಿಕೊಳ್ಳುತ್ತಾನೆ. ಅಂತಹ ಟೆಂಡರುದಾರರು ಕಳಪೆ ಆಹಾರ ಪೂರೈಕೆ ಮಾಡಿದರೂ ಕೇಳುವವರೇ ಇಲ್ಲದಂತಾಗಿದೆ. ಇವನ ಪರ್ಸೆಂಟೇಜ್ ರಂಪಾಟದಲ್ಲಿ ಪ್ರಾಮಾಣಿಕರು ಟೆಂಡರು ಹಾಕಲು ಸಾಧ್ಯವೇ ಇಲ್ಲ [illegible]



ಆಹಾರ ಸರಬರಾಜು ಜೊತೆಗೆ ಇಲಾಖೆಗೆ ಪೀಠೋಪಕರಣ, ಪಾತ್ರೆ, ಅಡಿಗೆ ಸಾಮಾನು ಪೂರೈಕೆ ಮಾಡುವವರಿಂದಲೂ ಪರ್ಸೆಂಟೇಜ್ ಗುಂಜುತ್ತಾನೆ. ಇಲಾಖೆಯ ಸಿಬ್ಬಂದಿಯ ಟಿ.ಎ. ಡಿ.ಎ. ಬಿಲ್ ಪಾಸು ಮಾಡಲೂ ಇವನಿಗೆ ದಕ್ಷಿಣೆ ಕಾಸು ಕೊಡಬೇಕು. ವಿಶೇಷವೆಂದರೆ, ಸಿಡಿಪಿಓ ಕಛೇರಿಗಳಲ್ಲೇ ಜಿಲ್ಲಾ ಪಂಚಾಯ್ತಿಯಿಂದ ಹಣ ಬಿಡುಗಡೆ ಮಾಡಿಸುವ ಹೆಸರಲ್ಲೂ ಲಂಚ ಪಡೆಯುತ್ತಾನೆ. ತನ್ನ ಸಹಪಾಠಿ ನೌಕರರಿಗೆ ಸರ್ಕಾರಿ ವಸತಿಗೃಹ ಕೊಡಿಸಲೂ ಸಾವಿರಾರು ರೂಪಾಯಿ ಟಿಪ್ಸ್ ಕೇಳುತ್ತಾನೆ.

ಜಿಲ್ಲಾ ನೌಕರರ ಸಂಘದ ಉಪಾಧ್ಯಕ್ಷಗಿರಿಯ ಹೆಸರಲ್ಲಿ ವರ್ಗಾವಣೆಗಳನ್ನು ಮಾಡಿಸುವುದು, ಸರ್ಕಾರಿ - ಅರೆ ಸರ್ಕಾರಿ ಕಛೇರಿಗಳಲ್ಲಿ ಸಣ್ಣಪುಟ್ಟ ಉದ್ಯೋಗ ಕೊಡಿಸುವುದು, ಅವರಿಗೆ ಇವರಿಗೆ ಕೊಡಿಸಿಕೊಂಡು ಹೇಳಿ ಹಣ ಪೀಕುವುದು ಸಾಮಾನ್ಯವಾಗಿದೆ. 2005-06ರಲ್ಲಿ ಇಲಾಖೆಯಲ್ಲಾದ ಅಟೆಂಡರ್ ನೇಮಕಾತಿಯಲ್ಲಿ ಗಡದ್ದಾಗಿ ತಿಂದಿದ್ದು ಮಾಡಿದ್ದು ಇದೇ ದೇವಾನಂದ. ಏಳನೇ ತರಗತಿ ಪಾಸಾದವರಿಗೆ ಮೀಸಲಾಗಿರುವ ಈ ಹುದ್ದೆಗಳನ್ನು ಪಿಯುಸಿ, ಡಿಗ್ರಿ ಪಾಸಾದವರಿಗೆ ಸಿಗುವಂತೆ ನೋಡಿಕೊಂಡವನೀತ. ಈ ಬಗ್ಗೆ ತನಿಖೆ ನಡೆದರೆ ನಿಜಾಂಶ ಬಯಲಾಗುತ್ತದೆ. ಈಗ ಪ್ರಸಕ್ತ ಸಾಲಿನಲ್ಲಿ [illegible] ನಡೆಯುತ್ತಿದ್ದು ಈ ಹಿಂದಿನಿಗಳಿಗೆ 15 ರಿಂದ 20 ಲಕ್ಷ ರೂ. ಮೌಲ್ಯದ ಪೀಠೋಪಕರಣ, ಪಾತ್ರೆ, ಆಹಾರ ಸಾಮಗ್ರಿ, ಆಟಿಕೆ ಸಾಮಾನು ಖರೀದಿಸಬೇಕಿದೆ. ಈ ಭರ್ಜರಿ ಪರ್ಸೆಂಟೇಜ್ ಆಫರನ್ನು ಸದುಪಯೋಗಪಡಿಸಿಕೊಳ್ಳಲು ಸಜ್ಜಾಗಿರುವ ದೇವಾನಂದ ಈ ಬಾಬ್ತು ಒಂದರಲ್ಲೇ ಎರಡು ಲಕ್ಷ ಪರ್ಸೆಂಟೇಜ್ ಟಾರ್ಗೆಟ್ ಇಟ್ಟುಕೊಂಡಿದ್ದಾನೆಂದು ಹೇಳಲಾಗುತ್ತಿದೆ.

ಇಂತಾ ಪರ್ಸೆಂಟೇಜ್ ದಂಧೆಯ ದೇವಾನಂದನ ಮನೆಯ ಜೊತೆ ಆತ ತನ್ನ ಶ್ರೀಮತಿಗೆ ಕೊಡಿಸಿರುವ ಲಕ್ಷಾಂತರ ರೂಪಾಯಿ ಮೌಲ್ಯದ ಆಭರಣಗಳೂ ಕಣ್ಣು ಕುಕ್ಕುವಂತಿವೆ. ಈತನ ಮನೆಗೆ ಆತಿಥ್ಯ ಸ್ವೀಕರಿಸಲು ಹೋಗುವ ಸಹಪಾಠಿಗಳು ಈ ಸುವರ್ಣ ವೈಭವ ನೋಡಿ ಸಹಿಸಲಾಗದೇ ಲೋಕಾಯುಕ್ತ ವೆಂಕಟಾಚಲರು ಬಂದು ದಾಳಿಮಾಡಿ ಈ ಬಂಗಾರ, ಒಡವೆಗಳನ್ನೆಲ್ಲಾ ಅನಾಮತ್ತಾಗಿ ಹೊತ್ತೊಯ್ಯಬಾರದೇಕೆ ಎಂದು ಪರಿತಪಿಸುವುದೂ ಉಂಟಂತೆ. ಈಗ ಇಲಾಖೆಯಲ್ಲಿ ಮಾನವಂತರಾಗಿ ಕೆಲಸ ಮಾಡುವ ನೌಕರರ ಗುಪ್ತ ಆಸೆಯೇನೆಂದರೆ ಹೇಗಾದರೂ ಈ ದೇವಾನಂದನ ಕಮಾಯಿ ವ್ಯವಹಾರಗಳ ತನಿಖೆ ನಡೆದು ಸ್ವಲ್ಪ ವಿಶ್ರಾಂತಿ ದೊರೆಯಬೇಕೆಂಬುದಾಗಿದೆ.

ಈ ಕಛೇರಿಯ ಆಕರ್ಷಣೆ ಎಂಥದು ನೋಡಿ! [illegible] ಬಸವರಾಜ್ ಎಂಬ ಎಫ್.ಡಿ.ಎ. ಕೂಡಾ [illegible] ಮೂಡಿಗೆರೆಗೆ ವರ್ಗಾವಣೆ [illegible] ವಕ್ಕರಿಸಿದ್ದಾನೆ. ಇವನೂ ಲಕ್ಷಾಂತರ ರೂಪಾಯಿಗಳ ಕಮಾಯಿ ವ್ಯವಹಾರದ ರುಚಿ ನೋಡಿರುವಾತ. ಇನ್ನು ಪಿ.ಓ. ಆಗಿರುವ ಲಿಂಗರಾಜು ಶುದ್ಧ ಮಾಂಗುಬಟ್ಟಿನ ವ್ಯವಹಾರದ ಗಿರಾಕಿ. ಇಲಾಖೆಯಲ್ಲಿ ಇಂತಹ ಎಡಬಿಡಂಗಿಗಳೇ ತುಂಬಿ ಕೊಂಡರೆ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಆಗುವುದು ಯಾವಾಗ?

[illegible]

ಅಳಿದ ಹೆಜ್ಜೆಗಳು

ವಿಶಾಲವಾದ ಮರಳುಗಾಡಿನಲ್ಲಿ ದೂರದ ಲ್ಯಾರೋ ನಡೆದುಹೋಗುತ್ತಿರುವ ಹಾಗೆ, ಜೊತೆಗೇ ಬೀಸುತ್ತಿರುವ ಗಾಳಿ ಅವರ ಹೆಜ್ಜೆ ಗುರುತುಗಳನ್ನು ಮುಚ್ಚಿ ಹಾಕುತ್ತಿರುವ ಹಾಗೆ, ಅವರನ್ನು ಗುರುತಿಸಲು ದೂರದವರೆಗೆ ದೃಷ್ಟಿ ಹರಿಸಿದರೂ ಬರೀ ಮರೀಚಿಕೆಯೊಂದು ಕಂಡಂತಾಗಿ ಕ್ಷಣ ಮನಸ್ಸು ಸ್ತಬ್ಧವಾಗಿ ತನ್ನಲ್ಲೇ ಪ್ರಶ್ನೆ ಕೇಳತೊಡಗುತ್ತದೆ.


ಯಾರೋ ನಡೆದು ಹೋದದ್ದು ನಿಜವಾ? ಹಾಗಾದರೆ ಯಾವ ಗುರುತೂ ಯಾಕೆ ಉಳಿದಿಲ್ಲ? ಎಲ್ಲಿಗೆ ಹೋದರವರು? ವಿಚಾರಿಸುತ್ತ ಕುಳಿತ ಹುಡುಗಿಗೆ ಬದುಕು ಭ್ರಮೆಗಳ ನಡುವೆ ಕಂದಕ ಉಂಟಾದಂತಾದಾಗ ಗಾಬರಿಯಾಗಿ ತಟಕ್ಕನೆ ಕಣ್ ಬಿಡ್ತಾಳೆ.

'ಆರದ ಗಾಯದಂತಹ' ಎನ್ನಲೋ 'ಬಾಡದ ಹೂವಿನಂತಹ' ಎನ್ನಲೋ ಗೊತ್ತಿಲ್ಲ, ಆ ಹುಡುಗಿಯ ಎಳೆ ವಯಸ್ಸಿನಲ್ಲಿ ಅಂಥದ್ದೊಂದು ನೆನಪನ್ನು ಬಿಟ್ಟು ಹೋದವಳ ಹೆಸರು ಶಾಂತಾ ಅಥವಾ ಶಾಂತಿ ಇರಬಹುದು, ಸರಿಯಾಗಿ ನೆನಪಿಲ್ಲ, ಆದರೆ ಆ ಹೆಸರು ಮಾತ್ರ ಆಕೆಗೆ ವಿಚಾರಿಸಿ ಇಟ್ಟಂತಿತ್ತು. ಅವಳ ಮುಖವನ್ನು ಸರಿಯಾಗಿ ಓದದವರು ಅದನ್ನು ಪ್ರಶಾಂತವಾದ ಮುಖ ಅನ್ನಬಹುದೇನೋ; ಆದರೆ ಒಮ್ಮೆ ಒಳಹೊಕ್ಕು ನೋಡಿದ್ದರೂ ಗೊತ್ತಾಗ್ತಿತ್ತು. ಶಾಂತಿಯ ನಿಜವಾದ ಮುಖ; ಅಲ್ಲಿ ಹೆಪ್ಪುಗಟ್ಟಿದ ನೋವು, ಒಣಗಿ ಹೋಗಿದ್ದ ಕಣ್ಣೀರ ಕೆರೆ. ಆದರೆ ಅವಳ ದುರದೃಷ್ಟ, ಯಾರೂ ಆ ಸಾಹಸಕ್ಕೆ ಕೈ ಹಾಕಲೇ ಇಲ್ಲ-ಕೇವಲ ಆ ಪುಟ್ಟ ಹುಡುಗಿಯೊಂದನ್ನು ಬಿಟ್ಟು.

ಶಾಂತಿಯ ಮಗ ಚೇತನ್ ಹಾಗೂ ಆ ಹುಡುಗಿಯ ತಮ್ಮ ದೀಪು ಹೋಗುತ್ತಿದ್ದುದು ಒಂದೇ ನರ್ಸರಿಗೆ. ಅವರಿಬ್ಬರ ಮನೆಗಳಿದ್ದದ್ದೂ ಒಂದೇ ದಿಕ್ಕಿನಲ್ಲಿ, ಹುಡುಗಿಯ ಮನೆದಾಟಿ ಸ್ವಲ್ಪ ದೂರ ಹೋಗಿ ಎಡಗಡೆ ತಿರುಗಿದರೆ ಅಲ್ಲೆಲ್ಲೋ ಇತ್ತು ಶಾಂತಿಯ ಮನೆ. ಆದರೆ ಹುಡುಗಿಗೆ ಗೊತ್ತಿದ್ದದ್ದಿಷ್ಟೆ: "ಆ ಕಡೆ ಹೋಗ್ಬೇಡಾ, ಏರಿಯಾ ಚೆನ್ನಾಗಿಲ್ಲ" ಎಂದು ಅಮ್ಮ ಹೇಳಿದ ಮಾತು.

ದಿನಾ ಬೆಳಗ್ಗೆ ಶಾಂತಿ ಮಗನನ್ನು ರೆಡಿ ಮಾಡಿ, ಹೆಗಲು ಪೂರ್ತಿ ಸೆರಗು ಹೊದ್ದು ಅವನ ಕೈಹಿಡಿದು ನಿಧಾನವಾಗಿ ನಡೆಯುತ್ತ ಸ್ಕೂಲಿನ ದಾರಿ ತುಳಿಯುತ್ತಿದ್ದಳು-ಅದೇ ಪ್ರಶಾಂತವಾದ ಮುಖದೊಂದಿಗೆ. ಗಡಿಯಾರವನ್ನು ನೆನಪಿಸುವಂತಿತ್ತು ಅವಳ ದಿನಚರಿ. ಶಾಂತಿ ಆ ಹುಡುಗಿಯ ಮನೆಯ ಹತ್ತಿರ ಬರುವುದಕ್ಕೂ, ಹುಡುಗಿ ತನ್ನ ತಮ್ಮನ ಜೊತೆ ಮನೆಯಿಂದ ಹೊರಬರುವುದಕ್ಕೂ ಸರಿಯಾಗುತ್ತಿತ್ತು.

ಇಬ್ಬರೂ ಹೋಗುತ್ತಿದ್ದುದ್ದು ಒಂದೇ ಕಡೆಗಾದರೂ ರಸ್ತೆಯ ಒಂದು ಬದಿಗೆ ಶಾಂತಿ ಹೋದರೆ ಇನ್ನೊಂದು ಬದಿಗೆ ಹುಡುಗಿ. ಯಾವತ್ತಾದರೂ ಇಬ್ಬರ ಸಮಯದಲ್ಲಿ ಹೆಚ್ಚು ಕಮ್ಮಿಯಾದರೂ ಎದುರು ಬದುರಾಗಿಯಾದರೂ ಸಿಗುತ್ತಿದ್ದರು. ಆದರೂ ಇವತ್ತಿನ ತನಕ ಇಬ್ಬರೂ ಮಾತಾಡಿಲ್ಲ, ಏನೋ ಹಿಂಜರಿತ. ಆ ಹುಡುಗಿಯ ವಯಸ್ಸಿಗೆ ಮೀರಿದ ಪ್ರಬುದ್ಧತೆ, ಶಾಂತಿಯ ಅಮಾಯಕತೆ ಎರಡೂ "ಎಂದೂ ಒಂದನ್ನೊಂದು ಸೇರುವುದೇ ಇಲ್ಲ" ಎನ್ನುವಂತೆ ಕಾಣುವ ರೈಲಿನ ಹಳಿಗಳು. ರೈಲು ಹಳಿ ಬದಲಿಸುವಲ್ಲಿ ಒಂದು ಸೇರುವಂತೆ, ಯಾವುದೋ ಹಂತದಲ್ಲಿ ಒಂದುಗೂಡಿದಂತೆ ಇಬ್ಬರೂ ಒಬ್ಬರನ್ನೊಬ್ಬರು ನೋಡಿ ಮುಂದೆ ಹೋಗುತ್ತಿದ್ದರು.



ಶಾಂತಿಯನ್ನೂ, ಅವಳ ಬಾಯಿ ಸತ್ತಂತಿರುವ ಮಗನನ್ನೂ ನೋಡುವಾಗಲೆಲ್ಲಾ ಹುಡುಗಿಯ ಮನಸ್ಸು ಹಿಂಡಿದಂತಾಗುತ್ತಿತ್ತು. ಅದ್ಯಾಕೆಂದು ಹುಡುಗಿಗೂ ಗೊತ್ತಿರಲಿಲ್ಲ, ಅದನ್ನು ಅರ್ಥ ಮಾಡಿಕೊಳ್ಳುವ ವಯಸ್ಸೂ ಆಕೆಗಾಗಿರಲಿಲ್ಲ.

ಅವತ್ತೊಂದು ದಿನ ಹಾಗೇ ಆಯ್ತು. ಹುಡುಗಿ ಹೊರಬರುವಷ್ಟರಲ್ಲಿ ಶಾಂತಿ ಸ್ಕೂಲಿನ ಕಡೆಗೆ ಹೋಗಿಯಾಗಿತ್ತು. ಅವಸರ ಅವಸರವಾಗಿ ನಡೆಯುತ್ತ ಹುಡುಗಿ, ಎಡವುತ್ತ ಬೆನ್ನು ಹತ್ತಿದ್ದ ತಮ್ಮನನ್ನು ಸ್ಕೂಲಿಗೆ ತರುವಷ್ಟರಲ್ಲಿ ಸ್ಕೂಲ್ ಬಾಗಿಲಲ್ಲೇ ಶಾಂತಿ ಎದುರಾದಳು.

ಅದ್ಯಾಕೋ, ಅವಳ ಮುಖ ಬಾಡಿದಂತಿತ್ತು, ಒಮ್ಮೆ ಹುಡುಗಿಯತ್ತ ನೋಡಿ ಶಾಂತಿ ಹೊರಟು ಹೋದಳು. ಹುಡುಗಿ ತಿರುತಿರುಗಿ ನೋಡುತ್ತ ಕ್ಲಾಸ್ ರೂಂವರೆಗೆ ಹೋಗಿ ತಮ್ಮನನ್ನು ಬಿಟ್ಟು ಬರುವಾಗ, ಕ್ಲಾಸ್ ಟೀಚರ್ ಹೆಡ್‌ಮಿಸ್ ಜೊತೆ ಮಾತನಾಡುತ್ತ ಏನೋ ಹೇಳುತ್ತಿದ್ದುದ್ದನ್ನು ಕೇಳಿ ಅಲ್ಲೇ ನಿಂತಳು. "ಯಾರೂ ಇಷ್ಟಪಟ್ಟಂತೂ ಅಂಥ ಕೆಲಸ ಮಾಡೋಲ್ಲಾರೀ, ಮೈಮಾರಿ ಬದುಕೋದು ಯಾರಿಗಿಷ್ಟ ಆಗುತ್ತೆ ಹೇಳಿ? ಅವಳದೇನು ತಪ್ಪು?" ಎಂದು ಕ್ಲಾಸ್ ಟೀಚರ್ ಮಾತಾಡುತ್ತಿದ್ದರೆ, ಹುಡುಗಿಗೆ ಅಲ್ಲೇ ನಿಂತು ಕೇಳಬೇಕೆನಿಸಿದರೂ ಭಯದಿಂದ ನಿಲ್ಲಲಾರದೇ ಹೊರಟುಬಿಟ್ಟಳು. ಮನೆ ಮುಟ್ಟದ ಮೇಲೂ ಶಾಂತಿಯ ಬಗ್ಗೆ ಟೀಚರ್ ಆಡಿದ ಮಾತೇ ಹುಡುಗಿಯ ಕಿವಿಯಲ್ಲಿ ಗಿರಕಿ ಹೊಡೆಯುತ್ತಿತ್ತು. ಶಾಂತಿಯ ಪರವಾಗಿ ಮಾತಾಡಿದ ಟೀಚರ್ ಬಹಳ ದೊಡ್ಡ ವ್ಯಕ್ತಿಯಾಗಿ ಕಂಡರವಳಿಗೆ.

ಮರುದಿನ ಬೆಳಗ್ಗೆ ಹುಡುಗಿ ಬಹಳ ಉತ್ಸಾಹದಲ್ಲಿದ್ದಳು. ಮೊದಲ ಬಾರಿ ಸ್ಕೂಲಿನ ದಾರಿಯಲ್ಲಿ ಎದುರಾದ ಶಾಂತಿಯನ್ನು ನೋಡಿ ಮುಗುಳ್ನಕ್ಕಳು. ಶಾಂತಿ ಕೂಡ ಮುಗುಳ್ನಕ್ಕು ತಲೆ ಕೆಳಹಾಕಿ ಹೊರಟು ಹೋದಳು. ಆ ಕ್ಷಣದಲ್ಲಿ ಹುಡುಗಿಯ ಎದೆ ಧಪ... ಎಂದು ಹೊಡೆದುಕೊಳ್ಳುತ್ತಿತ್ತು, ಆದರೂ ದಿ... ಉತ್ಸಾಹ, ಬಂಡಾಯ ಮಾಡಿದಂತಹ ಹುಮ್ಮ... ಅದೇ ಹುರುಪಿನಲ್ಲಿ ಯಾವತ್ತಾದರೂ ಶಾಂತಿಯೊಂ... ಮಾತನಾಡಬೇಕು ಎಂದುಕೊಳ್ಳುತ್ತ ಹುಡುಗಿ ಜ... ಸೇರಿತ್ತು.

ಅವತ್ತು ರಾತ್ರಿ, ರಸ್ತೆಗೆ ಮುಖ ಮಾಡಿದ್ದ ಮನೆ... ಮಹಡಿಯ ತನ್ನ ಕೋಣೆಯಲ್ಲಿ ಕುಳಿತು ಹೊ... ಕವಿದಿದ್ದ ದಟ್ಟಮೋಡ ಯಾವಾಗ ಸುರಿಯುವುದ... ಎಂದು ತವಕದಿಂದ ಕಾಯುತ್ತಿದ್ದ ಹುಡುಗಿಗೆ, ಕೆಳಗ... ರಸ್ತೆಯಲ್ಲಿ ಜೋರಾದ ಕಿರುಚಾಟ, ಗಲಾಟೆ ಕೇಳಿದಂತಾ... ಹೊರಗಿನ ಚಿಕ್ಕ ಬಾಲ್ಕನಿಯಲ್ಲಿ ನಿಂತು ನೋಡಿದ... ಅದ್ಯಾವನೋ ಗಂಡಸು ಸಿಕ್ಕಾಪಟ್ಟೆ ಕುಡಿದ ನಶೆಯ... ಹೆಂಗಸೊಬ್ಬಳನ್ನು ಅಮಾನುಷವಾಗಿ ಹೊಡೆಯುತ್ತಿ... ಸುತ್ತಮುತ್ತಲಿನ ಮನೆಗಳ ಜನರೆಲ್ಲ ಹೊರಬಂ... ನೋಡುತ್ತಿದ್ದರೂ 'ನಮಗ್ಯಾಕೆ ಬೇರೆಯವರ ಉಸಾಬ...' ಎನ್ನುವಂತೆ ಸುಮ್ಮನೆ ನಿಂತುಕೊಂಡಿದ್ದರು. ಅದ... ನೋಡಿ ಹುಡುಗಿ ಜಿಗುಪ್ಸೆಯಿಂದ ಮುಖ ತಿರುಗಿ... ಬೇಕೆನ್ನುವಷ್ಟರಲ್ಲಿ ಅಲ್ಲೇ ಪಕ್ಕದಲ್ಲಿ ಜೋರಾಗಿ ಅಳು... ನಿಂತಿದ್ದ ಮಗುವನ್ನು ನೋಡಿದಳು. ಅವಳ ... ಧಸಕ್ಕೆಂದಿತು. ಅರೆ ಚೇತನ್ ಅಲ್ವಾ! ಶಾಂತಿಯ ಮ... ಹಾಗಾದರೆ ಆ ಹೆಂಗಸು! ಹುಡುಗಿ ಗಾಬರಿಯಾ... ನೋಡುತ್ತಿದ್ದಂತೆಯೇ ವ್ಯಕ್ತಿ ಮಗುವನ್ನು ಎಳೆದಾ... ತೊಡಗಿದ. ಅದು ಭಯದಿಂದ ಕಿರುಚಾಡುತ್ತಿದ್ದ... ಶಾಂತಿ ದಯನೀಯವಾಗಿ ಅಂಗಲಾಚುತ್ತಿದ್ದಳು. ಅರಚಾಡುವಿಕೆಯ ಮಧ್ಯದಲ್ಲಿ ಶಾಂತಿ ಆಗಾಗ 'ಬಿಡು... ಅದು ನನ್ನ ಮಗು' ಎಂದು ಬೇಡಿಕೊಳ್ಳುತ್ತಿದ್ದ... ಮಾತ್ರ ಕೇಳಿಸುತ್ತಿತ್ತು. ಆದರೆ ಆ ಮನುಷ್ಯ ಮಾ... ಮೈಮೇಲೆ ಅರಿವೇ ಇಲ್ಲದಂತೆ ಹೊಲಸು ಶಬ್ದಗಳ... ಶಾಂತಿಯನ್ನು ಬೈಯುತ್ತಿದ್ದ. ಅವಳ ಪ್ರತಿರೋ... ಹೆಚ್ಚಾದಂತೆ ಮುಖ ಮೈ ಎಂದು ನೋಡದೆ ಹೊಡೆಯತೊಡಗಿದ.

ಅಲ್ಲಿಯವರೆಗೂ ಸುಮ್ಮನೆ ನೋಡುತ್ತಿದ್ದ ಜನರಿ... ಅದೇನನ್ನಿಸಿತೋ, ನಾಲ್ಕಾರು ಗಂಡಸರು ಬಂದು ... ವ್ಯಕ್ತಿಯಿಂದ ಶಾಂತಿಯನ್ನೂ, ಚೇತನ್‌ನನ್ನೂ ಬಿಡಿ... ಕೊಳ್ಳಲು ಪ್ರಯತ್ನಿಸಿದರು. ಅವನ ಸಿಟ್ಟು ಆ ಜನರ... ತಿರುಗಿ "ಏನ್ರಲಾ ನಿಮಗೆ ಹುಟ್ಟದ್ದೇನಲೇ ಇದು..." ಎಂದಾಗ ಯಾರೋ ಒಬ್ಬ ಘಟಾರನೇ ಅವನ ಕೆನ್ನೆ... ಬಿಗಿದ. ಕೂಡಲೇ ಆಯತಪ್ಪಿದಂತೆ ಅಲ್ಲಿ ವಾಲಿ... ಕುಡುಕ ಅಲ್ಲಿಂದ ಓಡಿಹೋದ. ನಂತರ ಜನರೆ... ಒಬ್ಬೊಬ್ಬರಾಗಿ ಜಾಗ ಖಾಲಿ ಮಾಡತೊಡಗಿದರು... ಅಲ್ಲಲ್ಲಿ ಗುಂಪಾಗಿ ನಿಂತಿದ್ದ ಹೆಂಗಸರು ಶಾಂತಿಯ... ವಿಚಿತ್ರವಾಗಿ ನೋಡುತ್ತ ಮನೆಗಳಿಗೆ ತೆರಳಿದರು.


ಕರಾವಳಿ ಜಿಲ್ಲೆಗಳಲ್ಲಿ ಇನ್ನೊಂದು ರೌಂಡು ಕೋಮು ಹಿಂಸೆಗೆ ತಯಾರಿ

ಇದೇ ಮಾರ್ಚ್ ತಿಂಗಳ 29 ರಂದು ಉಡುಪಿಯ ರಿಕ್ಷಾ ಚಾಲಕರು ಮತ್ತು ಮಾಲೀಕರ ಸಂಘದವರು ಒಟ್ಟಾಗಿ ಊರಿನಲ್ಲಿ ಮೆರವಣಿಗೆ ತೆಗೆದು, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಿಗೆ ಒಂದು ದೂರು ಸಲ್ಲಿಸಿದರು. ಅದಕ್ಕೆ ಕಾರಣವೆಂದರೆ ಉಡುಪಿಯ ರಿಕ್ಷಾ ಚಾಲಕ ರಘುನಾಥ ಶೆಟ್ಟಿ ಎಂಬುವರು ಶಾಲಾ ಬಾಲಕಿಯೊಬ್ಬಳ ಜೊತೆ "ಚಕ್ಕಂದವಾಡುತ್ತಿದ್ದರು" ಎಂದು ಆಪಾದಿಸಿ ಅವರ ಮೇಲೆ ಶ್ರೀರಾಮ ಸೇನೆ ಎಂಬ ಸಂಘಟನೆಗೆ ಸೇರಿದವರು ಹಲ್ಲೆ ನಡೆಸಿದ್ದರು. ಶ್ರೀರಾಮಸೇನೆ 'ಪ್ರಮೋದ್ ಮುತಾಲಿಕನ ನಾಯಕತ್ವದಲ್ಲಿ ಸಿಡಿದೆದ್ದ ಭಜರಂಗಿಗಳ ಗುಂಪು ಎಂದು ಹೇಳಲಾಗಿದೆ. ಈ ಸಂಘಟನೆಯ ಹೆಸರು ಮಾತ್ರ ಹೊಸತು.

ಭಜರಂಗದಳ, ಹಿಂದೂ ಯುವಸೇನೆ, ಹಿಂದೂ ಜಾಗರಣ ವೇದಿಕೆ, ಶಿವಸೇನೆ, ಶ್ರೀರಾಮಸೇನೆ-ಹೀಗೆ ಹೆಸರು ಯಾವುದೇ ಇರಲಿ, ಅದರಲ್ಲಿ ಇರುವವರೆಲ್ಲ ಹಿಂದೂತ್ವದ ದೊಣ್ಣೆ ವೀರರೇ. ಉಡುಪಿಯ ರಿಕ್ಷಾ ಚಾಲಕನ ಮೇಲೆ ನಡೆದ ಹಲ್ಲೆಯಲ್ಲಿ ಸಹ ಹೊಸತೇನೂ ಇಲ್ಲ, ಹಲ್ಲೆಗೊಳಗಾದವ ಮುಸ್ಲಿಮನಾಗಿದ್ದರೆ ಇಲ್ಲಿ ಯಾರೂ ಅದನ್ನು ಪ್ರತಿಭಟಿಸುತ್ತಿರಲಿಲ್ಲ.

ಆತ ಹಿಂದೂ ಎಂದು ಮೊದಲೇ ಗೊತ್ತಿದ್ದರೆ ಪ್ರಾಯಶಃ ಈ ಹಲ್ಲೆಯೂ ನಡೆಯುತ್ತಿರಲಿಲ್ಲ. ಇದಕ್ಕೆ ಕೆಲವೇ ದಿನಗಳ ಮೊದಲು ಉಡುಪಿಯ ಟ್ಯುಟೋರಿಯಲ್ ಕಾಲೇಜೊಂದರ ಮುಸ್ಲಿಮ್ ವಿದ್ಯಾರ್ಥಿ, ಅದೇ ಕಾಲೇಜಿನ ಹಿಂದೂ ವಿದ್ಯಾರ್ಥಿನಿಯೊಬ್ಬಳ ಜೊತೆ 'ಮಾತಾಡಿದ' ಎಂಬ ಕಾರಣಕ್ಕೆ ಹೊಡೆತ ತಿಂದಿದ್ದ. ಕರಾವಳಿಯ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಇಂತಹ ಘಟನೆಗಳು ಮೇಲಿಂದ ಮೇಲೆ ನಡೆಯುತ್ತಿದ್ದು, ಇಲ್ಲಿನ ಪುಡಿ ಪತ್ರಿಕೆಗಳ ಪ್ರಕಾರ ಮುಸ್ಲಿಮ್ ಯುವಕರ "ಲವ್ ಟೆರ್ರರಿಸಂ" ಇತ್ತೀಚೆಗೆ ಜಾಸ್ತಿಯಾಗಿರುವುದೇ ಇದಕ್ಕೆ ಕಾರಣವಂತೆ!

ಇದರ ಜೊತೆಗೆ ಕರಾವಳಿಯಾದ್ಯಂತ, ದನಗಳನ್ನು ಕಸಾಯಿಗೆ ಸಾಗಿಸುತ್ತಿದ್ದಾರೆ ಎಂದು ಮುಸ್ಲಿಮರನ್ನು ರಸ್ತೆಯಲ್ಲಿ ತಡೆದು ಹೊಡೆಯುವುದು, ದನದ ಮಾಂಸ ಮಾರುತ್ತಿದ್ದಾರೆ ಎಂದು ಮಾಂಸದ ಹೋಟಲುಗಳನ್ನು ಧ್ವಂಸ ಮಾಡುವುದು, ಮೇಯಲು ಬಿಟ್ಟ ದನಗಳು ಕಸಾಯಿಯವರಿಂದ ಕಳವಾಗುತ್ತಿದೆ ಎಂದು ವದಂತಿ ಹಬ್ಬಿಸುವುದು-ಇವಂತೂ ಪ್ರತಿ ದಿನ ಎಂಬಂತೆ ಇಲ್ಲಿನ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಕಾಸರಗೋಡಿನ ಸಮೀಪದ ಬದಿಯಡ್ಕ ಎಂಬಲ್ಲಿ "ಆಸುಪಾಸಿನ ದನಗಳಿಗೆ ಗರ್ಭದಾನ ಮಾಡುತ್ತಿದ್ದ ಹಾಗೂ ಊರಿನವರಿಗೆ ಅಚ್ಚುಮೆಚ್ಚಿನ" ನಾಗ ಎಂಬ ಗೂಳಿ ಕಾಣೆಯಾಗಿದ್ದುದು, ಕೆಲವು ವಾರಗಳ ಹಿಂದೆ 'ಉದಯವಾಣಿ'ಯಲ್ಲಿ ದೊಡ್ಡದಾಗಿ ಪ್ರಕಟವಾಗಿತ್ತು. ಅದೇ ಊರಿನ, ಅಪರೂಪದ ಕಾಂಕ್ರೇಜ್ ತಳಿಯ ದನವೊಂದು ನಾಪತ್ತೆಯಾಗಿರುವುದನ್ನು 'ಉದಯವಾಣಿ' ಧಾರಾವಾಹಿಯಂತೆ ಮೂರು ದಿನ ಪ್ರಕಟಿಸಿತು! ಗೋರಕ್ಷಣೆಯ ಸಂಕಲ್ಪ ಮಾಡಿ ಊರು ಊರಿನಲ್ಲಿ ಭಾಷಣ ಬಿಗಿಯುತ್ತಿರುವ ರಾಮಚಂದ್ರಾಪುರ ಮಠದ ಸ್ವಾಮಿಗಳು, ಒಂದು ಸಭೆಯಲ್ಲಿ ಅದನ್ನೆಲ್ಲ ನೆನೆಸಿಕೊಂಡು ಅತ್ತು ಬಿಟ್ಟರಂತೆ. ಆಗ ಸಭೆಯಲ್ಲಿದ್ದವರು ಸಹ ಗದ್ಗದಿತರಾಗಿ, "ನೂರಾರು ಕರವಸ್ತ್ರಗಳು ಕಣ್ಣೀರು ಒರೆಸಿಕೊಂಡವು" (ಉದಯವಾಣಿ ವರದಿ).


ಸುಳ್ಳು ಆರೋಪ, ಹಲ್ಲೆ: ರಿಕ್ಷಾ ಚಾಲಕರ ಪ್ರತಿಭಟನೆ

ಉದಯವಾಣಿ. 30-3-06. IV

ಕರಾವಳಿಯ ಕಾಲೇಜುಗಳಲ್ಲಿ ಬೆರಳೆಣಿಕೆಯಷ್ಟಿರುವ ಮುಸ್ಲಿಮ್ ವಿದ್ಯಾರ್ಥಿಗಳನ್ನು ಥಳಿಸಲು ಕಾರಣವೇ ಬೇಕಿಲ್ಲ. ಉದಾಹರಣೆಗೆ ಸುರತ್ಕಲ್‌ನ ಕಾಲೇಜೊಂದರಲ್ಲಿ "ಇನ್ ಶರ್ಟ್" ಮಾಡಿಕೊಂಡು ಕ್ಲಾಸಿಗೆ ಬಂದದ್ದಕ್ಕೆ ಮುಸ್ಲಿಮ್ ವಿದ್ಯಾರ್ಥಿಗಳನ್ನು ಹೊಡೆಯಲಾಗಿದೆ. ಮೂಲ್ಕಿ ಕಾಲೇಜಿನ ಒಬ್ಬ ಮುಸ್ಲಿಮ್ ವಿದ್ಯಾರ್ಥಿಗೆ, ಚಡ್ಡಿಗಳು "ಏನೋ ಸ್ಮೈಲ್ ಕೊಡುತ್ತೀಯಾ?" ಎಂದು ಕೇಳಿ ಹೊಡೆದಿದ್ದಾರೆ. ಹಿಂದೂತ್ವದ ಭದ್ರ ನೆಲೆಯಾಗಿರುವ ಉಡುಪಿ, ದಕ್ಷಿಣ ಕನ್ನಡಗಳಲ್ಲಿ ಇಂತಹ ಘಟನೆಗಳು ಹೊಸತಲ್ಲವಾದರೂ, ಇತ್ತೀಚೆಗೆ ಅವು ಜಾಸ್ತಿಯಾಗುತ್ತಿವೆ ಎಂಬುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಬಹುಶಃ ಈ ವಿದ್ಯಮಾನ, ರಾಷ್ಟ್ರಮಟ್ಟದಲ್ಲಿ ಬಿಜೆಪಿ ತನ್ನ ಮೊದಲಿನ ಉಗ್ರ ಹಿಂದೂತ್ವದ ಧೋರಣೆಗೆ ಮರಳುತ್ತಿರುವುದರ ಸ್ಥಳೀಯ ಸಂಕೇತವಾಗಿರಬಹುದು. ಅಥವಾ ಇದ... ಕರ್ನಾಟಕಕ್ಕೆ ಬರುತ್ತಿರುವ ಅಡ್ವಾಣಿಯವರ ಮೂರನೇ... ರಥಯಾತ್ರೆಗೆ ಸ್ವಾಗತದ ತಯಾರಿಯೇ?

ಕರಾವಳಿಯ ಪ್ರಮುಖ ಪತ್ರಿಕೆ 'ಉದಯವಾಣಿ'ಯ... ಇತ್ತೀಚೆಗೆ ಪ್ರಕಟವಾಗಿರುವ ಒಂದು ವರದಿ, ಇಲ್ಲಿ... ದ್ವೇಷ, ಹಿಂಸೆಗಳ ವಾತಾವರಣವನ್ನು ಇನ್ನಷ್ಟು ಹದಗೆಡಿಸುವಂತಿದೆ. "ರಾಜ್ಯದಲ್ಲೂ ಪಾಕ್ ಗೂಢಚಾರ ಸಂಸ್ಥೆ ಜಾಲ" ಎಂಬ ಶೀರ್ಷಿಕೆಯ ಅಡಿಯ... ಪ್ರಕಟವಾಗಿರುವ ಐದು ಕಾಲಮ್ಮುಗಳ ಈ ಸುದೀರ್ಘ ವರದಿ, ಕರಾವಳಿಯ ಮುಸ್ಲಿಮ್ ಸಮುದಾಯವನ್ನು ಭಯೋತ್ಪಾದಕ ಚಟುವಟಿಕೆಗಳಲ್ಲಿ ಶಾಮೀಲಾಗಿರುವಂತೆ ಚಿತ್ರಿಸುತ್ತದೆ. (ಉದಯವಾಣಿ, ಮಣಿಪಾಲ ಆವೃತ್ತಿ ತಾ. 27.3.2006. ಪುಟ 6) ಈ ವರದಿ ಪ್ರಕಾರ ರಾಜ್ಯದಲ್ಲಿ 25,000 ಪಾಕಿಸ್ತಾನಿ ಮತ್ತು ಬಾಂಗ್ಲಾದೇಶಿ ಪ್ರಜೆಗಳು ಅಕ್ರಮವಾಗಿ ನೆಲೆಸಿದ್ದಾರೆ. ವರದಿ ಮುಂದುವರಿದು ಹೀಗೆ ಹೇಳುತ್ತದೆ, "ಕರಾವಳಿ ಜಿಲ್ಲೆಗಳಲ್ಲಿ ಅಕ್ರಮ ವಲಸಿಗರ ಮೇಲೆ ನಿಯಂತ್ರಣವೇ ಇಲ್ಲದಂತಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತ್ಯಧಿಕ ಅಕ್ರಮ ವಲಸೆಗಾರರಿದ್ದಾರೆ. ಅವರೆಲ್ಲರೂ ಪಾಕಿಸ್ತಾನಿ ಹಾಗೂ ಬಾಂಗ್ಲಾ ಪ್ರಜೆಗಳೇ ಆಗಿದ್ದಾರೆ. ಈ ಅಕ್ರಮ ವಲಸಿಗರಿಗೆ ಕೆಲವು ಸ್ಥಳೀಯರು ಪಡಿತರ ಹಾಗೂ ಚುನಾವಣಾ ಗುರುತಿನ ಚೀಟಿ ಕೊಡಿಸಿರುವ ಪ್ರಕರಣಗಳು ಪತ್ತೆಯಾಗಿವೆ."

'ಉದಯವಾಣಿ'ಯ ವರದಿ ಪ್ರಕಾರ, ರಾಜ್ಯದಲ್ಲಿ ಅಕ್ರಮ ವಲಸಿಗರೇ ಅಲ್ಲದೆ, 500 ರಿಂದ 1000 ISI ಏಜಂಟರಿದ್ದಾರೆ ಹಾಗೂ ISI, ರಾಜ್ಯದಲ್ಲಿ ನೆಲೆಸಿರುವ ಪಾಕಿಸ್ತಾನಿ, ಬಾಂಗ್ಲಾದೇಶಿ ಪ್ರಜೆಗಳನ್ನು ತನ್ನ ಜಾಲ ವಿಸ್ತರಣೆಗೆ ಬಳಕೆ ಮಾಡಿಕೊಳ್ಳುತ್ತಿದೆ. ಈ

ಚಿತ್ರವು ದೃಶ್ಯಕಾವ್ಯ. -ರಸ್ಕಿನ್

...ದರೆ ಶಾಂತಿ ಅದ್ಯಾವುದನ್ನೂ ಗಮನಿಸುವ ...ಲ್ಲಿರಲಿಲ್ಲ. ಅವರ ದೃಷ್ಟಿಯನ್ನು ಎದುರಿಸುವ ...ಯಲ್ಲಿಲ್ಲದ ಶಾಂತಿ ಮೈಮೇಲಿನ ಅಸ್ತವ್ಯಸ್ತ ...ು ಪರಿವೆಯೂ ಇಲ್ಲದೆ ಅಲ್ಲಿಯೇ ಪಕ್ಕದಲ್ಲಿದ್ದ ...ಮೇಲೆ ಕುಸಿದು ಕುಳಿತಳು. ತಲೆ ತಗ್ಗಿಸಿ ...ಸತೊಡಗಿದಳು. ಅಳುತ್ತಿದ್ದ ಚೇತನ್ ಅವಳೆದುರು ...ಏನೂ ತೋಚದೆ ಅವಳ ಹಣೆಯಿಂದ ಜಿನುಗುತ್ತಿದ್ದ ...ನ್ನು ನೋಡಿ ಗಾಬರಿಯಾಗಿ ಒರೆಸಲು ಕೈ ...ತ್ತಿದ್ದಂತೆ, ಶಾಂತಿ ಮಗುವನ್ನು ತಬ್ಬಿ ಹಿಡಿದು, ...ಳಿಸಿ ಬಂದ ದುಃಖದಲ್ಲಿ ಜೋರಾಗಿ ಅಳತೊಡಗಿ...

...ಲೆ ನಿಂತು ನೋಡುತ್ತಿದ್ದ ಹುಡುಗಿಗೆ ಶಾಂತಿಯ ...ನ್ನ ಅಸಹಾಯಕತೆ, ಯಾರ ಮೇಲೋ ರೋಷ, ...ೇರಿ ಕಣ್ಣೀರು ಕೋಡಿಯಾಗಿ ಹರಿಯತೊಡಗಿತು. ...ರೆಗೂ ಕುದಿಯುತ್ತಿದ್ದ ಮುಗಿಲು ಒಮ್ಮೆಗೇ ...ಾರವಾಗಿ ಸುರಿಯತೊಡಗಿತು. ಮಳೆಯಲ್ಲಿ ...ುತ್ತ ಗೋಡೆಗೆ ಒರಗಿ ಸುಮ್ಮನೆ ಕುಳಿತಿದ್ದ ...ಯನ್ನು ನೋಡಿ ಅವಳ ಮಗು ಆತಂಕದಿಂದ ...ೆ ಹೋಗುವಂತೆ ಒತ್ತಾಯಿಸಿದಾಗ ಶಾಂತಿ ...ಾರವಾಗಿ ಮಗುವನ್ನು ಕ್ಷಣ ದಿಟ್ಟಿಸಿ ನೋಡಿ ...ದ್ದಳು.

...ದರೆ ಆ ಮುಖದಲ್ಲಿ ಯಾವ ಭಾವನೆ ...ಎಂದು ಹುಡುಗಿಗೆ ಗುರುತಿಸಲಾಗಲಿಲ್ಲ, ಆದರೆ ...ಯಾವುದೋ ನಿರ್ಧಾರ ಮಾತ್ರ ಇದೆ ಎನಿಸುವಂತೆ ... ತೊಯ್ದು ನಡುಗುತ್ತಿದ್ದ ಮಗುವನ್ನು ಎತ್ತಿ ...ಲ್ಲಿರಿಸಿಕೊಂಡಳು. ಪೂರಾ ತೊಯ್ದಿದ್ದ ಸೆರಗನ್ನೇ ... ತಲೆಯ ಮೇಲೆ ಹೊದೆಸಿ ಭಾರವಾದ ಹೆಜ್ಜೆ ...ತ್ತ ಅಲ್ಲಿಂದ ಹೊರಟಳು. ಆದರೆ ಮನೆಯ ...ಆದಾಗಿರಲಿಲ್ಲ, ಈ ಬಾರಿ ಪುಟ್ಟ ಹುಡುಗಿಯ ...ನಲ್ಲಿ ಶಾಂತಿ ಮಗುವನ್ನೆತ್ತಿಕೊಂಡು ಕತ್ತಲೆಯಲ್ಲಿ ...ಹಾಕಿ ನಡೆಯುತ್ತಿರುವ ಚಿತ್ರ ಅಳಿಸಿ ಹಾಕದಂತೆ ... ಹೋಗಿತ್ತು.

...ದಿನಿಂದ ಒಂದು ವಾರವಾದರೂ ಶಾಂತಿ ... ದಾರಿಯಲ್ಲಿ ಕಾಣದಿದ್ದಾಗ, ಯಾರನ್ನು ...ೇಕೆಂದು ಗೊತ್ತಾಗದೆ ಹುಡುಗಿ ಒದ್ದಾಡಿದಳು. ... ಧೈರ್ಯ ಕೂಡಿಸಿ ದೀಪೂನ ಸ್ಕೂಲ್ ಆಯಾಗೆ ...ನ್ ಇವತ್ತು ಬಂದಿಲ್ಲವಾ?" ಎಂದು ಕೇಳಿದ್ದಕ್ಕೆ ... ಅಷ್ಟೇ ಅನಾಸಕ್ತಿಯಿಂದ "ಇವತ್ತಿಗೆ ಒಂದ್ವಾರ ... ಆ ಉದ್ದ ಬಂದಿಲ್ಲಾ, ಆ ಯಮ್ಮಾನೂ ಒಂದ್ಮಾತ ...ಓಗಿಲ್ಲ" ಎಂದಳು. ಆ ಹುಡುಗಿಯ ಕಣ್ಣಲ್ಲಿ ...ದ ಚಿತ್ರ ಅದ್ಯಾಕೋ ಮಂಜಾಗತೊಡಗಿತು.

-ರಾಜಲಕ್ಷ್ಮಿ ಅಂಕಲಗಿ



ಶುಭಂ- THE BEGINNING ಅಲ್ಲ THE END

ಶುರುವಿನಲ್ಲೇ ಮುಗಿಯಿತೇನೋ ಅನ್ನುವ ಹಾಗೆ 'ಶುಭಂ' ಸಿನಿಮಾ ಶುರುವಾಗುತ್ತೆ, ಹಾಗೆ ಶುರುವಾಗುವ ಮುನ್ನ ಮುಗಿದಿದ್ದರೆ ಚೆನ್ನಾಗಿರುತ್ತಿತ್ತೇನೋ ಅನ್ನಿಸುತ್ತದೆ ಸಿನಿಮಾ ನೋಡುತ್ತಾ ಹೋದಂತೆ. ಯಾಕೆಂದರೆ ಸಿನಿಮಾ ಎಲ್ಲಿಂದಲೋ ಶುರುವಾಗಿ, ಎಲ್ಲಿಗೋ ಹೋಗಿ, ಮುಂದಿಂದ ಹಿಂದಕ್ಕೆ ಬಂದು, ಯುವ ಪ್ರೇಮಿ ಮುದುಕನಾಗುವವರೆಗೂ ಮೆಗಾ ಧಾರಾವಾಹಿ ತರಹ ಸಾಗಿ ಕೊನೆಗೂ ಮುಗಿಯುವುದಕ್ಕೆ ಮೂರು ಗಂಟೆ ಹಿಡಿಯುತ್ತೆ, ಇದಕ್ಕೆ ಕಾರಣ ಸಿನಿಮಾದ ನಿರ್ದೇಶಕ ರವಿ ಗರಣಿ ಧಾರಾವಾಹಿ ನಿರ್ದೇಶಕರಾಗಿರುವುದೆ ಇರಬಹುದು. ಇರಲಿ.


ಜನರಿಗೆ ಒಂದೇ ಚಿತ್ರದಲ್ಲಿ ಎರಡು ರೀತಿಯ ಸಿನಿಮಾ ತೋರಿಸುತ್ತೇನೆ — ಒಂದು ಕ್ಲಾಸ್‌ಗೆ, ಇನ್ನೊಂದು ಮಾಸ್‌ಗೆ — ಅಂತ ನಿರ್ದೇಶಕ ಗರಣಿ ಮತ್ತು ನಿರ್ಮಾಪಕ ಶೆಟ್ಟಿ ಪ್ರಚಾರ ಮಾಡಿದ್ದರು. 'ನಾವು ನೋಡುತ್ತಿರೋದು ಯಾವುದು' ಅಂತ ಪತ್ರಕರ್ತ ಮಿತ್ರರನ್ನು ಕೇಳಿದೆ. ಅವರು ಅನುಮಾನದಿಂದಲೇ 'ಮಾಸ್ ಇರಬೇಕು?' ಅಂದರು. 'ಇನ್ನು ನಾಲ್ಕು ವಾರದಲ್ಲಿ ಕ್ಲಾಸ್ ವರ್ಶನ್ನು ರಿಲೀಸ್ ಮಾಡುತ್ತಾರಂತೆ' ಅಂತ ಹೇಳಿದರು. ಇದನ್ನು ನೋಡುವುದೇ ಸಂಕಟವಾಯಿತು, ಇನ್ನು ಇನ್ನೊಂದು ವರ್ಶನ ಬಂದರೆ ನೋಡುವವರು ಯಾರು? ಕ್ಲಾಸ್, ಮಾಸ್ ಬಿಡಿ, ಈ ಚಿತ್ರಕ್ಕೆ ಲಾಸ್ ಅಂತೂ ಖಚಿತ.

ಕಥೆ: ಮೂರು ಜನ ಅಣ್ಣ ತಮ್ಮಂದಿರಿರುತ್ತಾರೆ. ಅವರಲ್ಲಿ ಒಬ್ಬ ಕಿಶೋರ್. ಇನ್ನಿಬ್ಬರ ಹೆಸರು ನೆನಪಿಲ್ಲ, ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವುದು ಬೇಡ. ಯಾಕೆಂದರೆ ತಲೆ ಕೆಡಿಸಿಕೊಳ್ಳಬೇಕಾದ ವಿಷಯ ಈ ಸಿನಿಮಾದಲ್ಲಿ ಬೇಕಾದಷ್ಟಿದೆ. ಮೂವರೂ ಚೂಪಾದ ಉದ್ದನೆ ಮೀಸೆ ಬಿಟ್ಕೊಂಡಿರುವುದರಿಂದ ಅವರೆಲ್ಲ ಕೇಡಿಗಳು ಅಂತ ಖಚಿತವಾಗಿ ಗೊತ್ತಾಗುತ್ತೆ, ಅವರಿಗೆ ಒಬ್ಬ ಮುದ್ದಾದ ತಂಗಿ — ಪ್ರಿಯಾ (ಸಂಜೀತಾ) — ಇರುತ್ತಾಳೆ. ಅವಳು ಮನೆಯಲ್ಲಿ ಒಂದು ಕ್ಷಣ ಕಾಣದಿದ್ದರೆ ಸಾಕು, ಎಲ್ಲರೂ ತಲೆ ಕೆಟ್ಟು ರೇಬೀಸ್ ಬಂದಿರುವ ನಾಯಿಗಳ ತರಹ ಆಡುತ್ತಾರೆ. ಅವಳು ಅಂತಹದ್ದೇನನ್ನೂ ಕಡಿಯುತ್ತಿರುವುದಿಲ್ಲ, ನೀರಿನಲ್ಲಿ ಬಿದ್ದು ಹಾಡು ಹೇಳುತ್ತಿರುತ್ತಾಳೆ ಅಷ್ಟೆ. 'ಅಣ್ಣಂದಿರು ಯಾವ ಹುಡುಗನನ್ನು ತಂದರೂ ಪರವಾಗಿಲ್ಲ, ನಾನು ಅವನನ್ನು ನೋಡದೇ ಮದುವೆಯಾಗಲು ರೆಡಿ' ಅನ್ನುವಷ್ಟು ಒಳ್ಳೆ ತಂಗಿ ಪ್ರಿಯಾ. ಅವರು ಒಬ್ಬ ಪಂಡನನ್ನು ತಂದು ಅವಳಿಗೆ ಮದುವೆ ಮಾಡಲು ತಯ್ಯಾರಿ ನಡೆಸುತ್ತಾರೆ. ಯಾಕೆಂದರೆ ಕಂಸನ ತರಹ ಅವಳಿಗೆ ಮುಂದೆ ಹುಟ್ಟುವ ಮಗುವಿನಿಂದ ಅಣ್ಣಂದಿರು ನಾಶವಾಗುತ್ತಾರೆ ಅಂತ ಒಬ್ಬ ಭವಿಷ್ಯ ಹೇಳಿರುತ್ತಾನೆ.

ಆದರೆ ಮದುವೆಯ ಮುಂಚೆ ಪ್ರಿಯಾಳನ್ನು . ಕೇಬಲ್ ಆಪರೇಟರ್ ವೆಂಕಿ (ಶಿವಧ್ವಜ್) ಕಿಡ್ನಾಪ್ ಮಾಡಿ ಕಾಡಿಗೆ ಕರೆದುಕೊಂಡು ಹೋಗುತ್ತಾನೆ. ಹಾವು, ಏಡಿ, ಮೊಸಳೆ, ಆನೆ, ಎಲ್ಲಾ ರೀತಿಯ ಪ್ರಾಣಿಗಳ ಜೊತೆ ಉದ್ದ ಕೂದಲು ಬಿಟ್ಟುಕೊಂಡ ವೆಂಕಿನೂ ಒಂದು ಪ್ರಾಣಿ ತರಹ ಇರುತ್ತಾನೆ. ಚಿತ್ರದ ಹೀರೋಯಿನ್ ಕಾಡಿನಲ್ಲಿ ಸೀರೆ ಹಾಕಿಕೊಂಡು ಓಡುವುದು ಸರಿ ಇರಲ್ಲಾ ಅಂತ ನಿರ್ದೇಶಕರು ಮೊದಲೇ ಅವಳ ಸೀರೆಯನ್ನು ಮುಳ್ಳಿಗೆ ಸಿಗಿಸಿ 'ಸತ್ಯಂ ಶಿವಂ ಸುಂದರಂ'ನಲ್ಲಿ ಜೀನತ್ ಅಮಾನ್ ಧರಿಸಿರುವಂತಹ ಅರೆ ಬಟ್ಟೆಯನ್ನು ಪ್ರಿಯಾಗೆ ತೊಡಿಸಿದ್ದಾರೆ. ಅಣ್ಣಂದಿರು ಇವರಿಬ್ಬರನ್ನು ಫಾಲೋ ಮಾಡುತ್ತಾರೆ. ಆದರೆ ಪ್ರಿಯಾ ವೆಂಕಿಯ ಪ್ರೀತಿಯ ಬುಟ್ಟಿಗೆ ಬೀಳುವವರೆಗೂ ಅವರ ಕೈಗೆ ಸಿಗುವುದಿಲ್ಲ, ಇಬ್ಬರೂ ಅಣ್ಣಂದಿರ ಕೈಗೆ ಸಿಕ್ಕಿ ಬಿದ್ದ ಮೇಲೆ ಅವಳು ವೆಂಕಿಯನ್ನೇ ಮದುವೆಯಾಗುವುದಾಗಿ ಅವರನ್ನು ಒಪ್ಪಿಸುತ್ತಾಳೆ. ಆದರೆ ಅವರು ನಿಜವಾಗಲು ಒಪ್ಪಿರುವುದಿಲ್ಲ, ಮುಂದೇನು ನಡೆಯುತ್ತೆ ಅಂತ ಡಿಟೈಲಾಗಿ ಇಲ್ಲಿ ಹೇಳಲು ನನಗೆ ತಾಳ್ಮೆ ಇಲ್ಲ, ಸ್ವಲ್ಪ ಎಗರಿಸಿ ಹೇಳ್ತೀನಿ. ಅವನಿಗೆ ಬ್ರೈನ್ ಟ್ಯೂಮರ್ ಇದೆ ಅಂತ ಪ್ರಿಯಾಳಿಗೆ ಹೇಳಲು ಡಾಕ್ಟರ್‌ಗೆ ಲಂಚ ಕೊಡುತ್ತಾರೆ. ಇತ್ತೀಚೆಗೆ ಹಲವಾರು ಸಿನಿಮಾಗಳಲ್ಲಿ ಇದೇ ಕಾಯಿಲೆ ('ಅಮೃತಧಾರೆ', 'ಹಠವಾದಿ') ನೋಡಿ, ನನಗೂ ಬ್ರೈನ್ ಟ್ಯೂಮರ್ ಬಂದಿರಬಹುದು ಅನ್ನಿಸಲು ಶುರುವಾಗಿದೆ.

ಅಣ್ಣಂದಿರು ಕೆಟ್ಟವರು ಅಂತ ತಂಗಿಗೆ ಹೇಳಲು ಪ್ರಯತ್ನ ಮಾಡುವ ತಾತನನ್ನು (ಲೋಕನಾಥ್) ಕೋಲಿನಲ್ಲಿ, ಇಟ್ಟಿಗೆಯಲ್ಲಿ 'ಪಟ್' ಅಂತ ತಲೆ ಮೇಲೆ ಹೊಡೆದು ಹಾಸ್ಯಮಯವಾಗಿ ಕೊಲ್ಲುತ್ತಾರೆ. ವೆಂಕಿಯನ್ನೂ ಹೊಡೆದು ನಿರ್ಜೀವ ಮಾಡುತ್ತಾರೆ. ಇಷ್ಟರಲ್ಲಿ ನಾನೂ ಒಂದು ರೀತಿಯಲ್ಲಿ ಕೋಮಾಗೆ ಜಾರಿದ್ದೆ. ಸಾಯುವ ಮುಂಚೆ ಕಿಶೋರನ ಹೆಂಡತಿ 'ನಿನ್ನ ಅಣ್ಣಂದಿರು ನೀಚರು' ಅಂತ ಪ್ರಿಯಾಗೆ ಹೇಳಿ ಸಾಯುತ್ತಾಳೆ. ರೋಲ್ ರಿವರ್ಸಲ್ ಆಗಿ ಈಗ ಪ್ರಿಯಾ ತನ್ನ ಪ್ರೇಮಿ ವೆಂಕಿಯನ್ನು ಆಸ್ಪತ್ರೆಯಿಂದ ಕಿಡ್ನಾಪ್ ಮಾಡುತ್ತಾಳೆ. ಅಣ್ಣಂದಿರು ಮತ್ತೆ ಫಾಲೋ ಮಾಡುತ್ತಾರೆ. ಇಷ್ಟು ಹೊತ್ತಿಗೆ ಪ್ರೇಕ್ಷಕರಂತೂ ಕಥೆ ಫಾಲೊ ಮಾಡುತ್ತಿರಲ್ಲ, ಅಣ್ಣಂದಿರಾದರೂ ಮಾಡಲಿ ಬಿಡಿ ಅನ್ನಿಸುತ್ತೆ.

ಅಣ್ಣಂದಿರು ವೆಂಕಿಗೆ ಚೂರಿ ಹಾಕಲು ಹೋದಾಗ ಎಂದಿನಂತೆ ಹೀರೋಯಿನ್ ಬಂದು ತನ್ನ ಕರುಳನ್ನು ಚೂರಿಗೆ ಧಾರಾಳವಾಗಿ ನೀಡುತ್ತಾಳೆ. ಬಾಟ್ಲಿಗಟ್ಟಲೆ ರಕ್ತ ಸುರಿಯುತ್ತೆ, ವೆಂಕಿ ನಿರ್ಜೀವವಾಗಿಯೇ ಅಣ್ಣಂದಿರನ್ನು ಹೊಡೆಯುತ್ತಾನೆ. ಇನ್ನೇನು ಅವರನ್ನು ಖಲಾಸ್ ಮಾಡಬೇಕು ಅನ್ನುವಾಗ ರಕ್ತಮಯವಾಗಿರುವ ಆದರೆ ಇನ್ನೂ ಸಾಯದಿರುವ ತಂಗಿ ಬಂದು ಅವರನ್ನು ಬಿಡು ಅಂತ ಮೈಲಿ ಉದ್ದ ಡೈಲಾಗ್ ಹೊಡೆದು ಸಾಯುತ್ತಾಳೆ. ವೆಂಕಿಗೆ ಮುಪ್ಪು ಬಂದರೂ ಪ್ರಿಯಾಳಿಗೊಂದು ಸಮಾಧಿ ಕಟ್ಟಿ ಬಿಸಿಲು, ಗಾಳಿ, ಮಳೆಯಿಂದ ರಕ್ಷಣೆ ಕೊಡುತ್ತಾ 'ಪ್ರೀತಿ ಅಂದರೆ ಇದೇನಾ'? ಅಂತ ಕೇಳುತ್ತಾ ಕಾಲ ಕಳೆಯುತ್ತಾನೆ. ನಮಗೇನು ಗೊತ್ತು? ನಾನಂತೂ ನನ್ನ ಜೀವಮಾನದಲ್ಲಿ ಇಂತಹ ಪ್ರೀತಿ ಅನುಭವಿಸಿಲ್ಲ, ನೋಡಿಲ್ಲ.



ಕವಿತಾ ಲಂಕೇಶ್

ಸಿನಿಮಾ ಮಾಡಿರುವ ಶೈಲಿ ಸ್ಟೈಲಾಗಿದೆ. ಶಿವಧ್ವಜ್ ಜೀವಂತವಾಗಿರುವಾಗಲೂ, ನಿರ್ಜೀವವಾಗಿರುವಾಗಲೂ ಚೆನ್ನಾಗಿ ನಟಿಸಿದ್ದಾರೆ. ಗಿರಿಯವರ ಛಾಯಾಗ್ರಹಣ ಅದ್ಭುತವಾಗಿದೆ. ಡಿ.ಟಿ.ಎಸ್ ಕೆಲಸ ಚೆನ್ನಾಗಿದೆ. ಆರು ಸಾವಿರ ಅಡಿಯನ್ನು ಆಪ್ಟಿಕಲ್ಸ್ ಮಾಡಿದ್ದಾರಂತೆ.

ಇಲ್ಲೊಂದು ಮಾತು: ಇಷ್ಟೆಲ್ಲಾ ಹಣ ವೆಚ್ಚ ಮಾಡುವ ಬದಲಾಗಿ ಬಟ್ಟೆಯಾಗಿ ತಲೆ ಉಪಯೋಗಿಸಬಹುದಿತ್ತು. ಏಕೆಂದರೆ ಕ್ರಿಯಾಶೀಲತೆಗೆ ಹಣ ಬೇಡ. ಆದ್ದರಿಂದ ಕಥೆ ಮತ್ತು ಚಿತ್ರಕಥೆಯ ಮೇಲೆ ಮೊದಲೇ ಕೆಲಸ ಮಾಡಿದ್ದರೆ 'ಶುಭಂ' ಒಳ್ಳೆ ಸಿನಿಮಾ ಆಗುವ chances ಇತ್ತು. ಹಾಗೆ ಮಾಡದಿದ್ದಕ್ಕೆ 'ಶುಭಂ' ಬಿಗಿನಿಂಗ್ ಆಗುವ ಬದಲಾಗಿ ಫಿನಿಶ್ ಆಗಿದೆ.

...ಮಾಹಿತಿ 'ಉದಯವಾಣಿ'ಗೆ ದೊರಕಿದ್ದು ಹೇಗೆ? ...ದ್ರ ಗುಪ್ತದಳ" ಸರ್ಕಾರಕ್ಕೆ ಸಲ್ಲಿಸಿದ ...ಯೊಂದರಲ್ಲಿ ಇದನ್ನೆಲ್ಲ ತಿಳಿಸಲಾಗಿದೆಯಂತೆ! ...ಯವಾಣಿ'ಯ ಇಡೀ ವರದಿ, "ಎನ್ನಲಾಗಿದೆ", ...ದು ಹೇಳಲಾಗಿದೆ", "ತಿಳಿದು ಬಂದಿದೆ", ...ಲಗಳು ತಿಳಿಸಿವೆ", "ಗುಪ್ತ ದಳದ ವರದಿಯಲ್ಲಿ ...ೇಖಿಸಿದೆ ಎನ್ನಲಾಗಿದೆ"-ಈ ಬಗೆಯ ...ಚನೆಗಳಿಂದ ತುಂಬ ಹೋಗಿದೆ. ಮಾತಿನ ...ಸತ್ಯತೆಯನ್ನು ... ಹಚ್ಚ... ...ಲು ಸಾಧ್ಯವೇ ...ಂತೆ ...ಚಿಕೊಳ್ಳುವ ...ದ್ಯ ಶೈಲಿ ...ಯವಾಣಿ'ಗೆ ...ವಾಗಿರುವಂತ ... ವರದಿ ... ಗುತ್ತಿ ಬಳ... ...ತ್ತಿರುವುದು ... ಒಂದು ...ಯನ್ನು-ISI ಅದಕ್ಕೆ ನೆರವಾಗುತ್ತಿರುವ ... ಅಕ್ರಮ ವಲಸಿಗರು ಮತ್ತು ಇವರಿಗೆ ಇಲ್ಲಿ ...ಲ್ಲಿಸಿಕೊಟ್ಟಿರುವ ಸ್ಥಳೀಯರು. ಯಾರು ಈ ...ರು? 'ಉದಯವಾಣಿ'ಯ ವರದಿಯಲ್ಲಿ ... ಮುಸ್ಲಿಮರ ಪ್ರಸ್ತಾಪವೇ ಇಲ್ಲ! ಇದು ... 'ಉದಯವಾಣಿ'ಗೆ ವಿಶಿಷ್ಟವಾಗಿರುವ ...ಶೈಲಿ.


...ಉದಯವಾಣಿ'ಯ ಈ ವರದಿ ನಿಜವೇ ಆಗಿದ್ದ... ...ಇದರ ಬಗ್ಗೆ ಸರ್ಕಾರದ ವಿವರಣೆ ಏನು? ...ಯು ಶಾಂತಿ ವೇದಿಕೆಯ ನಿಯೋಗವೊಂದು, ... ಪೋಲೀಸು ವರಿಷ್ಠಾಧಿಕಾರಿ ಮುರುಗನ್ ಅವರನ್ನು ಮುಖತಃ ಕಂಡು ಈ ಕುರಿತು ಪ್ರಶ್ನಿಸಿತು. 'ಉದಯವಾಣಿ'ಯ ವರದಿಯಲ್ಲಿ ಹೇಳಲಾಗಿರುವ ಕೇಂದ್ರ ಗುಪ್ತದಳದ ವರದಿ, ಇದುವರೆಗೂ ತನ್ನ ಗಮನಕ್ಕೆ ಬಂದಿಲ್ಲ ಎಂದು ಅವರು ಸ್ಪಷ್ಟವಾಗಿ ತಿಳಿಸಿದರು. ಕರಾವಳಿ ಜಿಲ್ಲೆಗಳಲ್ಲಿ ಇಷ್ಟು ಭಾರೀ ಸಂಖ್ಯೆಯಲ್ಲಿ ಪಾಕಿಸ್ತಾನಿ ಮತ್ತು ಬಾಂಗ್ಲಾದೇಶಿ ಪ್ರಜೆಗಳು ನೆಲೆಸಿರುವ ಸಾಧ್ಯತೆಯನ್ನೂ ಮುರುಗನ್ ಅಲ್ಲಗಳೆದರು. 'ಉದಯವಾಣಿ'ಯ ಈ ವರದಿ ಕುರಿತು ಜಿಲ್ಲಾ ಪೋಲೀಸು ವರಿಷ್ಠಾಧಿಕಾರಿಗಳನ್ನು ಸಂಪರ್ಕಿಸಿದ ಉಡುಪಿಯ ಹಲವು ಪತ್ರಕರ್ತರಿಗೂ ಅವರು ಇದೇ ಸ್ಪಷ್ಟೀಕರಣ ನೀಡಿದ್ದಾರೆ.


ರಾಜ್ಯದಲ್ಲೂ ಪಾಕ್ ಗೂಢಚರ ಸಂಸ್ಥೆ ಜಾಲ

ಉಡುಪಿ, ದಕ್ಷಿಣ ಕನ್ನಡ , ಉತ್ತರ ಕನ್ನಡ

ಒಟ್ಟಿನಲ್ಲಿ ಈ ವರದಿಯ ವಿವರಗಳು ವಿಶ್ವಾಸಾರ್ಹವಲ್ಲ. ಕರಾವಳಿಯ ಮುಸ್ಲಿಮ್ ಸಮುದಾಯದ ಬಗ್ಗೆ ಅದು ಮಾಡಿರುವ ಅಪಾದನೆಗಳಂತೂ ನೂರಕ್ಕೆ ನೂರು ಸುಳ್ಳು. ಇಂತಹ ವಿಕೃತ ವರದಿಗಳನ್ನೂ, ತಿರುಚಲ್ಪಟ್ಟ ಸುದ್ದಿಗಳನ್ನೂ ಪ್ರಕಟಿಸುವುದರ ಜೊತೆಯಾಂತರ 'ಉದಯವಾಣಿ' ಮುಸ್ಲಿಮರ ಬಗ್ಗೆ ತನ್ನ ಓದುಗರಿಗೆ ಯಾವ ಸಂದೇಶವನ್ನು ರವಾನಿಸುತ್ತಿದೆ ಎಂದು ಊಹಿಸುವುದು ಕಷ್ಟವಲ್ಲ. ಈ ವರದಿ ಪ್ರಕಾರ ISI ಕರ್ನಾಟಕದಲ್ಲಿ ಕೋಮು ಗಲಭೆ ಸೃಷ್ಟಿಸಿ ಶಾಂತಿ ಕದಡುವ ಯತ್ನದಲ್ಲಿ ತೊಡಗಿದೆ. ಆದರೆ ಈ ಕೆಲಸಕ್ಕೆ ಭಜರಂಗಿಗಳ ಜೊತೆ 'ಉದಯವಾಣಿ'ಯೇ ಇರುವಾಗ ISI ಯಾಕೆ ಬೇಕು?

-ಜಿ. ರಾಜಶೇಖರ



ಅಣಕ

ಗಾರ್ದಭೇಶ್ವರ ಸ್ವಾಮಿ ವರಪುತ್ರರು

'ಮಕ್ಕಳ ದಿನಾಚರಣೆ', 'ಮಹಿಳಾ ದಿನಾಚರಣೆ', 'ತಾಯಂದಿರ ದಿನಾಚರಣೆ', 'ಅಂಗ ವಿಕಲರ ದಿನಾಚರಣೆ'... ಹೀಗೆ ಹತ್ತು ಹಲವಾರು ಆಚರಣೆಗಳನ್ನು ಮಾಡುತ್ತಾ ಇದ್ದೀವಿ. ಈ ದಿನಗಳಲ್ಲಿ ಸಂಬಂಧಿಸಿದವರ ಕುರಿತು ಏನಾದರೂ ಕಾಳಜಿ ವಹಿಸ್ತೀವಾ, ಅವರ ಪರಿಸ್ಥಿತಿಯಲ್ಲಿ ಏನಾದರೂ ಪರಿಣಾಮಕಾರಿ ಬದಲಾವಣೆ ಆಗಿದೆಯ ಅನ್ನೋದು ಬೇರೆ ವಿಷಯ. ಅಂತೂ ದಿನಾಚರಣೆಗಳನ್ನಂತೂ ಅದ್ದೂರಿಯಾಗಿ ಮಾಡೇ ಮಾಡ್ತೀವಿ.

ಇವನ್ನೆಲ್ಲ ಯಾಕೆ ಹೇಳಬೇಕಾಯಿತು ಅಂದರೆ ಮೂರ್ಖರಿಗೂ ಒಂದು ದಿನ ಅಂತ ಇದೆ. ಅದು ಏಪ್ರಿಲ್ ಮೊದಲನೇ ದಿನ. ಈ ದಿನವನ್ನು ಆಚರಿಸ್ತೀವಾ ಅನ್ನೋದು ಸಂಶಯದ ವಿಚಾರವೇ ಸರಿ. ಆದರೆ ತುಮಕೂರಿನ 'ನಗೆಮಲ್ಲಿಗೆ' ಸಂಘಟನೆಯವರು ಮೂರ್ಖರ ದಿನವನ್ನು ಅದ್ದೂರಿಯಾಗಿ ಕಳೆದ ಹಲವಾರು ವರ್ಷಗಳಿಂದ ಆಚರಿಸುತ್ತಾ ಇದ್ದಾರೆ! ಈ ವರ್ಷ ಅದರ ಬೆಳ್ಳಿ ಹಬ್ಬದ ಆಚರಣೆ ಆಯಿತು. ಗಾರ್ದಭ ಸ್ವಾಮಿಯ ಮೆರವಣಿಗೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮ ಇಡೀ ದಿನ ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ ಭರ್ಜರಿಯಾಗಿ ನಡೆಯಿತು.

ಒಂದು ಅಂದಾಜಿನ ಪ್ರಕಾರ ಪ್ರಪಂಚದ ಜನ ಸಂಖ್ಯೆಯಲ್ಲಿ ಶೇಕಡ ತೊಂಬತ್ತೇಳು ಮಂದಿ ಮೂರ್ಖರೇ ಅಂತೆ! ದುರಂತದ ಸಂಗತಿ ಎಂದರೆ ಅವರು ಮೂರ್ಖರು ಎಂಬುದು ಅವರಿಗೆ ತಿಳಿದೇ ಇರುವುದಿಲ್ಲ! ಈ ಜ್ಞಾನೋದಯ ಆದ ಕ್ಷಣವೇ ಅವರ ಭಾಗ್ಯದ ಬಾಗಿಲು ತೆರೆಯುತ್ತೆ. ವಿವಿಧ ಕ್ಷೇತ್ರಗಳಲ್ಲಿನ ಪ್ರಮುಖರಿಗೆ ಹೀಗಾದಾಗ, 'ಅರೆ ನಾನೆಂತಹ ಮೂರ್ಖ ಕೆಲಸ ಮಾಡಿದೆ' ಅನ್ನಿಸಿದಾಗ ಈ ದೇಶದ ಭವಿಷ್ಯ ಉಜ್ವಲ ಆಗಲು ಪ್ರಾರಂಭ ಆಗುತ್ತೆ. ಹಾಗೆ ಅನ್ನಿಸುವುದಿಲ್ಲವಲ್ಲ ಅನ್ನೋದೆ ದುಃಖದ ಸಂಗತಿ.

ಮೂರ್ಖರ ದಿನಾಚರಣೆಯ ಉದ್ದೇಶ ತಮ್ಮನ್ನು ತಾವೇ ಗೇಲಿ ಮಾಡಿಕೊಳ್ಳುವುದು. ಬೇರೆಯವರು ಹಾಸ್ಯದ ಸರಕಾದಾಗ ನಾವು ನಗುತ್ತೇವೆ. ಆದರೆ ನಾವೇ ಹಾಸ್ಯದ ಸರಕಾದಾಗ ನಗಲು ವಿಶಾಲ ಹೃದಯ ಬೇಕು.

ನಗು ಯಾರ ಸ್ವತ್ತೂ ಅಲ್ಲ. ಮೇಲು-ಕೀಳು, ಬಡವ-ಬಲ್ಲಿದ, ಹೆಣ್ಣು-ಗಂಡು, ಹಿರಿಯ-ಕಿರಿಯ ಇಂತಹ ಯಾವ ಭೇದ ಭಾವವೂ ನಗುವಿಗೆ ಇಲ್ಲ. ನಮ್ಮ ಕೊಳಕು ಮನಸ್ಸು, ದುರಹಂಕಾರ, ಗಂಭೀರತೆಯ ಸೋಗು ಇದಕ್ಕೆ ಅಡ್ಡ ಬರಬಹುದು ಅಷ್ಟೆ. ಹಾಗೆ ನೋಡಿದರೆ ಶ್ರೀಮಂತರು, ಮಧ್ಯಮ ವರ್ಗದವರು ಇವರಿಗಿಂತ ಮನಸ್ಸು ಪೂರ್ತಿಯಾಗಿ ನಗುವವರು ಬಡವರೇ!

ನಗಿಸುವುದು ಸುಲಭದ ಮಾತಲ್ಲ. ಕೆಲವರಿರುತ್ತಾರೆ. ಅವರಿದ್ದರೆ ಇಡೀ ಗುಂಪು ನಗುವಿನ ಅಲೆಯಲ್ಲಿ ತೇಲುತ್ತೆ. ಸಂದರ್ಭಕ್ಕೆ ತಕ್ಕಂತೆ ನಗೆ ಬಾಂಬುಗಳನ್ನು ಅವರು ಎಸೆಯುತ್ತಲೇ ಇರುತ್ತಾರೆ. ಅದು ಅವರ ಸ್ವಭಾವಕ್ಕೇ ಹೊಂದಿಕೊಂಡಿರುವ ಗುಣ. ಹಾಗೆಂದು ಅಂತಹವರೆಲ್ಲರೂ ವಿನೋದ ಸಾಹಿತ್ಯ ಸೃಷ್ಟಿಸುವರು ಎಂದೇನೂ ಇಲ್ಲ. ವಿನೋದ ಸಾಹಿತಿಗಳೆಲ್ಲರೂ ಹೀಗೆ ನಗೆ ಬಾಂಬುಗಳನ್ನು ಸಿಡಿಸುತ್ತಲೇ ಇರುತ್ತಾರೆ ಅಂತಾನೂ ಅಲ್ಲ.

ವಿನೋದ ಸಾಹಿತ್ಯ ಸೃಷ್ಟಿಗೆ ಸರಕಿಗೇನೂ ಕೊರತೆ ಇಲ್ಲ. ವಿವಿಧ ಕ್ಷೇತ್ರಗಳಲ್ಲಿನ ಪ್ರಮುಖರು ಇದನ್ನು ಧಾರಾಳವಾಗಿಯೇ ಒದಗಿಸುತ್ತಾರೆ. ಇವರು ನಮ್ಮ 'ಗೌರವಾನ್ವಿತ ದಗಾಕೋರರು'. ಇಂತಹವರನ್ನು ಗುರುತಿಸುವ ಕಣ್ಣು ಬೇಕು ಅಷ್ಟೆ. ಇತ್ತೀಚೆಗೆ ನಮ್ಮ ಸಾಂಸ್ಕೃತಿಕ ಲೋಕದ ಗಣ್ಯರೂ ಈ ಗೌರವಾನ್ವಿತರ ಗುಂಪು ಸೇರಿ ವಿನೋದ ಸಾಹಿತಿಗಳಿಗೆ ಸೊಗಸಾದ ಸರಕನ್ನು ಒದಗಿಸುತ್ತಿರುವುದು ರೋಚಕ ಸಂಗತಿ ಆಗಿದೆ!



ಎಂಬತ್ತರ ದಶಕದಲ್ಲಿ ಕನಕಪುರ ಸಾಹಿತ್ಯ ಅಕಾಡೆಮಿ ಮಂಡ್ಯ ನಗರದಲ್ಲಿ ವಿನೋದ ಸಾಹಿತ್ಯ ಕುರಿತ ವಿಚಾರ ಸಂಕಿರಣ ಏರ್ಪಡಿಸಿತ್ತು. ಆಗ ಎದುರಾದ ಪ್ರಶ್ನೆ ಎಂದರೆ ಈ ಸಂಕಿರಣಕ್ಕೆ ಏನು ಹೆಸರಿಡಬೇಕು? 'ಕನ್ನಡ ಸಾಹಿತ್ಯದಲ್ಲಿ ವಿನೋದ' ಎಂದೋ? ಅಥವಾ 'ಕನ್ನಡದಲ್ಲಿ ವಿನೋದ ಸಾಹಿತ್ಯ' ಎಂದೋ? ಈ ಪ್ರಶ್ನೆ ಉದ್ಭವಿಸಲು ಕಾರಣ ಏನು ಅಂದರೆ ಕನ್ನಡ ಸಾಹಿತ್ಯದಲ್ಲಿ ಹಾಸ್ಯ ಆಗೊಮ್ಮೆ ಈಗೊಮ್ಮೆ ಮಿಂಚಿರಬಹುದಾದರೂ ಹಾಸ್ಯ ಸಾಹಿತ್ಯ ಪ್ರಕಾರ ಅಷ್ಟಾಗಿ ಇನ್ನೂ ಬೆಳೆದಿಲ್ಲ ಎನ್ನುವುದಾಗಿತ್ತು. ಈಗ ಅಂತಹ ಪರಿಸ್ಥಿತಿ ಇಲ್ಲ. ನಿಯತಕಾಲಿಕಗಳು ಮಾತ್ರ ಅಲ್ಲ, ದಿನಪತ್ರಿಕೆಗಳೂ ವಿನೋದ ಲೇಖನಗಳನ್ನು ಬಳಸಲೇ ಬೇಕಾದ ಅನಿವಾರ್ಯ ಸ್ಥಿತಿ ಇದೆ. ಜನರು ಬಯಸುವ ಇಂತಹ ವಿನೋದ ಲೇಖನಗಳನ್ನು ಕೊಡದಿದ್ದರೆ ತಮ್ಮ ಪತ್ರಿಕೆಯ ಪ್ರಸಾರ ಸಂಖ್ಯೆ ಇಳಿಮುಖವಾಗಬಹುದು ಎಂಬ ಆತಂಕ ಅವರನ್ನು ಕಾಡುತ್ತಿದೆ. ಎಲ್ಲ ಟಿವಿ ಚಾನೆಲ್‌ಗಳೂ ಹಾಸ್ಯ ಧಾರಾವಾಹಿಗಳನ್ನು ಪ್ರಸಾರಮಾಡುತ್ತಿವೆ. ಜೀ ಟಿವಿಯವರು ಹಾಸ್ಯಕ್ಕೆಂದೇ ಮೀಸಲಾದ SMILE ಎಂಬ ಚಾನೆಲ್ ಪ್ರಾರಂಭಿಸಿದ್ದಾರೆ. ಇಷ್ಟೊಂದು ಜನಪ್ರಿಯತೆ ಗಳಿಸಿರುವ ಹಾಸ್ಯ ಸಾಹಿತ್ಯವನ್ನು, ಸಾಹಿತಿಗಳನ್ನು ಇತರೆ ಪ್ರಕಾರದ ಸಾಹಿತಿಗಳು ಗಂಭೀರವಾಗಿ ಪರಿಗಣಿಸಿದ್ದಾರೆಯೆ ಎಂದರೆ ಬಹಳಷ್ಟು ಜನರ ದೃಷ್ಟಿಯಲ್ಲಿ ಇದು ಸಾಹಿತ್ಯವೇ ಅಲ್ಲ, ಅವರು ಸಾಹಿತಿಗಳೇ ಅಲ್ಲ! ಜಿ.ಎಸ್ ಶಿವರುದ್ರಪ್ಪ ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ವಿನೋದ ಸಾಹಿತ್ಯ ಪ್ರಕಾರಕ್ಕೇ ಒಂದು ಪ್ರಶಸ್ತಿಯನ್ನು ಇರಿಸಿದ್ದರು. ಆದರೆ ಯಾವಾಗಲೋ ಏನೋ ಅದು ಮಾಯ ಆಯಿತು! ಇಂತಹ ಪ್ರವೃತ್ತಿಗಳಿಗೆಲ್ಲ ಯಾರು ಕಾರಣರು? ಏನು ಕಾರಣ?

ಚಿತ್ರ ನಟ ಕಮಲಹಾಸನ್ ಅವರನ್ನು ಒಂದು ಸಂದರ್ಶನದಲ್ಲಿ ಕೇಳಲಾಯಿತು: 'ನಿಮಗೆ ಹಾಸ್ಯ ಪ್ರಧಾನ ಪಾತ್ರಗಳು ಇಷ್ಟವೋ, ಗಂಭೀರ ಪ್ರಧಾನ ಪಾತ್ರಗಳು ಇಷ್ಟವೋ?' ಅವರ ಉತ್ತರ ಮಾರ್ಮಿಕ ಆಗಿತ್ತು. ಅವರೆಂದರು: 'ನನಗೆ ಹಾಸ್ಯ ಪ್ರಧಾನ ಪಾತ್ರಗಳು ಇಷ್ಟ. ಆದರೆ ಅವರು ನನ್ನನ್ನು ಎಲ್ಲಿ ವಿದೂಷಕ ಎಂದು ತಿಳಿದುಕೊಳ್ಳುತ್ತಾರೋ ಎಂಬ ಆತಂಕ ಇದೆ'.

ವಿನೋದ ಸಾಹಿತಿಗಳನ್ನು ಇಂತಹದ್ದೇ ರೀತಿಯಲ್ಲಿ ಜನರು ಪರಿಭಾವಿಸುತ್ತಾರೆ. ಅವನು ನಿಷ್ಪ್ರಯೋಜಕ, ಎಲ್ಲವನ್ನೂ ಲಘುವಾಗಿ ಸ್ವೀಕರಿಸಿ ನಗೆಯಲ್ಲಿ ತೂ... ಬಿಡುವವನು! ಇಂತಹ ಅಭಿಪ್ರಾಯ ಬರಲು ವಿನೋ... ಸಾಹಿತಿಗಳೂ ಬಹಳಷ್ಟು ಕಾರಣ ಎನ್ನುವುದನ್ನು ಮರೆಯಬಾರದು.

ಹಾಸ್ಯ ಸಾಹಿತ್ಯ ಇವತ್ತು ವಿಸ್ತಾರವಾಗಿ ಬೆಳೆದಿ... ನಿಜ. ಆದರೆ ಗುಣಮಟ್ಟ ಹೇಳಿಕೊಳ್ಳುವ ಹಾಗಿದೆ... ಇನ್ನೂ ನಮ್ಮ ಬಹಳಷ್ಟು ಲೇಖಕರು ಅಡಿಗೆ... ಹೆಂಗಸರನ್ನು ಬಿಟ್ಟು ಹೊರಗೆ ಬಂದೇ ಇಲ್ಲ. ... ತಿಂಡಿ ವರ್ಣನೆ, ಹೆಂಗಸರ ಲೇವಡಿ ಇದೇ ಅವ... ಹಾಸ್ಯದ ಸರಕು. ಅದನ್ನು ಬಿಟ್ಟರೆ ಕಾಮ. ಇದ... ಪೂರಕವಾಗಿ ಹೆಣ್ಣಿನ ವರ್ಣನೆ! ಈ ಪ್ರಪಂಚದ ನೋ... ಸಂಕಟಗಳಿಗೆ ಇವರ ಕಣ್ಣು ಕುರುಡು! ಇಂತಹ ಸಾಹಿ... ವನ್ನು ಯಾವ ಪ್ರಜ್ಞಾವಂತ ಮೆಚ್ಚಿಯಾನು...

ನಗೆ ಸಾಹಿತಿ ಒಬ್ಬ ಗಂಭೀರ ಚಿಂತ... ಈ ನಾಡಿನ ಜನರ ನೋವು ನಲಿವುಗಳ... ಸ್ಪಂದಿಸುವವ. ಮಾನವೀಯ ಮೌಲ್ಯಗಳ... ಅಪಚಾರ ಆದಾಗ ಅವನ ಮನಸ... ಕುದಿಯುತ್ತದೆ. ಇದಕ್ಕೆ ಕಾರಣಕರ್ತನಾ... ವ್ಯಕ್ತಿ ವ್ಯವಸ್ಥೆಗಳಿಗೆ ಹಾಸ್ಯದ ಚಿಕಿತ್ಸೆ ನೀಡುತ್ತಾ... ಆದರೆ ಇವತ್ತು ಏನಾಗಿದೆ ಅಂದರೆ ಹಾಸ್ಯಕ್ಕೆ ಇರು... ಜನಪ್ರಿಯತೆಯೇ ಅದಕ್ಕೆ ಕುತ್ತು ಆಗುವ ಪರಿಸ್ಥಿ... ಇದೆ. ನಗುವೂ ಮಾರಾಟದ ಸರಕಾಗಿದೆ. ಅದನ್ನು ಮಾರಾಟ ಮಾಡಲು ಅಸಲಿ ನಗೆಗಾರರ ಜೊತೆ ನಕ... ನಗೆಗಾರರೂ ಅಂಗಡಿ ತೆಗೆಯುತ್ತಿದ್ದಾರೆ. 'ನಗೆ ಸಂಜೆ' 'ನಗೆ ಕೂಟ' ಮುಂತಾದ ಹೆಸರಿನಲ್ಲಿ ಮುಗಿಬೀಳುವ ಜನರಿಗೆ ವಂಚನೆ ಮಾಡುತ್ತಿದ್ದಾರೆ. ಹಳಸಲು ಜೋಕುಗಳನ್ನೇ ಎಳೆದು ಎಳೆದು ಚಿತ್ರಿಸುತ್ತಿದ್ದಾರೆ. ಮೂ... ಲೇಖಕರ ಹೆಸರನ್ನು ಹೇಳಬೇಕು ಎನ್ನುವ ಕನಿಷ್ಠ ಕಾಳ... ಯೂ ಇಂತಹವರಿಗಿಲ್ಲ. ಗುಣಮಟ್ಟ ಸುಧಾರಿ... ಕೊಳ್ಳದೇ ಹೋದರೆ ಹಾಸ್ಯ ಗೋಷ್ಠಿಗಳು ಹಾಸ್ಯಾಸ್ಪ... ಗೋಷ್ಠಿಗಳಾಗುವುದಕ್ಕೆ ಬಹಳ ದಿವಸಗಳು ಬೇಕಿಲ್ಲ...

ನಗರ ಪಟ್ಟಣಗಳಲ್ಲಿ ಇನ್ನೊಂದು ರೋ... ಪ್ರಾರಂಭವಾಗಿದೆ.

ಮುಂಜಾನೆಯೇ ಒಂದು ಕಡೆ ಸೇರುವುದು. ಹೀ... ಸೇರುವುದು-ನಗಲು! ದಿನ ನಿತ್ಯ ಮಾಡಲೇಬೇಕಾ... ಕರ್ತವ್ಯಗಳಲ್ಲಿ ಇದೂ ಒಂದು!

ಅಲ್ಲಿ ನಕ್ಕರೆ ಅಲ್ಲಿಗೆ ಮುಗಿಯಿತು ಅವರ 'ನಗ... ಕರ್ತವ್ಯ'. ಇಡೀ ದಿನ ಅವರ ಬಳಿ ನಗ... ಸುಳಿಯುವುದೂ ಇಲ್ಲ. ನಗುವುದಕ್ಕೆ ತಮ್ಮ ಘನ... ಗೌರವಗಳ ಅಡ್ಡಿ. ನಕ್ಕರೆ ತಮ್ಮನ್ನು ಲಘುವಾ... ಪರಿಗಣಿಸಿಯಾರು ಎಂಬ ಭಯ! ಇಲ್ಲಿ ಅದಕ್ಕೆ ಆಸ್ಪ... ಇಲ್ಲ. ಜನರು ಬರುವುದೇ ನಗುವುದಕ್ಕಾಗಿ ತಾನೆ!!

ಇಂತಹ ಕೂಟಗಳ ನಗುವನ್ನು ಖುಷವಂತ್‌ಸಿಂ... ಅವರು ಕತ್ತೆಗಳು ಒಂದು ಕಡೆ ಸೇರಿ ಅರಚಿದಂ... ಎನ್ನುತ್ತಾರೆ.


ಅಂದಹಾಗೆ ಉದ್ದೇಶ ರಹಿತವಾಗಿ ನಗುವವರನ್ನು ಹುಚ್ಚರು ಎನ್ನುತ್ತಾರೆ. ಇವರೆಲ್ಲರೂ ಗಾರ್ದಭೇಶ್ವ... ಸ್ವಾಮಿಯ ವರಪುತ್ರರೇ ಇರಬಹುದೇನೋ?!

-ಎಚ್.ಎಲ್. ಕೇಶವಮೂರ್ತಿ

ಕೋಳಿ ಜ್ವರವಲ್ಲ-ಹೊಣೆಗೇಡಿ ಸರಕಾರಗಳ ಸಂಚು

ತಮ್ಮ ಪತ್ರಿಕೆಯ ಜನವರಿ 4, 2006 ಸಂಚಿಕೆಯಲ್ಲಿ ಕೆ.ಐ.ಎ.ಡಿ.ಬಿ. ಮಾಫಿಯಾ ಬಗ್ಗೆ ಬರೆದಿದ್ದು ಸರಿಯಷ್ಟೆ. ಈ ರೀತಿಯ ಭೂ ಕಬಳಿಕೆ ಮತ್ತು ಫಲವತ್ತಾದ ಭೂಮಿಯನ್ನು ರೈತರಿಂದ ಕಸಿದುಕೊಂಡು ದೊಡ್ಡ ಶ್ರೀಮಂತರಿಗೆ ಹಂಚಿಕೆ ಮಾಡುವ ಕೆಲಸಗಳು ಬೆಂಗಳೂರು-ಮೈಸೂರು ಸುತ್ತ ಮುತ್ತಲೂ ಅಲ್ಲದೆ ದಾವಣಗೆರೆಯಲ್ಲೂ ಸಹ ನಡೆಯುತ್ತಿದೆ.

ಕೆ.ಐ.ಎ.ಡಿ.ಬಿ.ಯಲ್ಲಿ ಈ ಹಿಂದೆ ಭೂ ಸ್ವಾಧೀನಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದ ಪಾಂಡುರಂಗ ಎಂಬುವರು, ಮಾಜಿ ಸಚಿವರಾದ ಶಾಮನೂರು ಶಿವಶಂಕರಪ್ಪ ಮತ್ತು ಇವರ ಮಗ ಮಲ್ಲಿಕಾರ್ಜುನರೊಂದಿಗೆ ಸೇರಿಕೊಂಡು ನೀರಾವರಿ ಜಮೀನುಗಳನ್ನು ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರಕ್ಕಾಗಿ ಕೆ.ಐ.ಎ.ಡಿ.ಬಿ. ಮೂಲಕ ಭೂ ಸ್ವಾಧೀನ ಮಾಡುತ್ತಿದ್ದಾರೆ. ರಾಜ್ಯ ಮಟ್ಟದ ಸಭೆಯಲ್ಲಿ ತರಿ (irrigated land) ಜಮೀನುಗಳನ್ನು ಬಿಟ್ಟು, ಬೆಳೆ ಬೆಳೆಯಲು ಯೋಗ್ಯವಲ್ಲದ ಜಮೀನುಗಳನ್ನು ಭೂ ಸ್ವಾಧೀನ ಮಾಡಲು ಆದೇಶವಿದ್ದರೂ ಕೂಡ ಪಹಣಿ ಪತ್ರಿಕೆಗಳಲ್ಲಿ ಖುಷ್ಕಿ (dry land) ಎಂದು ತಿದ್ದಿ ನೀರಾವರಿ ಜಮೀನುಗಳನ್ನು ಭೂ ಸ್ವಾಧೀನ ಮಾಡಲು ಕ್ರಮ ತೆಗೆದುಕೊಂಡಿರುತ್ತಾರೆ.



ಈ ಬಗ್ಗೆ ತಾವು ಸೂಕ್ತವಾಗಿ ಪರಿಶೀಲಿಸಿ ವರದಿ ಪ್ರಕಟಿಸಲು ವಿನಂತಿಸುತ್ತೇವೆ.

ಶಿವಲಿಂಗಯ್ಯ, ದಾವಣಗೆರೆ

ಹೊಸ ತೀಗ ಆಕಿ

ಎಲ್ಲಡೆ ಕೋಳಿ ಜ್ವರದ ಬಗ್ಗೆ ಭಯ ಭೀತಿ ಇದ್ದಾಗ ವಾಸ್ತವವಾಗಿ ಅದು ಕೋಳಿ ಜ್ವರ ಅಲ್ಲವೇ ಅಲ್ಲ, ಬದಲಾಗಿ ನಮ್ಮ ಹೊಣೆಗೇಡಿ ಸರಕಾರಗಳು ಹೆಣೆದಿರುವ ಸಂಚು ಎಂಬುದನ್ನು ನಮ್ಮ ಪ್ರೀತಿಯ 'ಚಾರ್ವಾಕ' ಶಿವಸುಂದರ್ ರವರು ತೆರೆದಿಟ್ಟಿದ್ದಾರೆ. ಅವರಿಗೆ ಧನ್ಯವಾದಗಳು. ಆದರೆ ಧನ್ಯವಾಗಳನ್ನು ಹೇಳಿದರೆ ಮಾತ್ರ ಸಾಲದು, ಅದು ಕ್ರಿಯಾರೂಪ ಕೂಡ ಪಡೆಯಬೇಕು ಎಂದು ನಂಬಿರುವವನಾಗಿರುವುದರಿಂದ ನಾನು ಈ ಕೂಡಲೇ ಚಿಕನ್ ಬಿರ್ಯಾನಿ ತಿನ್ನಲು ಹೊರಟ್ಟಿದ್ದೇನೆ.

ವಿಜಯ್ ಕುಮಾರ್, ಕನಕಪುರ

ಮಾಜಿ ಪ್ರಧಾನಿ ದೇವೇಗೌಡರ ಮೂಢನಂಬಿಕೆಯ ಬುದ್ಧಿಯನ್ನು ರವೀಂದ್ರ ರೇಷ್ಮೆಯವರು 'ರಾಜೀವ್ ಗೆಲುವಿಗೆ ರವಿನಾರಾಯಣ ಕಟಾಕ್ಷ' ಲೇಖನದಲ್ಲಿ ಮತ್ತೊಮ್ಮೆ ಬಯಲು ಮಾಡಿದ್ದಾರೆ. ಹಾಗೆಯೆ ಅದೇ ಸಂಚಿಕೆಯಲ್ಲಿ ರಾ. ಸೋಮನಾಥ್‌ರವರು ದೇವೇಗೌಡರು ಮತ್ತು ಟೈಲ್ ಗಂಗಾಧರಸ್ವಾಮಿ ಮತ್ತೆ ಜೊತೆಗೂಡಿರುವುದರ ಬಗ್ಗೆ ಬರೆದು ಇವರಿಬ್ಬರ ಅವಕಾಶವಾದಿತನವನ್ನು ಹೊರ ಹಾಕಿದ್ದಾರೆ. ಇಂಥವರ ನಾಯಕತ್ವದಲ್ಲಿ ರಾಜ್ಯ ಉದ್ಧಾರವಾಗುವುದು ಎಂದು?

ಪುಷ್ಪ, ನೆಲಮಂಗಲ

ನಮ್ಮ ಹಳ್ಳಿಗಳಲ್ಲಿ ಅರಳಿಕಟ್ಟೆ ಕೆಳಗೆ ಕುಳಿತು ಇಸ್ಪೀಟ್ ಆಡುವ ಜನರನ್ನು ನೋಡಿದ್ದೆವು. ಆದರೆ ಈಗ ನಮ್ಮ ರಾಜಕಾರಣಿಗಳು ಗೋಲ್ಡ್‌ಫಿಂಚ್ ಎಂಬ ಇಸ್ಪೀಟ್ ಅಡ್ಡೆಯಲ್ಲಿ ಕುಳಿತು ಬಾಜಿ ಕಟ್ಟಿ ಗೆದ್ದರೆ ದುಡ್ಡು.... ಸೋತರೆ ಲೈವ್‌ಬ್ಯಾಂಡ್ ಗರ್ಲು ಎನ್ನುತ್ತಿದ್ದಾರೆ. ಮಾಜಿ ಸಚಿವರಿಬ್ಬರು ಈ ಅಡ್ಡೆಗಳಲ್ಲಿ ಮೋಜು ಮಾಡುವುದನ್ನು ತಿಳಿದು ನಮಗೆಲ್ಲಾ ದಿಗ್ಭ್ರಮೆ ಯಾಯಿತು.

-ತಿಪ್ಪೇಸ್ವಾಮಿ, ಮಂಗಳೂರು, ಕೊಪ್ಪಳ

ಸುಮ್ಮನೆ ಮತ್ತು ಹನ್ನೆರಡು ಮನೆ ಕುರಿತು:

ಕಳೆದ ಸಂಚಿಕೆಯಲ್ಲಿ ಇಬ್ಬರು ಭ್ರಷ್ಟ ಅಧಿಕಾರಿಗಳು ಲೋಕಾಯುಕ್ತರಿಗೆ ಸಿಕ್ಕಿ ಬಿದ್ದಿದ್ದರ ಬಗ್ಗೆ ಬರೆದಿದ್ದೆವು. ಆದರೆ ಆ ವರದಿಯಲ್ಲಿ ಸುಮ್ಮನೆ ಸಿದ್ಧನ ಮತ್ತು ಹನ್ನೆರಡುಮನೆ ಹನುಮಂತನ ಭಾವಚಿತ್ರಗಳ ಕ್ಯಾಪ್ಷನ್‌ಗಳು ಅದಲಿ ಬದಲಿ ಆಗಿದ್ದವು. ಇದನ್ನು ನೋಡಿ... ಆ ಖದೀಮರಿಗೆ ಅವಮಾನವಾಗಿರಬಹುದು. ... ಹಲವೊಮ್ಮೆ ಇಂತಹ ತಪ್ಪುಗಳು ಆಗುತ್ತವೆ ಎಂದು ಹೇಳಿ ಅವರಿಬ್ಬರೂ ಅನ್ಯಥಾ ಭಾವಿಸುವುದಿಲ್ಲವೆಂದು ಅಂದುಕೊಂಡಿದ್ದೇವೆ!

-ಜಿ. ಎಲ್

ಪ್ರೂಫ್ ರೀಡರ್ ಬೇಕಾಗಿದ್ದಾರೆ

'ಲಂಕೇಶ್' ಮತ್ತು 'ಗೈಡ್' ಪತ್ರಿಕೆಗಳಿಗೆ ಚೆನ್ನಾಗಿ ಕನ್ನಡ ಬಲ್ಲ, ದಕ್ಷತೆಯಿಂದ ಕೆಲಸ ಮಾಡುವ ಪ್ರೂಫ್ ರೀಡರ್ ತಕ್ಷಣವೇ ಬೇಕಾಗಿದ್ದಾರೆ. ಆಸಕ್ತಿ ಇರುವವರು ಕೂಡಲೇ ಅರ್ಜಿಯೊಂದಿಗೆ ಸಂಪರ್ಕಿಸಿ. (ಬೆಂಗಳೂರು ದಕ್ಷಿಣ ಭಾಗದಲ್ಲಿರುವವರಿಗೆ ಆದ್ಯತೆ)

ನಮ್ಮ ವಿಳಾಸ:
ನಂ.9, 1ನೇ ಮಹಡಿ, ಇ.ಎ.ಟಿ. ರಸ್ತೆ
ಬಸವನಗುಡಿ, ಬೆಂಗಳೂರು - 560 004.

'ದರ್ಶನ್ ಇನ್ ಡೇಂಜರ್' ಎಂದು ಇಡೀ ಗಾಂಧಿನಗರ ಈಗ ಮಾತಾಡಿಕೊಳ್ಳುತ್ತಿದೆ. ಇದಕ್ಕೆ ಕಾರಣ ಒಂದು ತಿಂಗಳ ಹಿಂದೆ ದರ್ಶನ್ ನಟಿಸಿದ್ದ 'ಸುಂಟರಗಾಳಿ' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಅಮೋಘವಾಗಿ ನುಗ್ಗರಿಸಿದ್ದು. ಇಲ್ಲಿಯವರೆಗೂ ಗೆಲ್ಲುವ ಕುದುರೆ ಎಂದೇ ಗುರುತಿಸಲಾಗಿದ್ದ ದರ್ಶನ್‌ನನ್ನು ಈ ಒಂದು ಸೋಲಿನಿಂದ ಗಾಂಧಿನಗರ ವಿಮರ್ಶಿಸುತ್ತಿದೆ.

...ದಕ್ಕೆ ಉತ್ತಮ ...ಹರಣೆ ದರ್ಶನ್ ...ರುವ 'ದತ್ತ' ಚಿತ್ರ ...ಗಡೆಗೆ ಸಿದ್ಧವಾಗಿದ್ದರೂ ...ಯುವರೆಗೆ ಅದರ ...ಟ'(ಬೆಂಗಳೂರು, ಕೋಲಾರ ...ತುಮಕೂರು) ...ಗಳು ಮಾರಾಟ ಆಗದೇ ...ವುದು. ದರ್ಶನ್-ರಮ್ಯ ...ದಲ ಬಾರಿಗೆ ಒಟ್ಟಿಗೆ ...ರುವ ಈ ಚಿತ್ರ ...ಹೂರ್ತದ ದಿನದಂದೇ ...ರಾಟವಾಗುತ್ತದೆ ಎಂದು ...ರೂ ಭಾವಿಸಿದ್ದರು. ...ದರೆ, ದರ್ಶನ್‌ನ ಎಲ್ಲಾ ...ನೂಗಳು ಬಿಡುಗಡೆಯ ...ನ್ನವೇ ವ್ಯಾಪಾರ ...ತ್ತಿದ್ದವು. ಆದರೆ ಈ ಬಾರಿ ...ನ್ ನಟಿಸಿದ ಚಿತ್ರಗಳ ...ಟಿ ಏರಿಯಾವನ್ನು ...ಮುಚ್ಚಿ ...ೇದಿಸುತ್ತಿದ್ದ ಜಯಣ್ಣ ...ದ ಈಗ 'ದತ್ತ' ...ವನ್ನು ಖರೀದಿಸಲು ...ನಾಮೇಷಾ ...ಸುತ್ತಿದ್ದಾರೆ. ಇದೆಲ್ಲದಕ್ಕೆ ...ರು ...ೇರಿಸುತ್ತಿರುವುದು ...ಟರಗಾಳಿ'ಯ ಸೋಲು.



ದರ್ಶನ್ ಇನ್ ಡೇಂಜರ್!

ಈ ಮಧ್ಯೆ ದರ್ಶನ್ ಮತ್ತು ಸುದೀಪ್ ನಡುವಿನ ಪೈಪೋಟಿ ...ನ್ನೂ 'ದತ್ತ' ಮಾರಾಟ ಆಗದೇ ಇರುವುದರೊಂದಿಗೆ ...ವರು ತಳಕು ಹಾಕುತ್ತಿದ್ದಾರೆ. ಆದರೆ 'ಸುಂಟರಗಾಳಿ' ...ತಿರುವುದಕ್ಕೂ, 'ಆಟೋಗ್ರಾಫ್' ಗೆದ್ದಿರುವುದಕ್ಕೂ ಯಾವುದೇ ...ಲ್ಲ. ಹಾಗೆ ನೋಡಿದರೆ 'ಸುಂಟರಗಾಳಿ' ಚಿತ್ರ ಸೋತಿದ್ದರೂ ...ು ಗಳಿಸಿರುವಷ್ಟು ಹಣವನ್ನು 'ಆಟೋಗ್ರಾಫ್' ಗಳಿಸಿಲ್ಲ. ಇದು ...ತ್ಯವ.

ಈ ಹಿನ್ನೆಲೆಯಲ್ಲಿ ನೋಡಿದರೆ, ದರ್ಶನ್ ಸೋಲಿಗೆ ಮುಖ್ಯ ...ಣ ಆತನ ಪಾತ್ರಗಳ ಆಯ್ಕೆ ಎಂದೇ ಹೇಳಬಹುದು. ಅದೇ ...ಟ್ಟು, ಅದೇ ಲಾಂಗು, ಅದೇ ಡೈಲಾಗ್‌ಗಳನ್ನು ದರ್ಶನ್‌ನ ...ಲ್ಲಾ ಚಿತ್ರಗಳಲ್ಲೂ ಕಾಣಬಹುದು. ಈ ಮೂರು ಅಂಶಗಳೇ ...ಗ ದರ್ಶನ್ ಪಾಲಿಗೆ ಶತ್ರುಗಳಾಗಿವೆ. ಕಳೆದ ಎರಡು ವರ್ಷಗಳಿಂದ ದರ್ಶನ್ ನಟಿಸಿರುವ ಬಹುತೇಕ ಚಿತ್ರಗಳು ಈ ಮೂರು ಮಸಾಲಾ ಅಂಶಗಳ ಸುತ್ತ ಗಿರಕಿ ಹೊಡೆದಿರುವುದರಿಂದ ಈಗ ಆತನ ಅಭಿಮಾನಿಗಳಲ್ಲೂ ಬೇಸರ ಹುಟ್ಟಿಸಲಾರಂಭಿಸಿವೆ.

ಈ ಅಂಶವನ್ನು ದರ್ಶನ್ ಮನಗಂಡು, ಕಥೆಗಳ ಆಯ್ಕೆಯಲ್ಲಿ ಸ್ವಲ್ಪ ಎಚ್ಚರ ವಹಿಸಿದರೆ ದರ್ಶನ್ ಮತ್ತೆ ಲೈಮ್‌ಲೈಟ್‌ಗೆ ಬಂದೇ ಬರುತ್ತಾರೆ. ಯಾಕೆಂದರೆ ದರ್ಶನ್ ಚಿತ್ರಗಳನ್ನು ಖರೀದಿಸಿರುವ ಯಾವುದೇ ಹಂಚಿಕೆದಾರನಿಗೆ ಇಲ್ಲಿಯವರೆಗೂ ಮೋಸವಾಗಿಲ್ಲ. ಅಷ್ಟೇ ಅಲ್ಲಾ ಆತನ 'ಸ್ವಾಮಿ', 'ಶಾಸ್ತ್ರಿ', 'ಮಂಡ್ಯ' ಮೊದಲಾದ ಚಿತ್ರಗಳು ಮುಹೂರ್ತದ ದಿನದಂದೇ ಮಾರಾಟವಾಗಿದ್ದವು. ಇತ್ತೀಚೆಗೆ ಕನ್ನಡದ ಯಾವ ನಟನ ಚಿತ್ರಗಳೂ ಆ ರೀತಿ ಮುಹೂರ್ತದ ದಿನವೇ ಮಾರಾಟವಾಗಿಲ್ಲ.

'ಶಾಸ್ತ್ರಿ' ಚಿತ್ರ ಗೆದ್ದಾಗ, 'ಸ್ವಾಮಿ' ಚಿತ್ರ ಮೆರೆದಾಗ, 'ಕಲಾಸಿಪಾಳ್ಯ' ಆರ್ಭಟಿಸಿದಾಗ, 'ಮಂಡ್ಯ' ಕ್ರೇಜ್ ಕ್ರಿಯೇಟ್ ಮಾಡಿದಾಗ ದರ್ಶನ್ ತಾರಾಮೌಲ್ಯ ಏರುತ್ತಾ ಹೋಗಿತ್ತು.

ಆದರೆ ಈ ಗೆಲುವುಗಳ ಹೊರತಾಗಿಯೂ ಒಂದೇ ಒಂದು ಚಿತ್ರ ಮುಗ್ಗರಿಸಿದ್ದೇ ತಡ, ದರ್ಶನ್ ಸೀಟು ಅಲ್ಲಾಡ ತೊಡಗಿದೆ, ಆತ ಡೇಂಜರಸ್ ಪೊಸಿಶನ್‌ನಲ್ಲಿದ್ದಾನೆ ಎಂದು ಗಾಂಧಿನಗರವೇ ಮಾತನಾಡುತ್ತಿದೆ.

ಇದು ಒಂದು ರೀತಿಯಲ್ಲಿ ದರ್ಶನ್ ಪಾಲಿಗೆ ಎಚ್ಚರಿಕೆಯ ಗಂಟೆ. ಈಗ ದರ್ಶನ್ ಎಚ್ಚೆತ್ತುಕೊಳ್ಳದಿದ್ದರೆ ಮುಂದೆ ಅಪಾಯ ಕಟ್ಟಿಟ್ಟ ಬುತ್ತಿ. ದರ್ಶನ್ ಒಳ್ಳೆಯ ಪರ್ಸನಾಲಿಟಿ ಹೊಂದಿರುವ ನಟ ಮಾತ್ರ ಅಲ್ಲ, ತಾನೊಬ್ಬ ಉತ್ತಮ ನಟ ಕೂಡ ಎಂಬುದನ್ನು ಈ ಮಚ್ಚು, ಲಾಂಗ್ ಹಿಡಿಯುವ ಮೊದಲೇ 'ನನ್ನ ಪ್ರೀತಿಯ ರಾಮು' ಚಿತ್ರದಲ್ಲಿ ತೋರಿಸಿದ್ದಾನೆ.

ದರ್ಶನ್ ಇಂದು ಕವಲುದಾರಿಯಲ್ಲಿರುವಂತೆ ಕಂಡರೂ ಸದ್ಯಕ್ಕೆ ಆತನಿಗೆ ಯಾರೂ ಪ್ರತಿಸ್ಪರ್ಧಿ ಇಲ್ಲವೇ ಇಲ್ಲ. ಆದರೂ ಆತ ಈಸಿಯಾಗಿ ಇರದೆ, ಸ್ವಲ್ಪ ಮುಂಜಾಗ್ರತೆ ವಹಿಸಿದರೆ ಆತನಿಗೇ ಒಳ್ಳೆಯದು.

–ಶೆಣೈ


ಶಾಟ್ ಕಟ್

ಅಮಿತಾಭ್ 54 ಲವ್ವರು 18

ರಾಮುಗೋಪಾಲ್ ವರ್ಮಾನ 'ನಿಶಬ್ದ್' ಚಿತ್ರದಲ್ಲಿ 54 ರ ಪಾತ್ರಧಾರಿ ಅಮಿತಾಭ್ 18 ರ ವಯಸ್ಸಿನ ಹೀರೋಯಿನ್ ಜಿಯಾಳನ್ನು ಲವ್ ಮಾಡುತ್ತಾನಂತೆ!

ವ್ಲಾಡಿಮೇರ್ ನಕೊಬೊವ್‌ನ 'ಲೋಲಿಟಾ' ಕಾದಂಬರಿ ಆಧಾರಿತ ಚಿತ್ರದ ರೀಮೇಕ್ ಈ 'ನಿಶಬ್ದ್.' 'ಲೋಲಿಟಾ' ಕಾದಂಬರಿ ಪ್ರಖ್ಯಾತವಾಗಿದ್ದರೂ ಅದು 44 ರ ನಾಯಕ 14 ರ ಹುಡುಗಿಯೊಂದಿಗೆ ಕಾಮಕೇಳಿ ನಡೆಸುವ ಕತೆಯಾಗಿದ್ದಿದ್ದರಿಂದ, ಅಮೆರಿಕಾದಲ್ಲಿ 'ಲೋಲಿಟಾ' ಎಂಬ ಇಂಗ್ಲಿಷ್ ಸಿನಿಮಾ ಬ್ಯಾನ್ ಆಗಿತ್ತು, ಅದೇ ಕತೆ ಈಗ ಹಿಂದಿಯಲ್ಲಿ ಬರುತ್ತಿದೆ.

ಇಲ್ಲೂ ವರ್ಮಾ-ಅಮಿತಾಭ್‌ರ ಈ 'ನಿಶಬ್ದ್' ಒಂದಿಷ್ಟು 'ಶಬ್ದ' ಮಾಡುವುದು ಖಂಡಿತ!



ಮೊನ್ನೆ ತರುಣ್ ತಿಹಿಲಿಯಾನಿಯ ಫ್ಯಾಷನ್ ಶೋದಲ್ಲಿ ರ್‍ಯಾಂಪ್ ಮೇಲೆ ಕರಾವಳಿ ಕುವರಿ, ಜಿರಾಫೆ ಸುಂದರಿ ಶಿಲ್ಪಾ ಶೆಟ್ಟಿ ನಡೆದು ಬಂದಾಗ ಶುದ್ಧ ಗೌರಮ್ಮನಂತೆ ಕಾಣುತ್ತಿದ್ದಳು.

ಆದರೆ ಆಕೆ ತಿರುಗಿ ಹೋಗುವಾಗ ಇಡೀ ಪ್ರೇಕ್ಷಕ ಸಮೂಹ 'ಹೋ' ಎನ್ನತೊಡಗಿತು. ಮುಂದೆ 'ಚೋಲಿ'ಯಲ್ಲಿ ಗೌರಮ್ಮನಂತಿದ್ದ ಶಿಲ್ಪಿ, ಹಿಂದುಗಡೆ ಖಾಲಿ ಖಾಲಿ ಬೆನ್ನಿನ ಸೆಕ್ಸಿ ಪೋರಿ ಆಗಿದ್ದಳು!

ಮುಚ್ಚಿದ ಎದೆ ಮತ್ತು ಬೆತ್ತಲು ಬೆನ್ನು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂಬುದು ಡ್ರೆಸ್ ಡಿಸೈನರ್‌ನ ತತ್ವವೇನೊ?



ಹನುಮಾನ್ ಕಾರ್ಟೂನ್!

ಈಗ ಪುಟಾಣಿಗಳ ಮನ ತಣಿಸಲು 'ಹನುಮಾನ್ II ಬರ್‍ತಾ ಇದ್ದಾನೆ. ಕಳೆದ ವರ್ಷದ ಭಾರತದ ಮೊದಲ ಅನಿಮೇಷನ್ ಕಾರ್ಟೂನ್ ಚಿತ್ರ 'ಹನುಮಾನ್' 15 ಕೋಟಿ ಲಾಭ ಗಳಿಸಿದ್ದು ತಿರುವನಂತಪುರಂನ ಪರ್ಸೆಪ್ಟ್ ಪಿಕ್ಚರ್ ಕಂಪನಿಗೆ ಹುಮ್ಮಸ್ಸು ತಂದು 'ಹನುಮಾನ್ II' ತಯಾರಿಸಲಾಗುತ್ತಿದೆ. ಇದರಲ್ಲಿ ಕಲಿಯುಗಕ್ಕೆ ಎಂಟ್ರಿ ಹಾಕುವ (ಹಾರುವ?) ಹನುಮಂತ ಈ ಆಧುನಿಕ ಯುಗದ ಮಕ್ಕಳ ಜೊತೆಗೂಡಿ ಸಮಾಜದ ಕೆಟ್ಟ ಶಕ್ತಿಗಳನ್ನು ಫಿನಿಶ್ ಮಾಡುತ್ತಾನಂತೆ.

ಭಾರತದಲ್ಲಿ 15 ವರ್ಷದ ಕೆಳಗಿನ ಪೋರ ಪೋರಿಯರು 35 ಕೋಟಿಯಷ್ಟಿರುವುದರಿಂದ 'ಹನುಮಾನ್ II' ಹಾರಾಟಕ್ಕೇನೂ ತೊಂದರೆ ಇಲ್ಲ.

ಸಂತೋಷಿ ಮಾಗೆ ಮತ್ತೆ ಜೈ



'ಹನುಮಾನ್' ಕಾರ್ಟೂನ್ ಚಿತ್ರ ಮಾಡುತ್ತಿರುವ ಪರ್ಸೆಪ್ಟ್ ಪಿಕ್ಚರ್‌ನವರೇ 1975ರ ಮೂಢನಂಬಿಕೆಯ ಮೂರಾಬಟ್ಟೆ ಚಿತ್ರ 'ಜೈ ಸಂತೋಷಿಮಾ'ವನ್ನು ಬೆಳ್ಳಿತೆರೆಗೆ ರಿಮೇಕ್ ಮಾಡುವ ಮೂರ್ಖ ನಿರ್ಣಯವನ್ನು ಮಾಡಿದ್ದಾರೆ. ರಾಮ್‌ಗೋಪಾಲ್ ವರ್ಮಾ 'ಶೋಲೆ'ಯನ್ನು, ಡೇವಿಡ್ ಧವನ್ 'ಅಮರ್ ಅಕ್ಬರ್ ಅಂಥೋನಿ' ಯನ್ನು, ಫರ್ಹಾನ್ ಅಖ್ತರ್ 'ಡಾನ್'ನ್ನು ರಿಮೇಕ್ ಮಾಡುತ್ತಿರುವ ಈ ವೇಳೆಯಲ್ಲಿ ಪುನ್ಹಾಸ್ತೆ ಸಂತೋಷಿಮಾ 'ಮಾ ಸಂತೋಷಿ ಮಾ' ಆಗಿ ತಲೆ ತಿನ್ನಲು ಬರುತ್ತಿದ್ದಾಳೆ.



2.30 ರಾತ್ರಿ... ಕಿಸ್ಸೊಂದರ ಖಾತ್ರಿ

ರಾತ್ರಿ 2.30 ರ ಸಮಯ. 9 ಫೂಟ್ ಎತ್ತರದಿಂದ ಸುರಿಯುವ ವಾಟರ್ ಫಾಲ್ಸ್.... ಅಲ್ಲೊಂದು ಬಾಲಿವುಡ್ ಕಿಸ್! ಎಲ್ಲ ಬಗೆಯ ಕಿಸ್ ಸಾಹಸಗಳಿಗೆ ಕೈ ಹಾಕುತ್ತಿರುವ (ಬಾಯಿ ಹಾಕುತ್ತಿರುವ ಎಂದು ಓದಿಕೊಳ್ಳಬಹುದು!) ಬಾಲಿವುಡ್ ಈಗ ಇಂತಹ ಒಂದು ರಿಸ್ಕಿ ಕಿಸ್‌ನಲ್ಲಿ ಯಶಸ್ವಿಯಾಗಿದೆ. ಅನುರಾಗ್ ಬಸುನ 'ಗ್ಯಾಂಗ್‌ಸ್ಟರ್' ಚಿತ್ರಕ್ಕಾಗಿ ಇಂತಹ ಚುಂಬನದೀ ಬಂಧಿಯಾದವರು ಕಂಗನಾ ರಾನಾಟ್ ಮತ್ತು ಕಿಸ್ ಮಾಡಲೆಂದೇ ಜನಿಸಿರುವ ಎಮ್ರಾನ್ ಹಷ್ಮಿ.

ಅಂತಹಾ ಚುಮುಚುಮು ರಾತ್ರಿಯಲ್ಲೂ ಈ ಕಿಸ್ ಒಂದೇ ಟೇಕ್‌ನಲ್ಲಿ ಚಿತ್ರಿತವಾಗುವುದೆಂದು ಅನುರಾಗ್ ಬಸುಗೆ ಮೊದಲೇ ಖಾತ್ರಿ ಇತ್ತಂತೆ!

ಇದನ್ನು fishy kiss ಎನ್ನಬಹುದೇ ಸಂಪಾದಾಯಕರೇ?

ಪ್ರಶಸ್ತಿಗಳ ಪ್ರವಾಹ


ಗಾಂಧಿನಗರದಲ್ಲಿ ಇದೀಗ ಅವಾರ್ಡ್‌ಗಳ ಸುಗ್ಗಿ.

ಮೊನ್ನೆ ರಾಮನಗರದಲ್ಲಿ ರಾಜ್ಯ ಚಲನಚಿತ್ರ ಪ್ರಶಸ್ತಿ ಎಂಬ ಎಡವಟ್ಟು ಸಮಾರಂಭ ನಡೆಯಿತು. ಅದರ ಮರುದಿನವೇ ಬೆಂಗಳೂರಿನ ಅರಮನೆ ಮೈದಾನ ಆವರಣದಲ್ಲಿ ಈಟೀವಿ ವಾಟಿಕಾ ಪ್ರಶಸ್ತಿ ಅದ್ದೂರಿಯಾಗಿ ನಡೆಯಿತು. ಅದಾದ ನಂತರ ಹಣ ಇದ್ದ ಕೆಲವರು ಆರ್ಯಭಟ ಪ್ರಶಸ್ತಿಯನ್ನು ಕೊಂಡುಕೊಂಡರು. ಇದೀಗ ...ಇದ್ದು ಹದಿನಾರರಂದು ಇನ್ನೊಂದು ಪ್ರಶಸ್ತಿ ಸಮಾರಂಭ ...ಡೆಯುತ್ತಿದೆ. ಅಂದು ಒಟ್ಟು ಒಂಭತ್ತು ಜನ ಸಿನಿಮಾ ...ಂಗದ ಸಾಧಕರು ಪ್ರಶಸ್ತಿ ಸ್ವೀಕರಿಸಲಿದ್ದಾರೆ.



ಈ ಪ್ರಶಸ್ತಿಯನ್ನು ವ್ಯವಸ್ಥೆ ಮಾಡಿರುವವರು 700 ...ಚಿತ್ರಗಳಿಗೆ ಪ್ರಚಾರಕರ್ತರಾಗಿ ಕೆಲಸ ಮಾಡಿರುವ ಸುಧೀಂದ್ರ. ...ವರೊಂದಿಗೆ ವಿಷ್ಣುವರ್ಧನ್, ಭಾರ್ಗವ, ಪಟ್ಟಾಭಿರಾಮನ್, ...ಯಮಾಲಾ, ಬಿ. ಸುರೇಶ್, ಟಿ.ಎನ್. ಸೀತಾರಾಂ ಕೈ ...ಜೋಡಿಸಿರುವುದರಿಂದ ಈ ಸಮಾರಂಭಕ್ಕೆ ಹೆಚ್ಚು ...ಹತ್ವವಿದೆ. ಅಲ್ಲಿ ಪ್ರೀತಿ, ವಿಶ್ವಾಸ, ಪರಸ್ಪರ ಗೌರವದ ...ತಾವರಣ ಇರುವುದರಿಂದ ಉದ್ದಮದ ಹೆಚ್ಚು ಜನ ...ರುವ ನಿರೀಕ್ಷೆ ಇದೆ. ಸ್ನೇಹಜೀವಿ ಸುಧೀಂದ್ರ ಅವರ ಈ ...ಯತ್ನ ಸಿಹಿಕಹಿ ಸ್ವಾಗತೀಯವು.

ಗರಣಿಯ ಗಿರಣಿ



'ಶುಭಂ' ಚಿತ್ರದ ನಿರ್ಮಾಪಕರ ಹೆಸರು ನಂದರಾಜ್ ಶೆಟ್ಟಿ. ಆದರೆ ಜಾಹೀರಾತಿನಲ್ಲಿ ಶಾರ್ಟ್ ಆಗಿ ಎನ್.ಆರ್. ಶೆಟ್ಟಿ ಎಂದಿದೆ.

'ಶುಭಂ' ಚಿತ್ರದ ಬಗ್ಗೆ ವಿಮರ್ಶಕರಲ್ಲಿ ವಿಭಿನ್ನ ಅಭಿಪ್ರಾಯಗಳಿರಬಹುದು. ಆದರೆ ಒಬ್ಬ ಹೊಸ ನಿರ್ಮಾಪಕ ರೀಮೇಕ್ ಮಾಡದೇ ಎರಡು ವರ್ಷಗಳಿಂದ ಈ ಪ್ರಯೋಗಾತ್ಮಕ ಚಿತ್ರಕ್ಕಾಗಿ ಹಣ ಸುರಿದದ್ದನ್ನು ಮೆಚ್ಚಬೇಕು. ಅದೂ ಈ ಚಿತ್ರದ ಮುಖಾಂತರ ರವಿ. ಆರ್. ಗರಣಿ ಎಂಬ ಯುವ ನಿರ್ದೇಶಕನನ್ನು ಪರಿಚಯಿಸಿದ ಕೀರ್ತಿಯೂ ಅವರಿಗೇ ಸಲ್ಲುತ್ತದೆ. ಆ ನಿಟ್ಟಿನಿಂದ ಅವರ ಚಿತ್ರರಂಗದ ಎಂಟ್ರಿ 'ಶುಭಂ' ಎನ್ನಬಹುದು. ಶಿವಧ್ವಜ್ ಹೊಸ ಗೆಟಪ್ಪಿನಲ್ಲಿ ತನ್ನ ಶಕ್ತಿ ಮೀರಿ ನಟಿಸಿದ್ದಾರೆ.



ಹೊಸಬರ ಹೊಸ ಪ್ರಯತ್ನ, ಹೊಸ ನಿರೂಪಣಾ ಶೈಲಿಯನ್ನು ದೃಷ್ಟಿಯಲ್ಲಿಟ್ಟು ಹೇಳುವುದಾದರೆ, ನಿರ್ಮಾಪಕ ಎನ್.ಆರ್. ಶೆಟ್ಟಿಗೂ ನಿರ್ದೇಶಕ ರವಿ ಗರಣಿಗೂ ಉಜ್ವಲ ಭವಿಷ್ಯವಿದೆ ಅನ್ನಬಹುದು. ಆದರೆ ಶುಭಂ ಚಿತ್ರದ ಅರ್ಧ ಗಂಟೆಯಷ್ಟು ಭಾಗ ಕತ್ತರಿಸಿ ಹಾಕಿದ್ದರೆ ಚಿತ್ರ ಹಿಟ್ ಆಗುತ್ತಿತ್ತೇನೋ.

R.B.P. LANKESH, Kannada Weekly Price Rs. 10/- 19-4-2006 RNI No. KARKAN2005/14648 Regd.No.KA/BG(S)/2036/2005-07

ನಿಮ್ಮ ಜೊತೆ ಶಿವಣ್ಣ



ನಿಮ್ಮ ನೆಚ್ಚಿನ 'ಲಂಕೇಶ್' ಒಂದು ವರ್ಷ ಸಂಪೂರ್ಣ ಗೊಳಿಸಿರುವ ಈ ಸಂದರ್ಭದಲ್ಲಿ ನಮ್ಮ ಓದುಗರಿಗೆ ಏನಾದರೂ ಹೊಸತನ್ನು ನೀಡಬೇಕು ಎಂದು ಚಿಂತಿಸುತ್ತಿದ್ದಾಗಲೇ ನಮ್ಮ ಮನಸ್ಸಿಗೆ ಬಂದದ್ದೇ ಶಿವರಾಜ್‌ಕುಮಾರ್!

ಯಾಕೆ ಶಿವರಾಜ್‌ಕುಮಾರ್?!

ಇದಕ್ಕೆ ಹಲವಾರು ಕಾರಣ ಗಳಿವೆ. ಶಿವರಾಜ್‌ಕುಮಾರ್ ರವರು ವರನಟ ರಾಜ್‌ಕುಮಾರ್ ರವರ ಪುತ್ರ, ಕನ್ನಡ ಚಿತ್ರರಂಗ ಕಂಡಿರುವ ಯಶಸ್ವಿ ನಾಯಕ ನಟ ಎಂಬ ಕಾರಣಗಳೊಂದಿಗೆ, ಅವರು ಸ್ನೇಹಿತಿಕೆ ಮತ್ತು ಸರಳತೆಯನ್ನು ಉಳಿಸಿಕೊಂಡಿರುವ ನಟ ಕೂಡ ಎಂಬುದೂ ನಮಗೆ ಅಷ್ಟೇ ಮುಖ್ಯ.

ರೀಮೇಕ್‌ಗಳಿಗೆ, ಸುಲಭದ ಯಶಸ್ಸಿಗೆ ನಮ್ಮ ಚಿತ್ರರಂಗದ ಗಣ್ಯರು ಶರಣಾಗುತ್ತಿರುವಾಗ ಶಿವರಾಜ್‌ಕುಮಾರ್ ರೀಮೇಕ್‌ಗಳಲ್ಲಿ ನಟಿಸುವುದಿಲ್ಲ ಎಂದು ಹೇಳಿ ತಮ್ಮ ಅಂತರಂಗದ ಕಲಾವಿದನಿಗೆ ಗೌರವ ನೀಡಿದ್ದಾರೆ. ಅಷ್ಟೇ ಅಲ್ಲ, ತಮ್ಮ ಇಮೇಜಿಗೆ ಶರಣಾಗದೇ ಪ್ರಾಯೋಗಿಕ ಚಿತ್ರಗಳಲ್ಲೂ, ಫಾರ್ಮುಲಾ ರಹಿತ ಸಿನಿಮಾಗಳಲ್ಲೂ ನಟಿಸಿ ಸೈ ಎನಿಸಿಕೊಂಡಿದ್ದಾರೆ. ಸೋಲಿನಿಂದ ಕುಗ್ಗದ, ಯಶಸ್ಸಿನಿಂದ ಹಿಗ್ಗದ ಶಿವರಾಜ್‌ಕುಮಾರ್ ಚಿತ್ರದಿಂದ ಚಿತ್ರಕ್ಕೆ ಸೂಕ್ಷ್ಮ ನಟನಾಗಿಯೂ, ಹಿಟ್ ಸಿನಿಮಾ ನೀಡುವ ಸ್ಟಾರ್ ಆಗಿಯೂ ಬೆಳೆದಿದ್ದಾರೆ ಎಂಬುದಕ್ಕೆ ಇತ್ತೀಚಿನ 'ಜೋಗಿ' ಚಿತ್ರ ಒಂದು ಉದಾಹರಣೆ.

ನಿಜ ಹೇಳಬೇಕೆಂದರೆ, ಶಿವರಾಜ್‌ಕುಮಾರ್‌ರವರ ಹಲವು ಚಿತ್ರಗಳನ್ನು ಮಾತ್ರ ನೋಡಿರುವ ನಾನು ಅವರನ್ನು ಎಂದೂ ಭೇಟಿ ಆಗಿಲ್ಲ. ಆದರೆ ಅವರ ನಯ, ವಿನಯ, **professionalism**, ಪಾತ್ರಕ್ಕೆ ನ್ಯಾಯ ಒದಗಿಸಬೇಕೆಂಬ ಹಂಬಲದ ಬಗ್ಗೆ ತುಂಬಾ ಕೇಳಿದ್ದೇನೆ. ಈ ಕಾರಣಗಳಿಂದಲೇ ಏನೋ ಅವರ ಪರಿಚಯ ಇಲ್ಲದಿದ್ದರೂ ಅವರನ್ನು ಕಲಾವಿದನಾಗಿ, ಸಜ್ಜನ ವ್ಯಕ್ತಿಯಾಗಿ ಮೆಚ್ಚಿದ್ದೇನೆ. ಅವರನ್ನು ಒಮ್ಮೆ ಭೇಟಿಯಾದ ನನ್ನ ತಂಗಿ ಬೇಬಿ (ಕವಿತಾ ಲಂಕೇಶ್) ಅಂದೇ ಅವರ ಸರಳತೆಯನ್ನು ಮೆಚ್ಚಿದ್ದಳಲ್ಲದೆ, 'ಜೋಗಿ' ನೋಡಿದ ನಂತರ 'ಶಿವರಾಜ್‌ಕುಮಾರ್ ಅಭಿನಯ **superb** ಆಗಿದೆ' ಅಂದಿದ್ದಳು.

ಸ್ಟಾರ್ ಆಗಿ ಅಪಾರ ಅಭಿಮಾನಿಗಳನ್ನು ಗಳಿಸಿರುವ, ನಟನಾಗಿ ವಿಮರ್ಶಕರ ಅಭಿನಂದನೆಗಳನ್ನು ಪಡೆದಿರುವ ಶಿವರಾಜ್‌ಕುಮಾರ್‌ರವರ ಆತ್ಮಕಥೆ ನಮ್ಮ-ನಿಮ್ಮ ಈ ಪತ್ರಿಕೆಯಲ್ಲಿ ಬಂದರೆ ಹೇಗೆ ಎಂದು ಯೋಚಿಸಿದೆವು. ಇದರ ಬಗ್ಗೆ ನಮ್ಮ ಸಿನಿಮಾ ವರದಿಗಾರ ಸದಾಶಿವ ಶೆಣೈರವರು ಶಿವರಾಜ್‌ಕುಮಾರ್‌ರವರನ್ನು ಸಂಪರ್ಕಿಸಿದಾಗ ಅವರು ಕೂಡ ಸಂತೋಷದಿಂದ ಒಪ್ಪಿಕೊಂಡರು.

ಇದೆಲ್ಲದರ ಪ್ರತಿಫಲವಾಗಿ ಸದ್ಯದಲ್ಲೇ ಶಿವರಾಜ್‌ಕುಮಾರ್‌ರವರ ಆತ್ಮಕಥೆಯನ್ನು 'ಲಂಕೇಶ್'ನಲ್ಲಿ ಸದಾಶಿವ ಶೆಣೈ ನಿರೂಪಿಸಲಿದ್ದಾರೆ. ವರನಟ ರಾಜ್‌ಕುಮಾರ್‌ರವರ ಮಗನಾಗಿ, ಕನ್ನಡ ಚಿತ್ರರಂಗದ ಹ್ಯಾಟ್ರಿಕ್ ಹೀರೋ ಆಗಿ, ಸೂಕ್ಷ್ಮ ಸಂವೇದನೆಯ ನಟನಾಗಿ ಶಿವರಾಜ್‌ಕುಮಾರ್ ತಮ್ಮ ಜೀವನಾನುಭವವನ್ನು ನಿಮ್ಮ ಮುಂದೆ ತೆರೆದಿಡಲಿದ್ದಾರೆ.

ಇಲ್ಲಿ ಒಂದು ಮಾತನ್ನು ಹೇಳಬೇಕು ಅನ್ನಿಸುತ್ತಿದೆ. ಗಣ್ಯರ ಮಕ್ಕಳಾಗಿ ಬೆಳೆಯುವುದೆಂದರೆ ಹಲವು ರೀತಿಯಲ್ಲಿ ತುಂಬಾ ಒತ್ತಡವನ್ನು ಅನುಭವಿಸುವುದೆಂದೇ ಅರ್ಥ. ನಾನೂ ಇದನ್ನು ಕಂಡಿದ್ದೇನೆ. ನಾವು ಏನೇ ಮಾಡಿದರೂ ನಮ್ಮ ತಂದೆಗೆ ಹೋಲಿಸುತ್ತಾರೆ. ಅವರಿಗೆ ತಕ್ಕ ಮಕ್ಕಳಾಗಿದ್ದೇವೆಯೋ ಇಲ್ಲವೋ ಎಂದು ಪ್ರತಿ ಹಂತದಲ್ಲೂ ಅಳೆಯುತ್ತಿರುತ್ತಾರೆ. ಇದನ್ನೆಲ್ಲ ಶಿವರಾಜ್‌ಕುಮಾರ್ ಹೇಗೆ ಎದುರಿಸಿದರು ಎಂಬುದರಿಂದ ಹಿಡಿದು, ಅವರ ಜೀವನದ **emotional, sentimental, challenging** ಕ್ಷಣಗಳ ಬಗ್ಗೆಯೂ ಹೇಳುತ್ತಾರೆಯೇ ಎಂದು ನಿಮ್ಮಂತೆಯೇ ನಾನೂ ಕುತೂಹಲದಿಂದ ಕಾಯುತ್ತಿದ್ದೇನೆ.

'ಲಂಕೇಶ್' ವಾರಪತ್ರಿಕೆಯ ಹೊಸ ಅಂಕಣಕಾರರಾಗಿ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್‌ರವರನ್ನು ಸ್ವಾಗತಿಸುತ್ತಾ,

-ನಿಮ್ಮ

ಗೌರಿ ಲಂಕೇಶ್



'ಅಜಯ್' ಚಿತ್ರದಲ್ಲಿ ಅನು ಮೆಹ್ತಾ

ವಿವಿಧ 'ಭಾವನೆ'!




"ಭಾವನಾ ತಮಿಳು ಮತ್ತು ಮಲೆಯಾಳಂನಲ್ಲಿ ಸಿಕ್ಕಾಪಟ್ಟೆ ಬ್ಯುಸಿ ಆಗಿದ್ದಾಳೆ. ಆಕೆ ಇದೇ ರೀತಿ ಸಾಗಿದರೆ ತಮಿಳಿನ ಈಶಾ ತರಹ ಮೆರೆಯುವ ಸಾಧ್ಯತೆಯಿದೆ" ಎಂದು ಟೈಮ್ಸ್ ಆಫ್ ಇಂಡಿಯಾ ಭಾವನಾಳ ಫೋಟೋ ಹಾಕಿ ಎರಡೆರಡು ಸಾರಿ ಬರೆದಿದೆ. ತಮಿಳಿನ ಈಶಾ ಎಂದರೆ ಅದೇನು ಸಾಧಾರಣ ವಿಷಯವೇನಲ್ಲ. ಆಕೆ ಸದ್ಯಕ್ಕೆ ಚಿತ್ರವೊಂದಕ್ಕೆ ಒಂದು ಕೋಟಿ ರೂಪಾಯಿ ಸಂಭಾವನೆ ಪಡೆಯುತ್ತಿರುವ ನಟಿ.

"ಕನ್ನಡದ ಈ ಹುಡುಗಿ ಬಾಲಿವುಡ್‌ಗೆ ಹೋಗಿ ಅಮಿತಾಭ್ ಬಚ್ಚನ್ ಜೊತೆ ನಟಿಸಿದ ನಂತರ ಆಕೆಯ ಅದೃಷ್ಟ ಖುಲಾಯಿಸಿದೆ" ಎಂದು ಈ ಆಂಗ್ಲ ಪತ್ರಿಕೆ ಬರೆದಿದೆ.

ಆದರೆ ವಾಸ್ತವ ವಿಷಯವೇ ಬೇರೆ. 'ಫ್ಯಾಮಿಲಿ' ಚಿತ್ರದ ನಂತರ ಹೊಸ ಅವಕಾಶಕ್ಕಾಗಿ ಭಾವನಾ ಇನ್ನೂ ಬಾಲಿವುಡ್‌ನಲ್ಲಿ ಪ್ರಯತ್ನ ನಡೆಸುತ್ತಲೇ ಇದ್ದಾಳೆ. ಈ ಮಧ್ಯೆ ತಮಿಳು ಮತ್ತು ಮಲೆಯಾಳಂನಲ್ಲಿ ನಿಜಕ್ಕೂ ಬ್ಯುಸಿಯಾಗಿರುವ ನಟಿಯ ಹೆಸರೂ ಭಾವನಾ. ಆದರೆ ಅವಳು ನಮ್ಮ ಭಾವನಾ ಅಲ್ಲ, ಬದಲಾಗಿ ಆಕೆ ಮಲೆಯಾಳಂ ನಟಿ ಭಾವನಾ. ಆದರೆ ಇಂಗ್ಲಿಷ್ ಪತ್ರಿಕೆಯವರು ಕನ್ನಡದ ಭಾವನಾಳ ಫೋಟೋ ಹಾಕಿ ರೀಮು ಗಟ್ಟಲೆ ಕನ್ನಡದ ಭಾವನಾಳೇ ಈ ಮಲೆಯಾಳಿ ಭಾವನಾ ಎಂಬಂತೆ ಬರೆಯುತ್ತಲೇ ಇದ್ದಾರೆ. ಈ ಗೊಂದಲವನ್ನು ನಿರಾಕರಿಸಲೂ, ಸ್ವಾಗತಿಸಲೂ ಆಗದ ಭಾವನಾ ದೂರದ ಮುಂಬೈಯಲ್ಲಿ ಇನ್ನೂ ಹೊಸ ಅವಕಾಶಗಳಿಗಾಗಿ ತಿಣುಕಾಡುತ್ತಲೇ ಇದ್ದಾಳೆ.

ಪ್ರೇಮ್-ಪ್ರಸಾದ್ ರೇಸು



ಗಾಂಧಿನಗರದಲ್ಲಿ ಈ ತರಹದ ಸ್ಪರ್ಧೆ, ದ್ವೇಷ, ಅಸೂಯೆ ಹೊಸದೇನಲ್ಲ. ಇದು ಆಗಾಗ್ಗೆ ನಡೆಯುತ್ತಲೇ ಇರುತ್ತ... 'ಜೋಗಿ' ಖ್ಯಾತಿಯ ... ಮತ್ತು ಗೀತರಚನೆ ಕಾರ ನಿರ್ದೇಶಕ ನಾಗೇಂದ್ರ ಪ್ರಸಾದ್ ನಡುವೆ ಅಂತಹ ಪೈಪೋಟಿ ನಡೆಯುತ್ತಿದೆ. ಅಫ್‌ಕೋರ್ಸ್ ಇದೊಂದು ಆರೋಗ್ಯಪೂರ್ಣ ಸ್ಪರ್ಧೆ ಎಂಬುದೇ ಸಮಾಧಾನ... ಸಂಗತಿ.

ಪ್ರೇಮ್ ನಿರ್ದೇಶನದ 'ಕರಿಯ' ಮತ್ತು 'ಎಕ್ಸ್‌ಕ್ಯೂ... ಮಿ' ಚಿತ್ರಗಳು ಸೂಪರ್ ಹಿಟ್ ಆಗಲು ಹಾಡುಗಳ... ಚೆನ್ನಾಗಿ ಮೂಡಿ ಬಂದದ್ದೇ ಕಾರಣ ಎಂದು ನಾಗೇಂ... ಪ್ರಸಾದ್ ಅನೇಕ ಕಡೆಗಳಲ್ಲಿ ಹೇಳಿದ್ದುಂಟು. ಆದ... ಪ್ರೇಮ್ ಆ ಬಗ್ಗೆ ಎಲ್ಲೂ ಬಾಯಿ ಬಿಡುತ್ತಿಲ್ಲ ಎಂಬುದ... ನಾಗೇಂದ್ರ ಪ್ರಸಾದ್ ಆರೋಪವಾಗಿತ್ತು.

ಇದರ ಸೈಡ್ ಎಫೆಕ್ಟ್ ಏನಾಯಿತು ಅಂದರೆ, 'ಜೋಗಿ' ಚಿತ್ರದ ಸಮಯದಲ್ಲಿ ಹಾಡು ಬರೆಯಲು ನಾಗೇಂದ್ರ ಪ್ರಸಾದ್... ಪ್ರೇಮ್‌ನಿಂದ ಬುಲಾವ್ ಹೋಗಲೇ ಇಲ್ಲ, ಹಾಗೆ ಜಾಣತನದಿಂ... ಅವರನ್ನು ಡ್ರಾಪ್ ಮಾಡಿದ ಪ್ರೇಮ್ ಸ್ವತಃ ತಾವೇ ಹಾಡು... ಬರೆದರು. ಚಿತ್ರ ಹಿಟ್ ಆಯ್ತು; ಹಾಡುಗಳೂ ಹಿಟ್ ಆದವು.



ಅಷ್ಟಕ್ಕೆ ನಾಗೇಂದ್ರ ಪ್ರಸಾದ್ ಸುಮ್ಮನೆ ಕುಳಿತುಕೊಳ್ಳುವ ಜಾಯಮಾನದವರಲ್ಲ. ಸುದೀಪ್‌ನನ್ನು ಹಾಕಿಕೊಂಡು 'ಸಲ್ಲ' ಎಂಬ ಸಿನಿಮಾ ತೆಗೆದರು. ಅದು ಅಷ್ಟೊಂದು ಕ್ಲಿಕ್ ಆಗಲಿಲ್ಲ. ಅದಾದ ನಂತರ 'ತುಂಟ.. ತುಂಟಿ' ಎಂಬ ಇನ್ನೊಂದು ಚಿತ್ರ ಕೈಗೆತ್ತಿಕೊಂಡರು. ಅದು ಕಂಪ್ಲೀಟ್ ಆಗ... ಇಲ್ಲ. ಈಗ ಅವರ ನಿರ್ದೇಶನದ 'ಅಂಬಿ' ಚಿತ್ರ ತೆರೆಗೆ ಸಿದ್ಧವಾಗಿ... 'ಅಂಬಿ' ಗೆದ್ದರೆ ಒಂದು ರೀತಿಯಲ್ಲಿ ನಾಗೇಂದ್ರ ಪ್ರಸಾದ್ ಪರೋಕ್ಷವಾ... ಪ್ರೇಮ್ ವಿರುದ್ಧ ಗೆದ್ದಂತೆ.

ಆದರೆ ದುರಾದೃಷ್ಟವಶಾತ್ ಇವರು ಬರೆದ ಎರಡು ಹಾಡುಗಳ... ಸೆನ್ಸಾರ್‌ನವರು ರಿಜೆಕ್ಟ್ ಮಾಡಿ ಪುನಃ ಬೇರೆ ಹಾಡುಗಳನ್ನು ಬರೆ... ಮಾತ್ರ ಗೀತರಚನೆಕಾರ ನಾಗೇಂದ್ರ ಪ್ರಸಾದ್‌ಗೆ ಶೋಭೆ ತರುವಂಥ... ಅಲ್ಲ. ಸಿನಿಮಾ ಮಾಸ್ ರೀಚ್ ಆಗಬೇಕೆಂಬ ದೃಷ್ಟಿಯಿಂದ ಇವ... ಮಸಾಲಾ ಸಾಂಗ್ ಬರೆದು ಎಡವಟ್ಟು ಮಾಡಿಕೊಂಡಿದ್ದಾರೆ.

'ಪೂಜಾರಿ' ಕೈಲೂ ಮಚ್ಚು... ಇದು too much



ಕನ್ನಡ ಚಿತ್ರರಂಗಕ್ಕೆ ಮತ್ತೊಬ್ಬ ಹೀರೋ... ಆಗಮನವಾಗುತ್ತಿದೆ. ಆತನ ಹೆಸರು ಆ... ಲೋಕೇಶ್.

'ಜೋಗಿ' ಚಿತ್ರದ ಬಿದ್ದ ಪಾತ್ರದ... ಶಿವರಾಜ್‌ಕುಮಾರ್‌ಗೆ ನಟನೆಯಲ್ಲಿ ಪೈಪೋ... ನೀಡಿದ ಈ ಆದಿ ಲೋಕೇಶ್ ಬೇರೆ ಯಾರೂ ಅಲ್ಲ; ಈಗಾಗ... ಕಿರುತೆರೆ, ಹಿರಿ ತೆರೆಯಲ್ಲಿ ಹೆಸರು ಮಾಡಿರುವ ಪವಿತ್ರಾ ಲೋಕೇ... ಸಹೋದರ. ಈತ ನಟಿಸುತ್ತಿರುವ ಚಿತ್ರದ ಹೆಸರು 'ಪೂಜಾರಿ'. ಹಾಗ... ಇದು ಒಂದು ಸಾಮಾಜಿಕ ಚಿತ್ರವೆಂದು ಭಾವಿಸಬೇಡಿ. ಚಿತ್ರ... ಜಾಹೀರಾತಿನಲ್ಲಿ ಹೀಗಿದೆ: "ಕ್ಲಾಸ್ ಆಗಿ ಬಂದ್ರೆ ಭಕ್ತಿಲಿ ಪೂಜೆ, ಮಾ... ಆಗಿ ಬಂದ್ರೆ ಮಚ್ಚಲ್ಲಿ ಪೂಜೆ..."

ಈ ಸಾಲುಗಳನ್ನು ನೋಡಿದರೆ ಇದೊಂದು ಮಚ್ಚಿನ ಚಿತ್ರ ಎಂದ... ಸುಲಭವಾಗಿ ಊಹಿಸಬಹುದು.

ಕಲಾವಿದರ ಕುಟುಂಬದಿಂದ ಬಂದಿರುವ ಆದಿ ಬರೀ ಮಚ... ಚಿತ್ರಗಳಿಗಷ್ಟೇ ಸೀಮಿತವಾಗದಂತೆ ಅಕ್ಕ ಪವಿತ್ರಾ ಲೋಕೇ... ಮಾರ್ಗದರ್ಶನ ನೀಡಿದರೆ ಒಳ್ಳೆಯದು.

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 2667642.. Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44